ಡಿಕ್ಷನರಿ ಮಾಡಬೇಕೆನ್ನುವವರು ಪೋಲೀಸರಲ್ಲಿಗೆ ಹೋಗಬೇಕು. ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಪೋಲೀಸ್ ಇಲಾಖೆಗೆ ಆಂಬ್ಯುಲೆನ್ಸ್ ಎಷ್ಟಿದೆ ಎಂದರೆ ದು ಊರು ಇವೆ. ಎಲ್ಲಾದರೂ ಒಂದು ಕೊಲೆ ಆಯಿತು ಎಂದರೆ ಅವರು ಪಾಪ ಬಾಡಿಗೆ ವಾಹನದ ಮೇಲೆ ಹೋಗಬೇಕು. ಆದ್ದರಿಂದ ಕನಿಷ್ಠ ಒಂದು ಜಿಲ್ಲೆಗಾದರೂ ಒಂದರಂತೆ ಆಂಬ್ಯುಲೆನ್ಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಳೆ ಬಂದಾಗ ಟಪ್ಪೆಗಳು ಹೇಗೆ ರೋಕ್ ರೋಕ್ ಎಂದು ನೀರು ಬರಲಿ ಮಳೆ ಬರಲಿ ಎಂದು ಒದರುವಂತೆ ಪೋಲೀಸರು ರೊಕ್ಕ ರೊಕ್ಕ ಎಂದು ಒದರುತ್ತಾರೆ. ಅಧ್ಯಕ್ಷರೇ ಈ ಆನ್ಯುಯಲ್ ರಿಪೋರ್ಟ್‌ನಲ್ಲಿ ಮಾನ್ಯ ವಲ್ಲಭರಾವ ಪಾಟೀಲರು ಸಂಕೇಶ್ವರದಲ್ಲಿ ಐದಾರು ದಿವಸ ಉಪವಾಸ ಮಾಡಿದ್ದರ ಬಗ್ಗೆ ಒಂದು ಶಬ್ದವೂ ಇಲ್ಲ. ಯಾವ ಜನರ ಸಲುವಾಗಿ ಹೋರಾಟ ಮಾಡಿ ಅಪತ್ತಿನಲ್ಲಿದ್ದ ೭೦ ಜನರ ಜೀವ ಉಳಿಸಿದರೋ ಅವರ ಬಗ್ಗೆ ಒಂದು ಶಬ್ದವೂ ಇಲ್ಲ. ಅಟ್‌ಲೀಸ್ಟ್ ಒಂದು ರೆಫರೆನ್ಸ್‌ನಾದರೂ ಕೊಡಬೇಕಾಗಿತ್ತು. ಇಂತಹ ವರದಿ ಏಕೆ ಬೇಕು ? ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ ಅಟ್‌ಲೀಸ್ಟ್ ಶಾಸಕರು ಇಂತಹ ಒಂದು ಕೆಲಸ ಮಾಡಿದಾಗ ಅವರ ಬಗ್ಗೆ ಸಹಾನುಭೂತಿಯಿಂದ ಈ ವರದಿಯಲ್ಲಿ ನಮೂದು ಮಾಡಬೇಕು. ಮುಂದಿನ ಸಲ ಇದನ್ನು ಮಾಡಿ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ತಾಲ್ಲೂಕುಗಳಲ್ಲಿ ಪ್ರವಾಸ ಮಾಡುತ್ತೇನೆ ಹಾಗೂ ರಾಜ್ಯದಲ್ಲಿ ಪ್ರವಾಸ ಮಾಡುತ್ತೇನೆಂದು ಹೇಳಿದರು. ಎಷ್ಟು ತಾಲ್ಲೂಕಿನಲ್ಲಿ ತಿರುಗಾಡಿದ್ದೀರಿ ? ಸುಳ್ಳು ಏಕೆ ಹೇಳುತ್ತೀರಿ ! ಎಷ್ಟು ಕೆಲಸ ಮಾಡುವುದಕ್ಕಾಗುತ್ತದೆಯೋ ಅಷ್ಟನ್ನು ಹೇಳಬೇಕು ಅದು ಬಿಟ್ಟು ಇದು ಮಾಡುತ್ತೇವೆ ಅದು ಮಾಡುತ್ತೇವೆಂದು ಹೇಳಬಾರದು. ಮತ್ತು ಎಲ್ಲಿ ಗಲಭೆಯಾಗುತ್ತದೆ ಎಲ್ಲಿ ತೊಂದರೆಗಳಾಗುತ್ತವೆ ಅಲ್ಲಿಗೆ ಹೋಗಿ ಅದನ್ನು ಪರಿಹರಿಸಲಿಕ್ಕೆ ತಾವು ಕಾರಣೀಭೂತರಾಗದ ಹೊರತಾಗಿ ನಾವು ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ನಿಯಮ ೬೯ರ ಪ್ರಕಾರ ಅಲ್ಪಕಾಲಾವಧಿ ಚರ್ಚೆ.

ನಿಯಮ ೬೯ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ರೇವಜೀತ್ ಬಿಲ್ಡರ್ಸ್ ಸಂಸ್ಥೆಯವರು ಬೆಂಗಳೂರಿನ ಜಯನಗರದಲ್ಲಿ ಕಡಿಮೆ ಬೆಲೆ ತೋರಿಸಿ ಜಮೀನು ಖರೀದಿ ಮಾಡಿ ಸರ್ಕಾರೀ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ನಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದು ತಾವು ಅದನ್ನು ನಿಯಮ ೬೯ಕ್ಕೆ ಕನ್‌ವರ್ಟ್ ಮಾಡಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ತಮಗೆ ಧನ್ಯವಾದಗಳು. ಇದು ಒಂದು ಪಬ್ಲಿಕ್ ಇಂಟರೆಸ್ಟ್‌ಗೆ ಸಂಬಂಧಪಟ್ಟ ವಿಷಯವಾದುದರಿಂದ ಮತ್ತು ಈ ವಿಚಾರ ಸ್ವಲ್ಪ ಗಡಿಬಿಡಿಯಾಗಿರುವುದರಿಂದ ಇದಕ್ಕೆ ಇಷ್ಟೊಂದು ಇಂಪಾರ್ಟೆನ್ಸ್ ಬಂದಿದೆ. ರೇವಜೀತ್ ಎನ್ನುವ ಕಂಪನಿ ಬೆಂಗಳೂರು ಸೌತ್ ತಾಲ್ಲೂಕು, ದಾಸರಹಳ್ಳಿ ವಿಲೇಜ್ ಜಯನಗರದ ಹತ್ತಿರ ಏನು ಭೂಮಿಯನ್ನು ಕೊಂಡು ಕೊಂಡಿದೆ ಸರ್ವೆ ನಂ. ೬/೧ ಮತ್ತು ಸರ್ವೆ ನಂ. ೬/೨ ಮೆಷರ್‌ಮೆಂಟ್ ೫,೨೪. ನಾರಾಯಣಸ್ವಾಮಿ ಅಂಡ್ ಸನ್ಸ್ ಎಂಬುವವರಿಂದ ಜಯನಗರ ಸೌತ್ ಎಂಡ್ ಸರ್ಕಲ್‌ನಲ್ಲಿರತಕ್ಕಂತಹ ರೆವಿನ್ಯೂ ಲ್ಯಾಂಡ್ ಅನ್ನು ಕೊಂಡು ಕೊಂಡಿದ್ದಾರೆ. It was sold and registered on 30th September 1987 after office hours. ಅದಕೋಸ್ಕರ ಇದಕ್ಕೆ ಇಷ್ಟೊಂದು ಮಹತ್ವ ಬಂದಿರುವುದು. ಇದನ್ನು ಕೊಂಡು ಕೊಂಡಿರುವವರು ಯಾರು ಎಂದರೆ ರೇವಜೀತ್ ಬಿಲ್ಡರ್ಸ್ ಅಂಡ್ ಡೆವಲಪರ್ಸ್. Executed by Smt: Shobha Makheeja *i. e.* the sister of the first son-in-law of the Chief Minister.

SRI VEDANTA HEMMIGE.—I am on a point of order. Allow me to raise my point of order. Point allow me to speak. A writ petition has been filed before the Karnataka High Court.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ನೀವು ನಮ್ಮ ಮಾತು ಕೇಳುವುದಿಲ್ಲ. ನಿನ್ನೆ ಶ್ರೀಮತಿ ನಾಗರತ್ನಮ್ಮನವರು ಏನು ಮಾತನಾಡಿದರು, ಮಾನ್ಯ ಖರ್ಗೆಯವರು ಏನು ಮಾತನಾಡಿದರು, ಮಾನ್ಯ ಧರ್ಮಸಿಂಗ್‌ರವರು ಏನು ಮಾತನಾಡಿದರು ಈ ಎಲ್ಲಾ ವಿಷಯಗಳೂ ಕೂಡ ಈ ರಿಟ್ ಪಿಟಿಷನ್ ಏನು ಇದೆ ಅದರಲ್ಲಿ ಅಡಕವಾಗಿದೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಸ್ವಲ್ಪ ಕೇಳಬೇಕು.Extent of land in undervaluation Para No.6 upto Para No. 15, Sale of the larger extent of exempted land Para No.9 Regulationship of partners of the firm to the Chief Minister Para 4 to 12, violation of urban land ceiling Act para 9-33-34-43-49b-49c, Under valuation of registration of stamp para 15, vidation of the land reforms Act para42, violation of the income-tax Act, para 28-49b, benami nature of transaction. para 49E, political pressure Para 31. The writ petition there is a prayer to declare the sale deed on 9. 1987 executed by Sri Narayana Swamy in favour of 6 respondents null and void as all these matters are included in the W. p. ನಿನ್ನೆ ಏನು ಮಾತನಾಡಿದರು, ಎಲ್ಲವೂ ಕೂಡಾ ಆ ರಿಟ್ ಪಿಟಿಷನ್‌ನಲ್ಲಿ ಅಡಕವಾಗಿದೆ. ಇನ್ನು ಇತರೇ ವಿಷಯಗಳು ಅಡಕವಾಗಿದೆ. ಆದ್ದರಿಂದ ನಿನ್ನೆ ತಾವು ಒಂದು ರೂಲಿಂಗ್ ಕೊಟ್ಟಿರಿ. ಇಲ್ಲಿ ಇಲ್ಲದೇ ಇರತಕ್ಕಂಥ ವಿಷಯ ಯಾವುದೇ ಇದ್ದರೆ ಅದನ್ನು ಮಾತನಾಡಲಿಕ್ಕೆ ಸೆಕ್ಷನ್ ಓರರಲ್ಲಿ ತಾವು ಅವಕಾಶವನ್ನು ಕೊಡುತ್ತೇವೆ ಎಂದು ತಾವು ಹೇಳಿದಿರಿ. The matter which they have already commenced all are included in the Writ petition and as such, nothing should be allowed to discuss in this matter since it becomes subjudice. That is my point of order.

(INTERRUPTIONS)

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಲಕ್ಷೀಸಾಗರ್‌ರವರು ಇದರ ಬಗ್ಗೆ ವಿವರಣೆಯನ್ನು ಹೇಳಿದರು. Yesterday it was told and rejected by the Speaker.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಶ್ರೀಮಾನ್ ಲಕ್ಷೀಸಾಗರ್‌ರವರು ಇದನ್ನು ಪಾಯಿಂಟ್-ಔಟ್ ಮಾಡಿದರು. ಅದು ಆದಮೇಲೆ ಸಂಬಂಧಪಟ್ಟಂತ ಕೋರ್ಟಿನ ರಿಟ್ ಪಿಟಿಷನ್ ಕೂಡಾ ನಮ್ಮ ಹತ್ತಿರ ಇದೆ. ತಾವು ಕೂಡಾ ರೂಲಿಂಗ್‌ನ್ನು ಓದಿ ಹೇಳಿದಿರಿ. ಅದು ಏನೆಂದರೆ ಯಾವ ವಿಷಯ ಇದರಲ್ಲಿ ಸಬ್-ಜುಡೀಸ್ ಆಗುವುದಿಲ್ಲ, ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಏನೂ ತೊಂದರೆ ಇಲ್ಲ, ಅದನ್ನು ನೀವು ಪ್ರಸ್ತಾಪ ಮಾಡಬಹುದು ಎಂದು ತಾವು ರೂಲಿಂಗ್ ಕೊಟ್ಟಮೇಲೆ ರೂಲ್ ಓರ ರ ಪ್ರಕಾರ ತಾವು ಇವತ್ತು ಡಿಸ್ಕಷನ್‌ಗೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದಕ್ಕೆ ಪುನಃ ಅದೇ ಪ್ರಶ್ನೆಯನ್ನು ಪಾಯಿಂಟ್ ಆಫ್ ಆರ್ಡರ್ ಎತ್ತತಕ್ಕಂಥ ಅವಶ್ಯಕತೆ ಇಲ್ಲ. ಒಂದು ಸಾರಿ ತಾವು ರೂಲಿಂಗ್ ಕೊಟ್ಟಿದ್ದೀರಿ, ಆ ರೂಲಿಂಗ್ ಪ್ರಕಾರ ಡಿಸ್‌ಕಷನ್ ಫಿಕ್ಸ್ ಮಾಡಿದ್ದೀರಿ, ಟೈ ಮ್‌ಫಿಕ್ಸ್ ಮಾಡಿದ್ದೀರಿ, ಇವತ್ತು ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು. ಪಾಯಿಂಟ್ ಆಫ್ ಆರ್ಡರ್ ಅದರಲ್ಲಿ ಏನೂ ಇಲ್ಲ. ಹೊಸದು ಏನೂ ಇಲ್ಲ. ನಿನ್ನೆ ಲಕ್ಷೀಸಾಗರ್‌ರವರು ಏನು ಹೇಳಿದ್ದರೋ ಅದನ್ನೇ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ರೂಲಿಂಗ್ ಏನು ಇದೆ, ಅದರ ಪ್ರಕಾರ ಹೋಗಲಿಕ್ಕೆ ಒಪ್ಪಿಕೊಂಡರೆ ಸರಿ. ಹೈಕೋರ್ಟಿನ ಮುಂದೆ ಇರತಕ್ಕಂಥ ವಿಷಯಗಳನ್ನು ಬಿಟ್ಟು ಬೇರೆ ವಿಚಾರಗಳನ್ನು ಪ್ರಸ್ತಾಪಮಾಡಬಹುದು ಎಂದು ತಾವು ಹೇಳಿದಿರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರಜೀಜ್ ಕೇಸ್ ಹೈಕೋರ್ಟಿನಲ್ಲಿ ಇಲ್ಲವಲ್ಲಾ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ.........

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವುಗಳು ಮಾತನಾಡಿ ನನ್ನನ್ನು ಕನ್‌ಫ್ಯೂಸ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಾನು ಕನ್‌ಫ್ಯೂಸ್ ಆಗುವುದಿಲ್ಲ ಏನಾದರೂ ಮಾತನಾಡಿ ಗಲಾಟೆ ಮಾಡಿ ಕನ್‌ಫ್ಯೂಸ್ ಮಾಡುವುದು ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಇಚ್ಛೆ ಅದಲ್ಲ. ನಿಮ್ಮ ಕನ್‌ಫ್ಯೂಷನ್‌ಗಿಂತ ಕ್ಲಾರಿಟಿ......

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರ ಉದ್ದೇಶವೇ ಅದು. ಯಾವಾಗ ನೋಡಿದರೂ ಓ ಎಂದು ಕೂಗತಕ್ಕಂಥದ್ದು, ಕನ್‌ಫ್ಯೂಸ್ ಮಾಡುವುದೇ ಅವರ ಉದ್ದೇಶ, ಯಾವಾಗಲೂ ಅವರ ಉದ್ದೇಶವೇ ಹಾಗೆ. ಅದು ಮೈಸೂರಿನಿಂದ ಅಭ್ಯಾಸ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ನಮ್ಮಂಥವರು ಕೂಗುವ ಹೊತ್ತಿಗೆ ನೀವು ಆ ಕಡೆ ಬಂದಿರುವುದು, ನಮ್ಮಂಥವರು ನಲವತ್ತು ವರ್ಷಗಳಿಂದ ಕೂಗುವ ಹೊತ್ತಿಗೆ ನೀವು ಆ ಸೀಟ್‌ಗೆ ಹೋಗಿದ್ದೀರಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಕನ್‌ಫ್ಯೂಸ್ ಮಾಡುವ ಇಚ್ಛೆ ನಮಗೆ ಇಲ್ಲ. ಸಭಾಪತಿಗಳ ರೂಲಿಂಗ್ ಚೌಕಟ್ಟಿನಲ್ಲಿ ಚರ್ಚೆಯಾಗಲೀ ಎಂದು ಹೇಳುತ್ತಿದ್ದೇವೆ.

ಶ್ರೀ ಎಂ. ರಘುಪತಿ.—ಏನು ಬೇಕಾದರೆ ಚರ್ಚೆ ಮಾಡಲಿ, ಚರ್ಚೆಗೆ ಯಾರು ಅಡ್ಡಿ ಮಾಡುವುದಿಲ್ಲ. ಆದರೆ ತಾವು ಏನು ರೂಲಿಂಗ್‌ನ್ನು ಕೊಟ್ಟಿದ್ದೀರಿ, ಯಾವ ಮ್ಯಾಟರ್-ಸಬ್-ಜುಡೀಸ್ ಆಗುವುದಿಲ್ಲವೋ ಅದನ್ನು ಬಿಟ್ಟು ಹೇಳಿ, ಅದನ್ನು ಬಿಟ್ಟು ಏನ್ಬಾದರೂ ಹೇಳಲಿ.

(ಗೊಂದಲ)

ಶ್ರೀ ಟಿ. ಸ್ವಾಮಿರಾವ್.—ಅಧ್ಯಕ್ಷರಿಗೆ ಪಾಠ ಹೇಳುವುದು ಒಂದು ಹೊಸ ಕಾರ್ಯಕ್ರಮ. ಅಧ್ಯಕ್ಷರಿಗೆ ಪಾಠವನ್ನು ಹೇಳುವುದು ಶುರು ಆಗಿದೆಯಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಏನು ಎತ್ತಿದ್ದಾರಲ್ಲಾ, ಸಬ್-ಜುಡೀಸ್ ಇದ್ದಾಗ ಚರ್ಚೆ ಮಾಡಬಾರದು ಎನ್ನತಕ್ಕಂಥದ್ದಕ್ಕೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಕೇಳಿ, ಸ್ವಲ್ಪ, ಭಾಗಶಃ ಅದನ್ನು ಎತ್ತಿ ಹಿಡಿದಿದ್ದೇನೆ ಎಂದು ಹೇಳಿದ್ದೇನೆ. Again I will give a ruling.

(INTERRUPTIONS)

ಅಧ್ಯಕ್ಷರು.—ನಾನು ನಿನ್ನೆ ಏನು ರೂಲಿಂಗ್ ಕೊಟ್ಟಿದ್ದೇನೆ ಅಂದರೆ The committee of presiding officers has considered the scope of the rule of sub-judice and recommended the following: Point No. 7: In case of linked matters part of which is sub judice and part not subjudice debate can be allowed on the matters which not subjudice. ಅದಕ್ಕೆ ಒಳಪಟ್ಟು ನೀವು ಸಬ್ ಜುಡಿಸ್‌ಗೆ ಬಾಧೆ ಬರದ ರೀತಿಯಲ್ಲಿ ಮಾತನಾಡಿ. ಅವರದ್ದು ಭಾಗಶಃ ಎತ್ತಿ ಹಿಡಿದಿದ್ದೇನೆ. ಆ ಮೇಲೆ ೬ ಜನ ಹೆಸರು ಕೊಟ್ಟಿದ್ದೀರಿ, ಒಬ್ಬೊಬ್ಬರಿಗೆ ೧೦ ನಿಮಿಷ ಅಂದರೆ ೬೦ ಮಿನಿಟ್ ಆಗುತ್ತವೆ. ನನ್ನ ಪವರ್ಸ್ ಇರುವ ಪ್ರಕಾರ ಒಂದು ಗಂಟೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನಗೆ ಹಾಗೆ ಮಾತನಾಡಲು ಚಪಲ ಇಲ್ಲ. ನಾನು ಮಾತನಾಡಿಕೊಂಡೇ ಇರಬೇಕೆಂಬ ಉದ್ದೇಶವೂ ಇಲ್ಲ.

ಅಧ್ಯಕ್ಷರು.—ಸ್ವಲ್ಪ ತಾಳಿ ಮೇಡಮ್,

"The speaker may allot two sitting in a week on which such matters may be taken up for discussion under rule 68 and allow such time for discussion not exceeding one hour at or before the end of the sitting, as he may consider appropriate in the circumstances".

೫-೧೦ಕ್ಕೆ ಚಾಲೂ ಆಗಿದೆ, under rule 68 I have fixed10 minutes for each member.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—೫-೧೦ಕ್ಕೆ ಎಲ್ಲಿ ಚಾಲೂ ಆಗಿದೆ? ನಾನು ನಿಂತೇ ಇದ್ದೇನೆ, ಅವರೇ ತೆಗೆದುಕೊಂಡು ಗಲಾಟೆ ಮಾಡಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಏನೋ ಹೇಳುತ್ತಾರೆ ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೀಗೆ ಎದ್ದು ಸಹಾಯ ಮಾಡುವುದಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ಮಾನ್ಯ ಖರ್ಗೆಯವರು ಏನು ಹೇಳಿದ್ದಾರೆ ಆ ವಿಚಾರವನ್ನು ನಾನು ಹೇಳುತ್ತೇನೆ. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ವಾಯಿಲೇಷನ್ ಇದೆ. ಹೈಕೋರ್ಟ್ ಜಡ್ಜ್‌ಮೆಂಟ್ ಮುಂದೆ ಯಾವ ಆಲಿಗೇಷನ್ ಮಾಡಿದ್ದಾರೆ ಅದರ ವಿಷಯ ಮಾತನಾಡುವುದು ಬೇಕಿಲ್ಲ, ಆಡಳಿತಾತ್ಮಕವಾಗಿ ನೀವು ಮಾತನಾಡುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಅಂದರೆ ಹೈಕೋರ್ಟ್ ಮುಂದೆ ಇದ್ದ ವಿಚಾರಗಳನ್ನು ಎತ್ತುವುದಿಲ್ಲ. ಅಡ್ಮಿನಿಸ್ಟ್ರೇಟೀವ್ ಮ್ಯಾಟರ್ಸ್ ಲ್ಯಾಪ್ಸ್ ಹೇಳುತ್ತೇನೆ ಎಂದಿದ್ದಾರೆ, ಅದಕ್ಕೆ ಅಂಟಿಕೊಂಡಿದ್ದರೆ ಸಾಕು.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ಈಗ ಮಾನ್ಯ ಬೊಮ್ಮಾಯಿಯವರು ಏನು ಹೇಳಿದ್ದಾರೆ, ಆ ಚೌಕಟ್ಟಿನಲ್ಲಿ ಮಾತನಾಡಿದರೆ ಈ ಕಡೆಯಿಂದ ಯಾರೂ ಪಾಯಿಂಟ್ ಆಫ್ ಆರ್ಡರ್ ಎತ್ತುವುದಿಲ್ಲ.

ಶ್ರೀ ಎಂ. ರಘುಪತಿ.—ಶ್ರೀಮಾನ್ ಖರ್ಗೆಯವರು ಹಾಕಿದ ಗೈಡ್‌ಲೈನ್ಸ್......

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಬೊಮ್ಮಾಯಿಯವರು ಹಾಕಿದ ಅರ್ಬನ್ ಲ್ಯಾಂಡ್ ಸೀಲಿಂಗ್. ರಿಪೋರ್ಟ್......

ಅಧ್ಯಕ್ಷರು.—ವ್ಯಾಪ್ತಿ ಮೀರಿ ಮಾತನಾಡಿದರೆ ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೆ. ಆದುದರಿಂದ ವ್ಯಾಪ್ತಿ ಮೀರದೆ ಮಾತನಾಡುವುದು ಒಳ್ಳೆಯದು, ಇಲ್ಲದಿದ್ದರೆ ಪಾಯಿಂಟ್ ಆಫ್ ಆರ್ಡರ್ ಎತ್ತಿ ಸುಮ್ಮನೆ ಗಲಾಟೆ ಆಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರ ಉದ್ಯೋಗವೇ ಅದು.

ಶ್ರೀ ಆರ್. ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಆರು ಮಂದಿಯಲ್ಲಿ ನೀವೂ ಒಬ್ಬರು ಇದ್ದೀರಿ, ನಿಮಗೂ ಅವಕಾಶ ಕೊಡುತ್ತೇನೆ. ಶ್ರೀಮತಿನಾಗರತ್ನಮ್ಮನವರೇ ಮಾತನಾಡಿ.

ಶ್ರೀ ಆರ್. ಧರ್ಮಸಿಂಗ್.—ಅಡ್ಮಿನಿಸ್ಟ್ರೇಟೀವ್ ವಿಷಯವನ್ನೇ ಮಾತನಾಡುತ್ತೇವೆ. ಎಲ್ಲಿ ಸಬ್ ಜುಡೀಸ್ ಆಗುತ್ತದೆ ಎಂದು ಗುರುತು ಮಾಡಿ ಬೆಲ್ ಹೊಡೆದರೆ ಬಿಟ್ಟು ಬಿಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದೇ ರೀತಿ ಮಾಡುತ್ತಾ ನನ್ನ ಟೈಮ್ ಕಳೆಯುತ್ತಾ ಇದ್ದೀರಿ. ಈ ರೇವಜೀತ್ ಹೆಸರು ಹೇಗೆ ಬಂತು ಎಂದು ಪತ್ರಿಕೆಗಳಲ್ಲಿ ಹೇಳಿರುವುದು, ಇದು ಸೃಷ್ಟಿ ಆಗಿರುವುದು. ಏನು ಅಂದರೆ ರೇವತಿ, ಶೋಭಾ ಮಕೀಜಾ ಮುಖ್ಯಮಂತ್ರಿಗಳ ಮೊದಲ ಮಗನ ಮಗಳು, 'ರೇವ' ನಮ್ಮ ಮುಖ್ಯಮಂತ್ರಿಗಳ ಮಗಳು ಮಮತಾ ಅವರ ಮಗಳು ಜೀತು, ಇವೆರಡೂ ಸೇರಿ 'ರೇವಜೀತ್' ಎಂದು ಕಾಯಿನ್ ಆಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಆಮೇಲೆ ಇವೆಲ್ಲಾ ಪುಟ್ಟ ಮಕ್ಕಳು, ಮೊಮ್ಮಕ್ಕಳು ಎಂದು ಗೊತ್ತಾಯಿತು. This case has come up on 12th January 1987. ನಾರಾಯಣಸ್ವಾಮಿ ಅವರು ವಿನಾಯ್ತಿ ಪರ್ಮಿಷನ್ ಕೇಳುವುದಕ್ಕೆ, this is purely of administration ಹೆಚ್. ಯು. ಡಿ. ಯವರಿಗೆ ಬರೆದುಕೊಂಡಿದ್ದಾರೆ. ಇದನ್ನು ಸ್ಪೆಷಲ್ ಡಿ. ಸಿ, ೨೦/೧, ಎ ಅಂಡ್ ಬಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ರೂಲ್ಸ್ ಪ್ರಕಾರ ಸ್ಪೆಷಲ್ ಡಿ. ಸಿ, ಅವರು ರಿಪೋರ್ಟ್ ಕಾಲ್‌ಫರ್ ಮಾಡಿದ್ದರೆ; ೨೧–೭–೮೭ರಲ್ಲಿ ಸ್ಪೆಷಲ್ ಡಿ. ಸಿ. ರಿಪೋರ್ಟ್ ತರಿಸಿಕೊಂಡು ಕನ್‌ಸಿಷನ್ ಆಗಲೇ ಕೊಟ್ಟಾಗಿದೆ; ೧೯೮೫ರಲ್ಲಿ ಕೊಟ್ಟು ಆಗಿದೆ. ಇನ್ನು ಬಾಕಿ ೬೯೦೦ ಮೀಟರ್ಸ್ ಕೊಡಬಹುದು. ೨೨.೬೭೨ ಸ್ಕ್ವೇರ್ ಮೀಟರ್ಸ್‌ಗೆ ಕೊಡುವುದಕ್ಕೆ ಕನ್‌ಸಿಷನ್ ರೆಕ್ಮಂಡ್ ಮಾಡಿದ್ದಾರೆ. ಇದರ ಜೊತೆಗೆ ಬಿ. ಡಿ. ಎ. ನವರಿಗೆ ಇದನ್ನು ಕಳುಹಿಸಿಕೊಟ್ಟು ಅವರಿಂದ ರಿಪೋರ್ಟ್ ತರಿಸಿಕೊಳ್ಳಬೇಕು ಎಂದು ಹೇಳಿದ್ದಾರೆ. ನಂತರ ಅದನ್ನು ಆಗ ಹೆಚ್. ಯು. ಡಿ, ಮಿನಿಸ್ಟರ್ ಆಗಿದ್ದ ಶ್ರೀ ಲಕ್ಷ್ಮೀಸಾಗರ್ ಅವರು ಹೆಚ್. ಯು. ಡಿ. ಸೆಕ್ರೆಟರಿ ಅವರಿಗೆ ಇದನ್ನು ಪರೀಕ್ಷಿಸಿ (inspect and put up) ಸಾದರಪಡಿಸಿ ಎಂದು ನೋಟ್ ಬರೆದಿದ್ದಾರೆ. ನಂತರ ಅದೇ ದಿವಸ ಬಹಳ ಸ್ಪೀಡ್‌ನಲ್ಲಿ ಹೆಚ್. ಯು. ಡಿ. ಸೆಕ್ರೆಟರಿ ಅವರು ಎಲ್ಲಾ ವಿವರಗಳನ್ನು ಬರೆದು, ಬಿ. ಡಿ. ಎ. ನವರು ೧–೪–೧೯೮೫ರ ಹಿಂದೆಯೇ ನೋಟಿಫೈ ಮಾಡಿದ್ದರು, ಇದರ ವರದಿ ತರಿಸಿ ಎಂದು ಹೇಳಿದ್ದಾರೆ. ನಂತರ ಹೆಚ್. ಯು. ಡಿ. ಡೆಪ್ಯೂಟಿ ಸೆಕ್ರೆಟರಿ ಅವರು ಅರ್ಜಿದಾರರಿಗೆ ಯು. ಎಲ್. ಸಿ. ಆಕ್ಟ್‌ನಿಂದ ಮಾರಾಟ ಆಗುವುದಿಲ್ಲ ಎಂದು ತಿಳಿದೇ ಈ ರೀತಿ ಮಾಡಿದ ಹಾಗೆ ಕಾಣುತ್ತದೆ ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಕಾನೂನು ವಿಭಾಗದ ಅಭಿಪ್ರಾಯದಂತೆ ಯು. ಎಲ್. ಸಿ. ಕಾಯಿದೆ ಬಂದ ನಂತರ ಮಾಡಿದ ಸಾಲಗಳನ್ನು ಪರಿಗಣಿಸಲು ಬರುವುದಿಲ್ಲ ಎಂದು, ಈ ಕಾರಣದಿಂದ ಮನವಿಯನ್ನು ತಿರಸ್ಕಾರ ಮಾಡಬಹುದೆಂದು ಸ್ಪಷ್ಟವಾಗಿ ಬರೆದಿದ್ದಾರೆ. ಇಷ್ಟಾದರೂ ದೊಡ್ಡವರ ಒತ್ತಡಕ್ಕೆ ಮಣಿದ ಸೆಕ್ರೆಟರಿ ಅವರು ಈ ಆಕ್ಟ್‌ಗಿಂತ ಮೊದಲು ಮಾಡಿದ್ದ ಸಾಲದ ಬಗ್ಗೆ ಮಾಹಿತಿ ಯೊಡನೆ ಶ್ರೀ ನಾರಾಯಣಸ್ವಾಮಿ ಅವರಿಗೆ ಆಹ್ವಾನ ಕೊಟ್ಟಿದ್ದಾರೆ. ಅನೇಕ ಕಾರಣ, ನಷ್ಟ ಮತ್ತು ಸಾಲ ಮರುಪಾವತಿ ಬಗ್ಗೆ ವಿವರ ತಿಳಿದ ಮೇಲೆ, ಇದಕ್ಕೆ ಅನುಮತಿ ಕೊಡುವುದು ಸಮಂಜಸವಲ್ಲ ಎಂದು ಬರೆದರೂ ಸಹ ಒತ್ತಡಕ್ಕೆ ಮಣಿದು ಈ ವ್ಯವಹಾರವು ದಿನಾಂಕ ೧೭-೭-೧೯೮೫ರ ವಿನಾಯ್ತಿ ಆದೇಶದಂತೆಯೇ ನಿಷೇಧಿಸಲ್ಪಟ್ಟಿದ್ದರೂ ಸಹ ಸರ್ಕಾರದ–ಮಂತ್ರಿಗಳವರ ಹೊಸ ಸಮೂಹ ವಸತಿ ನಿರ್ಮಾಣ ಪಾಲಿಸಿಯ ಅನ್ವಯ ಅನುಮತಿ ನೀಡಬಹುದು ಎಂದು ದಿನಾಂಕ ೨೫–೨–೧೯೮೭ ರಲ್ಲಿ ಬರೆದಿದ್ದಾರೆ. ನಂತರ ಮುಖ್ಯ ಮಂತ್ರಿಗಳು ಬಹಳ ಖುಷಿಯಿಂದ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ರಾಚಯ್ಯ.—ಯಾವ ಮಂತ್ರಿಗಳು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನಾವ ಮಂತ್ರಿಗಳು, ಸಂಬಂಧಪಟ್ಟ ಮಂತ್ರಿಗಳೇ ಒಂದೇ ಲೈನ್‌ನಲ್ಲಿ ಇದಕ್ಕೆ ಒಪ್ಪಿಗೆ ಕೊಟ್ಟರು. ನಂತರ ದಿನಾಂಕ ೨೪–೩–೧೯೮೭ ರಂದು ಪುನಃ ೩೪೪೩ ಚದರಮೀಟರ್ಸ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯನ್ನು ಅಂಡರ್ ಸೆಕ್ರೆಟರಿ ಅವರು ಮತ್ತು ಜಾಯಿಂಟ್ ಸೆಕ್ರೆಟರಿ ಅವರು ದಿನಾಂಕ ೩೧–೩–೧೯೮೭ ರಲ್ಲಿ ರೆಫ್ಯೂಸ್ ಮಾಡಿದ್ದಾರೆ. ಇದೆಲ್ಲಾ ಆಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ವಿಚಾರಗಳು. ಆದ್ದರಿಂದ ಇದರ ಮೇಲೆ ಯಾವ ಕ್ರಿಯಾಲೋಪವು ಬರುವುದಿಲ್ಲ. ಮತ್ತೆ ಅರ್ಜಿಯಲ್ಲಿ ಏನು ಬರೆದಿದ್ದಾರೆಂದರೆ, ಈಗಾಗಲೇ ಸಾಲ ತೀರಿಸುವುದಕ್ಕೆ ಜಮೀನು ಮಾರಾಟಮಾಡಲು ಪರ್ಮಿಷನ್ ಕೊಟ್ಟಿರುವುದು ಸಾಕು, ಮತ್ತೆ ಅನುಮತಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಕೊಡಬಾರದು ಎಂದು ಬರೆದಿದ್ದಾರೆ. ಮೂರು ಸಾವಿರ ಚಿಲ್ಲರೆ ಚದರ ಮೀಟರ್ಸ್ ಜಾಗವನ್ನು ಮಾರಾಟ ಮಾಡಲು ಅನುಮತಿ ನೀಡಬಾರದೆಂದು ದಿನಾಂಕ ೩೧–೩–೧೯೮೭ ರಂದು ಬರೆದಿದ್ದಾರೆ. ಆದರೂ ಸಹ ಈ ಬಗ್ಗೆ ಒತ್ತಡದ ಮೇಲೆ ಒತ್ತಡ ಬಂತು. ಈ ಒತ್ತಡಕ್ಕೆ ಕಾರ್ಯದರ್ಶಿಯವರು ಮಣಿದು ಸಾಲಗಳು ಕಾನೂನುಬಾಹಿರವಾಗಿದ್ದರೂ ಸಹ ಒಂದು ಅಫಿಡವಿಟ್ ತರಿಸಿಕೊಂಡು ಪರ್ಮಿಷನ್ ಕೊಟ್ಟಿದ್ದಾರೆ. ಆದರೆ ಜಾಯಿಂಟ್ ಸೆಕ್ರೆಟರಿ ಅವರು ಏನು ಬರೆದಿದ್ದಾರೆಂದರೆ, ಅನುಮತಿ ಕೊಡಲು ಅಫಿಡವಿಟ್ ಒಂದೇ ಸಾಲದು, ಆದರೆ ಇವರ ''ಕೇವಲ ಸಮೂಹ ವಸತಿ ಪಾಲಿಸಿ ಯಂತೆ ಬೇಕಾದರೆ ಒಪ್ಪಿಗೆ ನೀಡಬಹುದು ಎಂದು ಬರೆದಿದ್ದಕ್ಕೆ ಸೆಕ್ರೆಟರಿ ಅವರು ಮತ್ತು ಮಂತ್ರಿಗಳು ಕೂಡಲೇ ಆಗಬಹುದು ಎಂದು ಆ ದಿವಸವೇ ಅನುಮತಿ ಕೊಟ್ಟಿದ್ದಾರೆ. ಇದೆಲ್ಲಾ ಒಟ್ಟು

ಸೇರಿ ೧೯೬೩.೩೨ ಚದರ ಮೀಟರ್‌ಗೆ ಸಂಬಂಧಪಟ್ಟಿದು. ಆದರೆ ಈಗ ಮಾರಾಟ ಆಗಿರುವುದು ೨೨,೬೩೨ ಚದರ ಮೀಟರ್‌ಗಳು. ಅಂದರೆ ಇನ್ನುಳಿದ ೨೦೨೪೮ ಚದರ ಮೀಟರ್ ಜಾಗವನ್ನು ಮಾರಾಟ ಮಾಡಲು ಅನುಮತಿ ಕೊಟ್ಟಿದ್ದು ಯಾರು ? ಇದಕ್ಕೆ ಅನುಮತಿ ಸಿಕ್ಕಿದೆಯೋ ? ಇಲ್ಲಿ ೨೦೨೪೮ ಚದರ ಮೀಟರ್ ಜಾಗವನ್ನು ಖರೀದಿ ಮಾಡಿದ್ದು ಮತ್ತು ಮಾರಾಟ ಮಾಡಿದ್ದು ಇಲ್ಲೀಗಲ್. ಇದಕ್ಕೆ ಯಾರ ಅನುಮತಿಯೂ ಇಲ್ಲದೆ ಅವರು ಕೊಟ್ಟರು, ಇವರು ತೆಗೆದುಕೊಂಡರು ಇದಕ್ಕೆ ವ್ಯಾಲ್ಯುಯೇಷನ್ ಯಾವ ರೀತಿ ನಿಗದಿ ಮಾಡಿದ್ದಾರೆಂದರೆ ಚದರ ಮೀಟರ್ ಒಂದಕ್ಕೆ ಒಂದು ಸಾವಿರ ರೂಪಾಯಿಗಳ ಪ್ರಕಾರ. ಈ ಸಕ್ಕದಲ್ಲಿ ಎರಡು ಕೋಟಿ ರೂಪಾಯಿಗಳಾಗುತ್ತದೆ. ಆದರೆ ಇವರು ಈ ಜಾಗವನ್ನು ೬೦ ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡಿದ್ದಾರೆ.

೫-೩೦ ಪಿ. ಎಂ.

ಶ್ರೀ ಬಿ. ಎನ್. ಬಚ್ಚೇಗೌಡ.—ಮಾನ್ಯ ಅಧ್ಯಕ್ಷರೆ, ಅಂಡರ್ ವಾಲ್ಯುಯೇಷನ್ ಇಟ್ ಈಸ್ ಬಿಫೋರ್ ದಿ ಕೋರ್ಟ್. ಅಡ್ಮಿನಿಸ್ಟ್ರೇಟೀವ್ ಮ್ಯಾಟರ್ಸ್ ಎಂದು ಹೇಳುತ್ತಾರೆ.

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ನಾನು ಹೇಳಿದ್ದನ್ನು ಹೊಡೆದು ಹಾಕಿ ಬಿಡಿ ಅಧ್ಯಕ್ಷರೆ'

ಶ್ರೀ ಬಿ. ಎನ್. ಬಚ್ಚೇಗೌಡ.—ಅಂಡರ್ ವ್ಯಾಲ್ಯುಯೇಷನ್ ಇಟ್ ಈಸ್ ಬಿಫೋರ್ ಕೋರ್ಟ್.

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ಹೊಡೆದುಹಾಕಿಬಿಡಿ. ಅವರು ಕೊಡಲೇ ಬಾರದು ಎಂದು ಹೇಳುವುದು ಆಡ್ಮಿನಿಸ್ಟ್ರೇಟಿವ್ ಮ್ಯಾಟರ್. ಅಂಡರ್ ವಾಲ್ಯು ಎಂದು ಹೇಳುವುದು ಅಡ್ಮಿನಿಸ್ಟ್ರೇಟೀವ್ ಮ್ಯಾಟರ್ ಅಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ.—ಇಟ್ ಈಸ್ ಬಿಫೋರ್ ದಿ ಕೋರ್ಟ್. ಅದನ್ನು ಡಿಸ್ಕಸ್ ಮಾಡಿದರೆ ಸಬ್‌ಜುಡೀಸ್ ಆಗುತ್ತ.

ಶ್ರೀ ಮತಿ ಕೆ. ಎಸ್ ನಾಗರತ್ನಮ್ಮ.—ಬೇಡ ಅಂದರೆ ಬಿಟ್ಟುಬಿಡಿ, ಅದನ್ನು ಹೊಡದುಹಾಕಿಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ.—ಬೆಲ್ ಮಾಡಿ ಅಧ್ಯಕ್ಷರೆ.

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.— ಈಗ ಗವರ್ನಮೆಂಟ್ ಇಷ್ಟು ಲಕ್ಷರೂಪಾಯಿ ಸ್ಟ್ಯಾಂಪ್ ಡ್ಯೂಟಿ ನಷ್ಟವಾಗಿದೆ, ಬಿ.ಡಿ.ಎ. ಇಂಟರೆಸ್ಟ್‌ಗೆ ಎಷ್ಟು ತೊಂದರೆಯಾಗಿದೆ. ಇದೆಲ್ಲದರ ಜೊತೆಗೆ ಇದು ಇನ್ನೂ ರೆವಿನ್ಯುಲ್ಯಾಂಡ್. ಇನ್ನೂ ಆಗ್ರಿಕಲ್ಚರಲ್ ಲ್ಯಾಂಡ್ ಇನ್ನೂ ಕನ್ವರ್ಟ್ ಆಗಿಲ್ಲ. ಇದಕ್ಕೆ ರೆವಿನ್ಯೂ ಲ್ಯಾಂಡ್‌ಕಂದಾಯ ಕೊಡತಾ ಇದ್ದಾರೆ. ಇದು ಬಿ. ಡಿ. ಎ.ನಲ್ಲಾಗಲಿ, ಕಾರ್ಪೊರೇಷನ್‌ನಲ್ಲಾಗಲಿ ಎನುವ ರೇಟ್ ಆಗಿಲ್ಲ,ಅಲ್ಲಿಕಂದಾಯ ಕೊಡುತ್ತಾ ಇಲ್ಲ. ಇಂತಹಲ್ಯಾಂಡನ್ನು ಸಿಕ್ಕಪಟ್ಟೆ ತೆಗೆದುಕೊಂಡು ಇದನ್ನು ಮಾರಾಟ ಮಾಡಿರುವುದು, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ, ಇನ್‌ಕಂಟ್ಯಾಕ್ಸ್ ಇನ್‌ವಾಲ್ಮೆಂಟ್ ಆಕ್ಟ್ ಪ್ರಕಾರ—ಎಲ್ಲಾ ತರಹದ ಆಕ್ಟ್‌ಗಳಿಗೂ ವಿರೋಧವಾಗಿ ತೆಗೆದುಕೊಂಡಿರುವುದರಿಂದ ಇದು ಬಹಳ ತಪ್ಪಾಗುತ್ತದೆ. ಇದನ್ನು ಗವರ್ನಮೆಂಟೇ ಮುಟ್ಟುಗೋಲು ಹಾಕಿಕೊಂಡು ಜನಗಳ ಅನುಕೂಲಕೋಸ್ಕರ, ಸಾರ್ವಜನಿಕರ ಹಿತರಕ್ಷಣೆಗೋಸ್ಕರ ಈ ಲ್ಯಾಂಡನ್ನು ವಾಪಸ್ ತೆಗೆದುಕೊಂಡು ಜನಗಳಿಗೆ ಅನುಕೂಲಮಾಡಿಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅವರು ಏನೆಲ್ಲಾ ಮಾತನಾಡಬಹುದು ಎಂದು ಹೇಳಿದರು The matter show just now spoke is before the court. You are allowing to speak on the same subject. Are we not having respect to the High court? The Judiciary is supreme......

ಒಬ್ಬ ಮಾನ್ಯ ಸದಸ್ಯರು.—ಇವರು ಅದರಲ್ಲಿ ಏನೋ ಲಾಭ ಪಡೆದುಕೊಂಡಿದ್ದಾರೆ. ಈ ವ್ಯವಹಾರದಲ್ಲಿ ಏನೋ ಅವರು ಲಾಭ ಪಡೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಸನ್ಮಾನ್ಯ ಅಧ್ಯಕ್ಷರೆ.....

ಶ್ರೀ ಕೆ. ಬಿ. ಶಾಣಪ್ಪ.—ಜನಗಳಿಸಿದ್ದು ನೀವು ಸುಪ್ರೀಂ ಅಲ್ಲವೇ, ಜುಡಿಶಿಯಲ್ ಸುಪ್ರೀಂ ಎಂದು ತಲೆ ಮೇಲೆ ಇಟ್ಟುಕೊಳ್ಳಿ. ನೀವು ಗಡಬಿಡ ಮಾಡಬೇಡಿ ಇಲ್ಲಿ.

ಶ್ರೀ ವೇದಾಂತ ಹೆಮ್ಮಿಗೆ.—ಕಮ್ಯೂನಿಸ್ಟ್ ಪಾರ್ಟಿಗೆ ರಷ್ಯಾ ಒಂದೇ ಸುಪ್ರೀಂ.

ಶ್ರೀ ಆರ್ ವೆಂಕಟರಾಮಯ್ಯ.—ಕಮ್ಯೂನಿಷ್ಟ್ ಪಾರ್ಟಿ ಎಂದು ಏನೋ ಹೇಳುತ್ತಿದ್ದಾರೆ ಕಮ್ಯೂನಿಷ್ಟ್ ಪಾರ್ಟಿ ಬಗ್ಗೆ ಹೇಳುವುದು ಬೇಡ. ಅವರು ಬೇಕಾದರೆ ವೇದಾಂತ ಹೇಳಿಕೊಳ್ಳಲಿ. ಪಾರ್ಟಿ ಬಗ್ಗೆ ಏಕೆ ಹೇಳುತ್ತಾರೆ. ಇದರಲ್ಲಿ ಯಾವ ಪಾರ್ಟಿ ಇಲ್ಲ. ಕಮ್ಯೂನಿಸ್ಟ್ ಪಾರ್ಟಿ ಅವರಿಗೆ ಏನು ಮಾಡಿದೆ. ಪಾರ್ಟಿ ವಿಷಯ ಬೇಡ. ಬೇಕಾದರೆ ಪರ್ಸನಲ್ಲಾಗಿ ಮಾತನಾಡೋಣ.

ಶ್ರೀ ಬಿ. ಎಸ್. ಬಚ್ಚೇಗೌಡ.—ವಕೀಲರಾಗಿ ಈ ರೀತಿ ಹೇಳುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಈ ರೇವಜಿತು ಬಿಲ್ಡರ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ......

ಶ್ರೀ ಕೆ. ಬಿ. ಶಾಣಪ್ಪ.—ಯಾವುದೇ ವಿಷಯವನ್ನು ಜುಡಿಶಿಯಲ್‌ಗೆ ಕಳಿಸಿದರೆ ಚರ್ಚೆನೇ ಮಾಡ ಬಾರದೇ ಇಲ್ಲಿ ?

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಈ ರೇವಜಿತು ಬಿಲ್ಡರ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಬಹಳ ವಿಸ್ತಾರವಾಗಿ ಮತ್ತು ಡೇಟ್‌ವೈಸ್ ಎಲ್ಲವನ್ನೂ ಕೂಡ ಸದನದ ಮುಂದೆ ಇಟ್ಟಿದ್ದಾರೆ. ನಾನು ಈಗ ಪುನಃ ಅದೇ ವಿಷಯವನ್ನು ಪ್ರಸ್ತಾಪ ಮಾಡದೇ ಒಂದೆರೆಡು ವಿಷಯಗಳನ್ನು ತಮ್ಮ ಗಮನಕ್ಕೆ ತಂದು ಇದಕ್ಕೆ ಯಾವ ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದನ್ನು ನಾನು ಸಲಹೆ ಮಾಡುತ್ತೇನೆ. ಈಗ ರೇವಜಿತು ಫರ್ಮ್‌ಬರಲಾಗಿ ೬-೧-೧೯೮೭ರಲ್ಲಿ ಅನ್‌ಅಫಿಷಿಯಲ್ ಆಗಿ ಜನ್ಮ ತಾಳಿತು. ಅದು ಆದಮೇಲೆ ೯-೧-೧೯೮೭ರಲ್ಲಿ ಕೇವಲ ಮೂರೇ ದಿವಸದಲ್ಲಿ ಮೆಸರ್ಸ್ ಬಿ. ಎಂ. ನಾರಾಯಣಸ್ವಾಮಿ ಅಂಡ್ ಸನ್ಸ್ ಎನ್ನತಕ್ಕಂಥವರ ಜಮೀನು ಏನಿತ್ತು ಈಗಾಗಲೇ ಹೇಳಿದಹಾಗೆ ದಾಸರಹಳ್ಳಿ—ಉತ್ತರಹಳ್ಳಿ ಹೋಬಳಿಯಲ್ಲಿ ಬರತಂಕ್ಕಥ ಮತ್ತು ಜಯನಗರ ಬಡಾವಣೆಯಲ್ಲಿರತಕ್ಕಂಥ ೫ ಎಕರೆ ೨೪ ಗುಂಟೆ ಜಮೀನನ್ನು ಇವರಿಗೆ ಪರಭಾರೆ ಮಾಡಬೇಕು ಅಥವಾ ನಮಗೆ ಕೊಡಬೇಕು ಎಂದು ಅವರು ಕೇಳಿಕೊಂಡಾಗ ಕೇವಲ ಮೂರೇ ದಿವಸದಲ್ಲಿ ಅವರು ಸೆಕ್ರೆಟರಿಯೇಟಿಗೆ ದಾವಿಸಿ ಅರ್ಬನ್ ಸೀಲಿಂಗ್‌ನಲ್ಲಿ ಎಕ್ಸೆಂಪ್‌ಷನ್ ಕೊಡಬೇಕು ಎಂದು ಅಪ್ಲಿಕೇಷನ್ ಹಾಕಿದರು. ಅವರು ಅಪ್ಲಿಕೇಷನ್ ಹಾಕಿ ಒಂದು ಇಪ್ಪತ್ತು ದಿವಸದಲ್ಲಿ ಸರ್ಕಾರದವರು ಒಂದು ಚಿಂತನೆ ಮಾಡಿ ಈ ಬೆಂಗಳೂರು ನಗರದಲ್ಲಿ ವಾಸ ಮಾಡತಕ್ಕಂಥಹ ಜನರಿಗೆ ಮನೆಯ ಕೊರತೆ ಇದೆ, ಅವರಿಗೆ ಸಹಾಯ ಮಾಡಬೇಕು ಎಂದು ಹೇಳಿ ಒಂದು ಗ್ರೂಪ್ ಹೌಸಿಂಗ್ ಸ್ಕೀಮ್ ಎಂದು ಒಂದು ಯೋಜನೆಯನ್ನು ಕೊಟ್ಟಿತು. ಜಮೀನು ತೆಗೆದುಕೊಂಡ ಮೇಲೆ ಅದಕ್ಕೆ ಸಹಾಯ ಮಾಡತಕ್ಕ ರೀತಿಯಲ್ಲಿ ಈ ಯೋಜನೆ ಜನ್ಮ ತಾಳಿತು, ಅದು ಒಂದು ಕಡೆ ಇರಲಿ. ಅದು ಆದಮೇಲೆ ಇಮ್ಮೀಡಿಯಟ್ ಆಗಿ ರೇವಜೀತ್ ಬಿಲ್ಡರ್ಸ್‌ನವರು ಸರ್ಕಾರಕ್ಕೆ ಧಾವಿಸಿ ಬಂದು ಅವರ ಎಕ್ಸೆಂಪ್‌ಷನ್ ಕೇಳತಕ್ಕಂಥ ಪ್ರಯತ್ನವನ್ನು ಮಾಡಿದರು. ಸ್ಪೆಷಲ್ ಡೆಪ್ಯುಟಿ ಕಮೀಷನರ್ ಅವರಿಂದ ರೆಕ್ಮಂಡ್ ಮಾಡಿಸಿದರು. ಮುಂದೆ ಅಂಡರ್ ಸೆಕ್ರೆಟರಿ ಅದೇ ರೀತಿ ರೆಕ್ಮಂಡ್ ಮಾಡಿದರು. ಪುನಃ ಜಾಯಿಂಟ್ ಸೆಕ್ರೆಟರಿ ಅವರ ಹತ್ತಿರ ಹೋದಾಗ ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ತಳ್ಳಿ ಹಾಕಿದರು. ಆದರೆ ನಿನ್ನೆ ಮಾತನಾಡುವಾಗ ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುವಾಗ, ತಮ್ಮ ಆ ಫೈಲ್ ಮೇಲೆ ರಾಜುಮಾತು ಇದೆ. ತಾವು ಸಿಗ್ನೇಚರ್ ಮಾಡಿದ್ದೀರಿ, ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದಕ್ಕೆ ಶ್ರೀ ಮಾನ್ ಧರ್ಮಸಿಂಗ್ ಅವರನ್ನೂ, ಹಾಗೂ ನನ್ನನ್ನು ಸೇರಿಸಿ ಹೇಳಿಬಿಟ್ಟರು ಏನೆಂದರೆ ನೀವು ಒಂದು ಕೈಯಲ್ಲಿ ಟಾರ್ ಇನ್ನೊಂದು ಕೈಯಲ್ಲಿ ಬ್ರುಷ್ ಹಿಡಿದುಕೊಂಡು ಯಾರು ಸಿಕ್ಕುತ್ತಾರೆ ಅವರ ಮುಖಕ್ಕೆ ಬಳಿಯತಕ್ಕ ಕೆಲಸಮಾಡುತ್ತಾ ಇದ್ದೀರಿ ಎಂದು. ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತರಬೇಕಾದರೆ ಅವರು ಈಗಾಗಲೇ ಒಪ್ಪಿದು ೯-೪-೧೯೮೭ರಲ್ಲಿ, ಅವರ ಸಿಗ್ನೇಚರ್ ಆಗಿದೆ, ಪ್ರೊಫೆಸರ್ ಎ. ಲಕ್ಷ್ಮೀಸಾಗರ್ ಎಂದು ಸೀಲ್ ಇದೆ. ಮುಂದೆ ಆ ಒತ್ತಡವನ್ನು ಜಾಯಿಂಟ್ ಸೆಕ್ರೆಟರಿ, ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಶ್ರೀ ಬಿ. ಬಿ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಭಂಡಾರಿ ಅವರು ರೆಫ್ಯೂಸ್ ಮಾಡಿದರು. ಅವರು ಪುನಃ ಅದನ್ನು ಪರಿಶೀಲಿಸಿ ಅದನ್ನು ಒಪ್ಪತಕ್ಕ ರೀತಿಯಲ್ಲಿ ೧೪-೪-೮೭ರಲ್ಲಿ, ೧೫-೪-೮೭ರಲ್ಲಿ ಅದು ಪೂರ್ತಿಗೊಂಡಿತು. ನಾನು ಯಾಕೆ ಈ ಮಾತನ್ನು ಹೇಳುತ್ತೇನೆ ಅಂದರೆ ಯಾವ ಸಂಧರ್ಭದಲ್ಲಿ ಶ್ರೀ ಲಕ್ಷ್ಮಿಸಾಗರ್‌ರವರು ಈ ಮಾತನ್ನು ಹೇಳಿದರೋ ನನಗೆ ಗೊತ್ತಿಲ್ಲ. ಒಂದು ಕಡೆ ಅವರೇ ಒಪ್ಪಿಗೆಯನ್ನು ಕೊಟ್ಟು, ಇನ್ನೊಂದು ಕಡೆ ನೀವೇ ನಮಗೆ ನಾಚಿಕೆಯುತಕ್ಕ ಕೆಲಸ ಮಾಡುತ್ತಿದ್ದೀರಿ ಎಂದು ಹೇಳಿದರೆ ಅದು ಸತ್ಯಕ್ಕೆ ದೂರ ವಾದುದು ಅಲ್ಲ, ಸತ್ಯಕ್ಕೆ ಎಷ್ಟೋ ಮೈಲು ದೂರ ಇದೆ, ಆದರೆ ಅದು ಸತ್ಯಕ್ಕೆ ಸಮೀಪ ಮತ್ತು ಅವರಿಗೆ ಅಪೂಟ ಸತ್ಯ ಎಂದು ಅವರ ಹೃದಯದಲ್ಲಿ ಇರತಕ್ಕ ಮಾತನ್ನು ಹೇಳುತ್ತೇನೆ. ಬೇಕಾದರೆ ನಿಮಗೆ ನೋಡುವುದಕ್ಕೆ ಅವನ್ನು ಕಳಿಸಿ ಅಂದರೆ ಕಳಿಸುತ್ತೇನೆ. ಅದು ಆದ ಮೇಲೆ ಈ ಒಂದು ರೀತಿ ಯಿಂದ ಅವರ ಆಡಳಿತದಲ್ಲಿ ಅವರ ವೈಖರ್ಯವನ್ನು ಎಷ್ಟು ತರಾತುರಿಯಲ್ಲಿ ಮಾಡಿದ್ದಾರೆ ಎಂದು ಮಾನ್ಯ ನಾಯಕಿಯವರು ಈಗಾಗಲೇ ಹೇಳಿದ್ದಾರೆ, ಅದು ಆದ ಮೇಲೆ ಗವರ್ನಮೆಂಟ್ ಸರ್ಕ್ಯುಲರ್, ಕರ್ನಾಟಕ ಗವರ್ನಮೆಂಟ್ ಸೆಕ್ರೆಟರಿಯೇಟ್, ಥರ್ಡ್ ಸ್ಟೇಜ್, ಫಿಫ್ತ್ ಫ್ಲೋರ್ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್, ಬೆಂಗಳೂರು, ಡೇಟೆಡ್ ೮ನೇ ಜುಲೈ ೧೯೮೫ ಎಂದು ಇದೆ. ಸರ್ಕಾರದವರು ಯಾವ ರೀತಿಯಾಗಿ ರಿಜಿಸ್ಟ್ರೇಷನ್ ಆಗಬೇಕು, ಪ್ರತಿ ಒಂದು ಏರಿಯಾದಲ್ಲಿ ಎಷ್ಟು ವ್ಯಾಲುಯೇಷನ್ ಇರಬೇಕು, ಎಷ್ಟು ಮಿನಿಮಮ್ ವ್ಯಾಲುಯೇಷನ್ ಇದ್ದರೆ ರಿಜಿಸ್ಟ್ರೇಷನ್ ಮಾಡಬೇಕು ಎಂಬುದರ ಬಗ್ಗೆ ಸರ್ಕ್ಯುಲರ್ ಅನ್ನು ಇಷ್ಯೂ ಮಾಡಿದರು. ಕುಮಾರ ಪಾರ್ಕ್, ಮಲ್ಲೇಶ್ವರಂ, ಅದು ಬಿಟ್ಟು ಬಿಡಿ. ಮಲ್ಲೇಶ್ವರಂ ಕುಮಾರಾ ಪಾರ್ಕ್, ೧೨೦೦ ಸ್ಕ್ವೇರ್ ಮೀಟರ್ಸ್ ಇದೆ. ಅದು ಆದಮೇಲೆ ಜಯನಗರ ಫಸ್ಟ್ ಅಂಡ್ ಸೆಕೆಂಡ್ ಬ್ಲಾಕ್, ೭೫೦ ರೆಸಿಡೆನ್ಸಿಯಲ್ ಏರಿಯಾಗೆ ಸ್ಕ್ವೇರ್ ಯಾರ್ಡ್ ಮತ್ತು ಕಮರ್ಷಿಯಲ್ಲಿಗೆ ೧.೨೦೦ ಸ್ಕ್ವೇರ್ ಯಾರ್ಡ್ ಇದೆ. ಅನಂತರ ಜಯನಗರ ಫಿಫ್ತ್ ಮತ್ತು ಎಯ್ತ್ ಬ್ಲಾಕ್‌ನಲ್ಲಿ ೬೫೦ ರೂಪಾಯಿ, ೧,೦೦೦ ರೂಪಾಯಿ ಕಮರ್ಷಿಯಲ್ ಇದೆ. ಈ ಜಮೀನು ಜಯನಗರದ ಹತ್ತಿರ ನಂಬಾ ಮತ್ತು ಶಾಂತಿ ಟಾಕೀಸ್ ಮಧ್ಯದಲ್ಲಿ ಇರತಕ್ಕಂಥ ಜಮೀನು ಇದು ೨೨,೬೭೨ ಸ್ಕ್ವೇರ್ ಮೀಟರ್‌ಗಿಂತಲೂ ಮೇಲ್ಪಟ್ಟು ಇದೆ. ಈ ಸರ್ಕ್ಯುಲರ್ ಇದ್ದರೂ ಕೂಡ ಇದರ ಪ್ರಕಾರ ವ್ಯಾಲ್ಯುಯೇಷನ್ ತೆಗೆದುಕೊಂಡರೆ ಇವೊತ್ತಿನ ದಿವಸ ಆ ಜಮೀನು ಕಿಮ್ಮತ್ತು ಕನಿಷ್ಟಪಕ್ಷ ೨ ಕೋಟಿ ೨೦ ಲಕ್ಷ ರೂಪಾಯಿ ಆಗುತ್ತಿತ್ತು ಎನ್ನುವುದು ಇದರಿಂದ ಗೊತ್ತಾಗುತ್ತದೆ, ಈ ಸರ್ಕ್ಯುಲರ್ ನಾವು ಇಷ್ಯೂ ಮಾಡಿದ್ದು ಅಲ್ಲ. ನಾವು ಹೊಟ್ಟೆಕಿಚ್ಚಿಗೆ ಹುಟ್ಟಿಸಿಕೊಂಡು ತಂದದ್ದು ಅಲ್ಲ. ಇದು ಸರ್ಕಾರದ ಸರ್ಕ್ಯುಲರ್ ಇದೆ. ಇದು ಗವರ್ನಮೆಂಟಿನವರು ಇಷ್ಯೂ ಮಾಡಿದ ಒಂದು ಡಾಕ್ಯುಮೆಂಟು ಅವರು ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕಾಗಿದ್ರೆ ೨.೨೦ ಕೋಟಿ ರೂಪಾಯಿಗೆ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕಾಗಿತ್ತು, ಆ ರೀತಿ ಮಾಡಿಕೊಳ್ಳಲಿಲ್ಲ...

SRI S. R. BOMMAI.—Subsequently it has been quashed by the High Court. ಅದು ಆದಮೇಲೆ ಮತ್ತೊಂದು ಸರ್ಕ್ಯುಲರ್ ಇಷ್ಯೂ ಮಾಡಿದ್ದೇವೆ ಸರ್ಕಾರದವರು ಮಾಡಿದ್ದು ಆರ್ಬಿಟ್ರರಿ ಇದೆ ವ್ಯಾಲ್ಯುಯೇಷನ್‌ನಲ್ಲಿ ಅಂತ ಹೇಳಿ ಹೈಕೋರ್ಟಿನವರು ತಳ್ಳಿ ಹಾಕಿದಮೇಲೆ ಯಾವರೀತಿ ಮಾಡಬೇಕೆಂದು ಮತ್ತೊಂದು ಸರ್ಕ್ಯುಲರ್ ಕೊಟ್ಟಿದ್ದೇವೆ. ಮೂರು ವರ್ಷದ್ದು ಆವರೇಜ್ ತೆಗೆದುಕೊಂಡು ಫಿಕ್ಸ್ ಮಾಡಬೇಕೆಂದು ಮತ್ತೊಂದು ಸರ್ಕ್ಯುಲರ್ ಇದೆ...

SRI M. MALLIKARJUN KHARGE.—All right, I do agree Sir, atleast ನಿಮ್ಮ ಲೇಟೆಸ್ಟ್ ಸರ್ಕ್ಯುಲರ್ ಏನು ಇದೆ ಅದರ ಪ್ರಕಾರ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡುತ್ತಾರೆ, ಅವರು ಆ ಸರ್ಕ್ಯುಲರ್ ನೋಡದೆ ಮಾಡಲಿಕ್ಕೆ ಹೋಗುವುದಿಲ್ಲ. You have fixed a minimum valuation. ಕನಿಷ್ಟ ಇಷ್ಟು ಬಂದರೆ ನೀವು ರಿಜಿಸ್ಟರ್ ಮಾಡಬೇಕೆಂದು, ಇಲ್ಲದೇ ಇದ್ದರೆ ಇಲ್ಲ ಎಂದು ಹೇಳುವಂತಹ ನಿಮ್ಮ ಆದೇಶ ಇದೆ. ಇದು ನಮ್ಮ ಕಾಲದಲ್ಲಿ ೧೯೮೨ರಲ್ಲಿ ಇಷ್ಯೂ ಮಾಡಿದ್ದು. ಈಗ ತಾವು ೩೦ ಪರ್‌ಸೆಂಟ್ ಜಾಸ್ತಿ ಎಂದು ಮಾಡಿದ್ದೀರಿ. ಈಗ ೬೫೦ ರೂಪಾಯಿ ಇದ್ದುದು ೩೦ ಪರ್‌ಸೆಂಟ್ ಜಾಸ್ತಿ ಅಂದರೆ ಒಂದು ಸಾವಿರ ರೂಪಾಯಿಗೆ ಬರುತ್ತದೆ. ಈಗ ಅದರ ಲೆಕ್ಕದ ಪ್ರಕಾರ ತಗೆದುಕೊಂಡರೂ ಕೂಡ ಇನ್ನೂ ಜಾಸ್ತಿಯಾಗುತ್ತದೆ. ಆ ಲೆಕ್ಕ ಇಟ್ಟರೂ ಕೂಡ ಲೇಟೆಸ್ಟ್ ಸರ್ಕ್ಯುಲರ್ ವಯಲೇಟ್ ಮಾಡಿದ್ದೀರಿ. ಅನಂತರ ಅರ್ಬನ್ ಲ್ಯಾಂಡ್ ಸೀಲಿಂಗ್ ಆ್ಯಕ್ಟ್ ೨೦ (೧) ಎ ಮತ್ತು ೨೦ (೧) ಬಿ ಅದರ ಡೀಟೈಲ್ ನಾನು ಅನಂತರ ಹೇಳುತ್ತೇನೆ. ಇದೂ ಕೂಡ ವಯಲೇಷನ್ ಆಗಿದೆ. ನಿಮ್ಮ ಆಡಳಿತದಲ್ಲಿರತಕ್ಕಂಥ ಜಾಯಿಂಟ್ ಸೆಕ್ರೆಟರಿಯವರು ಏನಿನ್ನಾರೆ ಅವರು ನೋಟ್ ಹಾಕಿ ಇದುಬರುವುದಿಲ್ಲ ಎಂದು ಹೇಳಿದ್ದರೂ ಅದನ್ನು ಓವರ್ ರೂಲ್ ಮಾಡಿದ್ದೀರಿ. ಓವರ್ ರೂಲ್ ಮಾಡಬಹುದು ಯಾವಾಗ ಮಾಡಬಹುದು. ಕಾನೂನು ರೀತ್ಯಾ ಎಲ್ಲಾ ಸರಿಯಾಗಿದ್ದರೆ ಮಾತ್ರ ಮಾಡಬಹುದು. ಕಾನೂನನ್ನು ವಯಲೇಟ್ ಮಾಡಿ

ಇಲ್ಲೀಗಲ್ ಆಗಿ ಮಾಡತಕ್ಕ ಅಧಿಕಾರ ನಿಮಗೆ ಇಲ್ಲ. ಅದನ್ನು ಸರಿಪಡಿಸಿಕೊಳ್ಳಬೇಕಾದರೆ ಅಮೆಂಡ್‌ಮೆಂಟ್ ಮಾಡಿಕೊಂಡು ನೀವು ಹಕ್ಕನ್ನು ಪಡೆದುಕೊಂಡು ಅದನ್ನು ಮಾಡಿಕೊಂಡಿದರೆ ಅದು ಆಗಬಹುದು. ಆದರೆ ಇರತಕ್ಕ ಕಾನೂನಿನಲ್ಲಿ ಅವಕಾಶ ಇಲ್ಲ ಹೇಗೆ ಮಾಡಿದರು ಎನ್ನುವುದು ಪ್ರಶ್ನೆ. ಕಾನೂನು ಪ್ರಕಾರ, ಸರ್ಕ್ಯುಲರ್ ಪ್ರಕಾರ ಇವೊತ್ತು ಅಂಡರ್ ವ್ಯಾಲ್ಯುಯೇಷನ್ ೯೦ ಲಕ್ಷ ರೂಪಾಯಿಗೆ ರಿಜಿಸ್ಟ್ರೇಷನ್ ಮಾಡತಕ್ಕ ಅವಶ್ಯಕತೆ ಇರಲಿಲ್ಲ. ಅಲ್ಲಿನ ಸಬ್‌ರಿಜಿಸ್ಟ್ರಾರ್ ಇದನ್ನು ರಿಜಿಸ್ಟರ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರೂ ಕೂಡ ತಾವು ಇಲ್ಲಿನ ಸರ್ಕಾರದ ಒತ್ತಡ ಅಥವಾ ಯಾರ ಒತ್ತಡವೋ ನನಗೆ ಗೊತ್ತಿಲ್ಲ ಆದರೂ ಕೂಡ ಅವರು ಮಾಡಬೇಕಾದರೆ ಕಾರಣ ಇರಬೇಕು ಅವರು ಅಂಡರ್‌ವ್ಯಾಲ್ಯುಯೇಷನ್ ೯೦ ಲಕ್ಷ ರೂಪಾಯಿಗೆ ರಿಜಿಸ್ಟ್ರೇಷನ್ ಮಾಡಿದ್ದರಿಂದ ಸರ್ಕಾರಕ್ಕೆ ೧೫–೨೦ ಲಕ್ಷ ರೂಪಾಯಿ ಲಾಸ್ ಆಯಿತು. ಇದರಲ್ಲಿ ಇನ್ನೊಂದು ಮಹತ್ವವಾದುದು ಇದೆ. ಇವರು ೩೦ನೇ ಸೆಪ್ಟೆಂಬರ್‌ಗೆ ರಿಜಿಸ್ಟ್ರೇಷನ್ ಮಾಡಿದ್ದು ಒಂದುವೇಳೆ ಫಸ್ಟ್ ಅಕ್ಟೋಬರ್‌ಗೆ ಮಾಡಿದ್ದರೆ, ಬೆಂಗಳೂರು ಅಹಮದಾಬಾದ್‌ಗೆ ಇನ್‌ಕಮ್ ಟ್ಯಾಕ್ಸ್ ಅವರು ತಮ್ಮ ಕಾನೂನಿನ ಪರಿಮಿತಿಯನ್ನು ಎಕ್ಸ್‌ಟೆಂಡ್ ಮಾಡುತ್ತಿದ್ದರು. ಅದರ ಪ್ರಕಾರ ಏನು ೧೦ ಲಕ್ಷ ರೂಪಾಯಿಯ ಪ್ರಾಪರ್ಟಿ ಯಾವುದು ಇದೆ ಆ ಪ್ರಾಪರ್ಟಿಯನ್ನು ಮಾರಾಟ ಮಾಡಬೇಕಾದರೆ, ಕೊಂಡು ಕೊಳ್ಳಬೇಕಾದರೆ ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಿಂದ ಪರ್ಮಿಷನ್‌ನ್ನು ತೆಗೆದುಕೊಳ್ಳಬೇಕು. ಇದಕ್ಕೆ ೯೦ ದಿವಸ ಟೈಂ ಇರುತ್ತದೆ. ಅಷ್ಟರೊಳಗೆ ಇನ್‌ಕಂಟ್ಯಾಕ್ಸ್ ಡಿಪಾರ್ಟ್‌ಮೆಂಟ್, ಮದ್ರಾಸ್ ರೀಜನಲ್ ಆಫೀಸ್ ಅವರು ಪರ್ಮಿಷನ್ ಕೊಟ್ಟರೆ ಅದನ್ನು ತಂದು ಇಲ್ಲಿ ರಿಜಿಸ್ಟರ್ ಮಾಡಿಸಬೇಕು. ಇದನ್ನು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಕಳುಹಿಸಿ ರಿಜಿಸ್ಟರ್ ಮಾಡಿಸಬೇಕು. ಆದರೆ ಇದನ್ನು ತಪ್ಪಿಸಿಕೊಳ್ಳುವುದಕ್ಕೆ ರಾತ್ರೋರಾತ್ರಿ ೩೦ನೇ ತಾರೀಖು ಇನ್‌ಛಾರ್ಜ್ ಸಬ್ ರಿಜಿಸ್ಟ್ರಾರ್‌ರವರನ್ನು ಹಿಡಿದು ಒತ್ತಡವನ್ನು ಅವರಮೇಲೆ ತಂದು ಈ ಕೆಲಸವನ್ನು ಮಾಡಿದರು. ಇದು ಸಾಮಾನ್ಯ ಮನುಷ್ಯನಿಗೆ ಸಾಧ್ಯವೇ ? ಮಾನ್ಯ ಮುಖ್ಯ ಮಂತ್ರಿಗಳನ್ನು ಈ ಬಗ್ಗೆ ಮೊನ್ನೆ ಕೇಳಿದಾಗ ಅವರು ಒಂದು ಮಾತನ್ನು ಹೇಳಿದರು. ಈ ಪ್ರಾಪರ್ಟಿಯನ್ನು ತೆಗೆದುಕೊಂಡವರು ಮುಂಬೈನವರು, ಅವರಿಗೆ ಬಹಳ ದೊಡ್ಡ ಬಿಸಿನೆಸ್ ಇದೆ. ಅವರು ಇದನ್ನು ತೆಗೆದುಕೊಂಡರು ಎಂದರೆ ಅವರಲ್ಲಿ ಹಣ ಬಹಳ ಇದೆ, ಇದನ್ನು ತೆಗೆದುಕೊಳ್ಳತಕ್ಕ ಶಕ್ತಿ ಅವರಲ್ಲಿದೆ, ಆದ್ದರಿಂದ ಅವರು ತೆಗೆದುಕೊಂಡಿದ್ದಾರೆ ಎನ್ನತಕ್ಕ ರೀತಿಯಲ್ಲಿ ಹೇಳಿದರು. ಅಂದರೆ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಮಾಹಿತಿ ಇತ್ತು. ಈಗಾಗಲೇ ಮುಖ್ಯ ಮಂತ್ರಿಗಳು..... ...

MR. SPEAKER.—As per rules, a Member who has given notice, may make a short statement. ನಿಮಗೆ ೧೦ ನಿಮಿಷ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಬಹಳ ಧಾರಾಳವಾಗಿ ಮತ್ತು ಯಾರಾದರೂ ಅಪ್ಲಿಕೇಷನ್‌ನನ್ನು ಕೊಟ್ಟರೆ, ಅಲಿಗೇಷನ್‌ನನ್ನು ಮಾಡಿದರೆ ಅವರು ಮಂತ್ರಿ ಇರಬಹುದು, ಶಾಸಕರು ಇರಬಹುದು ಅಥವಾ ಅಧಿಕಾರಿಗಳಾಗಿರಬಹುದು ಅವರ ಮೇಲೆ ಸಿ. ಓ. ಡಿ. ಯನ್ನು ಹಾಕಿ ಎನ್‌ಕ್ವೈರಿಯನ್ನು ಮಾಡಿಸುತ್ತಾರೆ. ಲೋಕಾಯುಕ್ತಕ್ಕೆ ಹಾಕಿ ಎನ್‌ಕ್ವೈರಿ ಮಾಡಿಸುತ್ತಾರೆ. ಇದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇಲ್ಲಿ ಏನಿದೆ ಎಂದರೆ ನೇರವಾಗಿ ಅವರ (ಮುಖ್ಯ ಮಂತ್ರಿಗಳ) ಸಂಬಂಧಿಕರು ಇನ್‌ವಾಲ್ವ್ ಆಗಿದ್ದಾರೆ ಎಂದು ಆಪಾದನೆ ಇದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ದಯವಿಟ್ಟು ಇದರ ಬಗ್ಗೆ ಎನ್‌ಕ್ವೈರಿ ಆಗಬೇಕು. ಇದು ಕಾನೂನು ಉಲ್ಲಂಘನೆ ಆಗಿದೆಯೋ, ಇಲ್ಲವೋ ಎಂಬುದು ಗೊತ್ತಾಗಬೇಕಾದರೆ ಸಿ. ಬಿ. ಐ. ಗೆ ರೆಫರ್ ಮಾಡಬೇಕು.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. ಮಾನ್ಯ ಖರ್ಗೆಯವರು ಹೇಳಿದರು ಯಾವ ವಿಷಯ ಕೋರ್ಟಿನ ಮುಂದಿದೆ ಆ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಿಲ್ಲ ಎಂದು. ಮಾನ್ಯ ರಾಮಕೃಷ್ಣ ಹೆಗಡೆಯವರು ಮತ್ತು ದೇವಜಿತ್ ಕಂಪನಿಯವರಿಗೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ಅವರು ಏನು ಹೇಳುತ್ತಿದ್ದಾರೆ.......

ಅಧ್ಯಕ್ಷರು.—ಅವರು ಹೇಳುವುದನ್ನು ಸ್ವಲ್ಪ ಕೇಳಿ.

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ
ಕ್ರಮಾಂಕ No.................
ದಿನಾಂಕ Date.........

ಶ್ರೀ ಎಂ. ರಘುಪತಿ.—ಇದು ರಿಟ್ ಪಿಟಿಷನ್. ಈ ರಿಟ್ ಪಿಟಿಷನ್‌ನ ಪ್ಯಾರಾ ೪ ರಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. ಅದು ಏನೆಂದರೆ.

> "The petitioner submits that there were irregutlrities in the sale of a large parcel of the land in Jayanagar to M/s. Revjeetu Buildrs & Developers. a partnership firm consisting of Mrs. Shobha Makhija and this Mrs. Shobha Makhija being the sisters of the son-in-law of Ramkrishna Hegde, the present Chief Minister of Karnataka. The issue aroused keen public interest and bees that impartial scrutiny by the Hon'ble Court."

ಇದು ಕೋರ್ಟಿನ ಮುಂದಿಲ್ಲವೇ ? ಇದು ಸಬ್‌ಜುಡೀಸ್ ಆಗುವುದಿಲ್ಲವೇ ಎಂಬುದನ್ನು ಅಧ್ಯಕ್ಷರೆ, ತಾವೇ ಹೇಳಿ. ನಮಗೆ ತಾವು ಮಾರ್ಗದರ್ಶನ ನೀಡಬೇಕು. ಏಕೆಂದರೆ, ಇದು ಕೋರ್ಟಿನಲ್ಲಿರುವುದರಿಂದ, ಕೋರ್ಟಿನಲ್ಲಿರತಕ್ಕ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದರಿಂದ ಇದು ಸಬ್‌ಜುಡೀಸ್ ಆಗುತ್ತದೆ. ಆದ್ದರಿಂದ ತಾವು ನಮಗೆ ಮಾರ್ಗದರ್ಶನ ನೀಡಬೇಕು. ಕೋರ್ಟಿನ ಮುಂದಿರತಕ್ಕ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಿಲ್ಲವೆಂದು ಮಾನ್ಯ ಖರ್ಗೆಯವರು ಮೊದಲೇ ಹೇಳಿದ್ದಾರೆ. ಈಗ ಇದನ್ನು ತಾವು ಅಡ್ಮಿಟ್ ಮಾಡಿದ್ದೀರಿ. ಇದು ಅಷ್ಟೇ ಅಲ್ಲ: ರೂಲ್ ೧೬೩ರಲ್ಲಿ ಏನು ತೋರಿಸುತ್ತದೆ.........

ಶ್ರೀ ಬಿ. ರಾಚಯ್ಯ.—ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸಸ್‌ನ್ನು ಮಾತ್ರ ಹೇಳಬೇಕೆಂದು ತಾವು ರೂಲಿಂಗ್‌ನ್ನು ಕೊಟ್ಟಿದ್ದೀರಿ. ಅವರು ಅಷ್ಟನ್ನು ಮಾತ್ರ ಹೇಳಬೇಕು. ಆದರೆ ಮಾನ್ಯ ಉಪ ನಾಯಕರು ಅದನ್ನು ಬಿಟ್ಟು ಮುಂದಕ್ಕೆ ಹೋಗಿದ್ದಾರೆ... .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಏನು ಎಂಬುದನ್ನು ಹೇಳಿ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೆ, ಅವರು ಹೇಳುವುದರಲ್ಲಿ ಸತ್ಯಾಂಶ ಇದೆ. ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸಸ್ ಬಗ್ಗೆ ಮಾತ್ರ ಹೇಳಿ. ನೀವು ಮೊದಲು ಚೆನ್ನಾಗಿ ಹೇಳಿದ್ದೀರಿ. ನಂತರ ನೀವು.........ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸ್‌ಸ್ ಬಗ್ಗೆ ಮಾತ್ರ ನೀವು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದೆ ಸರ್ಕ್ಯುಲರ್‌ನ್ನು ಯಾವ ಯಾವ ಆಫೀಸರ್ ವಯಲೇಟ್ ಮಾಡಿದ್ದಾರೆ ಅವರ ಬಗ್ಗೆಯೂ ಎನ್‌ಕ್ವಯರಿಯಾಗಬೇಕು. ಸತ್ಯಾಂಶ ಹೊರಗೆ ಬರಬೇಕು. ಯಾರು ತಮ್ಮ ಅಧಿಕಾರವನ್ನು ದುರುಪಯೋಗವನ್ನು ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ದಯವಿಟ್ಟು ಸತ್ಯಾಂಶ ಹೊರಗೆ ಬರಬೇಕು. ತಾವೇ ಅದೇ ಖಾತೆಯನ್ನು ವಹಿಸಿಕೊಂಡಿರುವಾಗ ಎನ್‌ಕ್ವಯರಿ ಮಾಡಿಸುವುದಕ್ಕಾಗುವುದಿಲ್ಲ. ಸಿ. ಬಿ. ಐ ಎನ್‌ಕ್ವಯರಿ ಮಾಡಿಸಬೇಕು. ಏತಕ್ಕೆ ಬೇರೆಯವರ ಮೇಲೆ ಅಂದರೆ ಮಾನ್ಯ ಸೋಮಶೇಖರ್‌ರವರಮೇಲೆ ಲ್ಯಾಂಡ್ ತೆಗೆದುಕೊಂಡರು ಎಂದು ಅವರ ಮೇಲೆ ಮಾಡಿದಿರಿ ? ಮಾನ್ಯ ದೇವೇಗೌಡರು ಲ್ಯಾಂಡ್ ತೆಗೆದುಕೊಂಡರು ಎಂದು ಅವರಮೇಲೆ ಏತಕ್ಕೆ ಮಾಡಿದಿರಿ ? ಇದರಲ್ಲಿ ಗೌವರ್ನಮೆಂಟ್ ಲ್ಯಾಂಡ್ ಕೊಟ್ಟಿದ್ದಾರೆ. ಅದರ ಬಗ್ಗೆ ಇವರಲ್ಲಿ ೫.೨೦ ಗುಂಟೆ ಅರ್ಬನ್ ಸೀಲಿಂಗ್ ಆಕ್ಟನ್ನು ವಯಲೇಟ್ ಮಾಡಿ, ಗೌವರ್ನಮೆಂಟ್ ಸರ್ಕ್ಯುಲರ್‌ನ್ನು ವಯಲೇಟ್‌ಮಾಡಿ ತೆಗೆದುಕೊಂಡಿರುತ್ತಾರೆಂದು ತಮ್ಮಮೇಲೆ ಅಪಾದನೆ ಬಂದಿದೆ ಎಂದು ಹೇಳಿದಮೇಲೆ ತಾವೂಕೂಡ ಎನ್‌ಕ್ವಯರಿ ಮಾಡಿಸಬೇಕು. ಸಿ. ಬಿ. ಐ ಎನ್‌ಕ್ವಯರಿ ಇಮ್‌ಪಾರ್ಷಿಯಲ್‌ಆಗಿ ಮಾಡಿ ನ್ಯಾಯ ಸಿಗಬೇಕು. ಜನರಿಗೆ ನ್ಯಾಯ ಸಿಗಲಿ ಎನ್ನುವುದಾದರೆ ಮಾನ್ಯಮುಖ್ಯಮಂತ್ರಿಗಳು ಸಿ. ಬಿ. ಐ. ಎನ್‌ಕ್ವಯರಿಗೆ ಒಪ್ಪಲೇಬೇಕು. ಏನು ಇರ್‌ರೆಗ್ಯುಲಾರಿಟಿಯಾಗಿದೆ ಅದೆಲ್ಲಾ ಬಯಲಿಗೆ ಬರಬೇಕು. ಇಲ್ಲದಿದ್ದರೆ ಅಲ್ಲಿಯೇ ಮುಚ್ಚಿ ಹೋಗುತ್ತದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಾವು ಮಾತನಾಡಿ.

(ಮಾನ್ಯ ಬಂಗಾರಪ್ಪನವರು ಮಾತನಾಡಲು ಅನುವಾಗುವುದರಲ್ಲಿ ಹಿಂಬದಿಯ ಸೀಟಿನಲ್ಲಿರುವ ಸದಸ್ಯರು ಮಾತನಾಡುತ್ತಿರುವುದನ್ನು ಅಧ್ಯಕ್ಷರು ಗಮನಿಸಿ ಗಲಾಟೆ ಮಾಡಬಾರದೆಂದು ಎಚ್ಚರಿಸಿದರು)

ಶ್ರೀ ಆರ್. ರಾಮಪ್ಪ.—ನೋಡಿ ಮಾನ್ಯ ಅಧ್ಯಕ್ಷರೇ ಆಕಡೆಯ ಸದಸ್ಯರು ಫ್ರೋಪರ್ಸ್ ಲೋಪರ್ಸ್ ಎಂದು ಮಾತನಾಡುತ್ತಿದ್ದಾರೆ, ಈ ರೀತಿ ಮಾತನಾಡುವುದು ಅವರಿಗೆ ಸರಿಯಲ್ಲ. ಫ್ರೋಪರ್ಸ್ ಲೋಪರ್ಸ್ ಎಂದು ಈ ರೀತಿ ಮಾತನಾಡಬಹುದೇ ?

ಅಧ್ಯಕ್ಷರು.—ಮಾನ್ಯ ರಾಮಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ನೀವೆ ನಿಮ್ಮ ಕಡೆ ಸದಸ್ಯರು ಮಾತನಾಡಲು ಎದ್ದುನಿಂತಾಗ ಈರೀತಿ ಇಂಟರಪ್ಟ್ ಮಾಡಿ ಡಿಸ್ಟರ್ಬ್ ಮಾಡಬಹುದೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾರೀಖುವಾರು ವಿವರಗಳನ್ನು ಮಾನ್ಯ ವಿರೋಧಪಕ್ಷದ ನಾಯಕಿಯವರು ಮತ್ತು ಉಪನಾಯಕರು ಕೊಟ್ಟುಬಿಟ್ಟಿದ್ದಾರೆ. ನಾನು ಮತ್ತೆ ಪುನಃ ವಿವರಗಳಿಗೆ ಈ ಸಂದರ್ಭದಲ್ಲಿ ನಮ್ಮ ಮುಂದಿರತಕ್ಕಂಥ ಪ್ರಶ್ನೆ ಈವತ್ತು, ಕಾನೂನು ಸರ್ಕಾರದ ಹತ್ತಿರ ಇದ್ದಾಗ ಆ ಕಾನೂನನ್ನು ಪರಿಪಾಲನೆ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು. ಕಾನೂನು ಚೌಕಟ್ಟಿನಲ್ಲಿ ಕೆಲಸಕಾರ್ಯಗಳನ್ನು ನಡೆಸಬೇಕು ಎನ್ನುವುದು ಎಲ್ಲರ ಸದಿಚ್ಛೆಯಾಗಿರುತ್ತದೆ. ನಾನು ಇಂಥ ವಿಚಾರವನ್ನು ಪ್ರಸ್ತಾಪ ಮಾಡಿದರೆ ನಮ್ಮ ಮೇಲೆ ಆಪಾದನೆ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಈ ಸದನದಲ್ಲಿ ಕೇಳಿದ್ದೇನೆ. ಅನ್ಯಾಯವಾಗಿ ಆಪಾದನೆಯನ್ನು ಸರ್ಕಾರದ ಮೇಲಾಗಲಿ ಅಥವಾ ಸರ್ಕಾರಕ್ಕೆ ಸಂಬಂಧಪಟ್ಟ ಮಂತ್ರಿಮಂಡಲದ ಸದಸ್ಯರು ಯಾರೇ ಇರಬಹುದು, ಮುಖ್ಯ ಮಂತ್ರಿಗಳು ಇರಬಹುದು, ಅವರ ಮೇಲೆ ಆಪಾದನೆ ಮಾಡತಕ್ಕ ಆಸಕ್ತಿ ವಿರೋಧ ಪಕ್ಷದವರಿಗೆ ಎಳ್ಳಷ್ಟೂ ಇಲ್ಲ. ನಮ್ಮ ಮುಂದಿರತಕ್ಕ ವಿಚಾರ, ಇವತ್ತು ದೇಶದಲ್ಲಿ ವ್ಯವಹಾರ ಮಾಡಬೇಕಾದರೆ ಹಕ್ಕುಗಳು ಕಾನೂನು ಪ್ರಕಾರ ಇರಬಹುದು; ಕಾನೂನು ಪ್ರಕಾರ ವ್ಯವಹಾರ ಪ್ರಾರಂಭವಾಗಿ ಕಾನೂನು ಪ್ರಕಾರವೇ ಮುಕ್ತಾಯವಾದರೆ ನಮ್ಮ ತಕರಾರು ಇಲ್ಲ. ಕಾನೂನು ಬಾಹಿರವಾಗಿ ಅಥವಾ ಕಾನೂನನ್ನು ಮುರಿದು ವ್ಯವಹಾರಗಳು ನಡೆದರೆ ಅಥವಾ ಕಾನೂನಿನ ಹೆಸರಿನಲ್ಲಿ ಅಧಿಕಾರ ದುರುಪಯೋಗ ನಡೆದರೆ, ಭ್ರಷ್ಟಾಚಾರಕ್ಕೆ ಸ್ಪಷ್ಟವಾದ ನಿದರ್ಶನ ಕಂಡುಬಂದರೆ ಆ ವಿಚಾರವನ್ನು ಚರ್ಚೆ ಮಾಡತಕ್ಕ ಹಕ್ಕು ಸದನಕ್ಕೆ ಇದೆ. ಜನತಾ ಪ್ರತಿನಿಧಿಗಳಾಗಿ ಇಲ್ಲಿ ನಾವು ಮಾಡತಕ್ಕ ಕರ್ತವ್ಯ ಅದು ಅದು. ನಾವು ಸದಾಕಾಲ ಕಾಯಬೇಕಾಗುತ್ತದೆ. ಈ ಮಾತನಾಡ ಬೇಕಾದರೆ ವಿರೋಧ ಪಕ್ಷದ ಸದಸ್ಯರಿಗೆ ಮಾತ್ರ ಸೀಮಿತ ಗೊಳಿಸಿ ಮಾತನಾಡುತ್ತಿಲ್ಲ. ಇದು ಆ ಕಡೆಯವರಿಗೂ ಅನ್ವಯವಾಗುತ್ತದೆ. ಏಕೆಂದರೆ ಯಾವುದೇ ಒಂದು ವಿಷಯವನ್ನು ಚರ್ಚೆಗೆ ಒಳಪಡಿಸಿ ಇತ್ಯರ್ಥ ಮಾಡಬೇಕೆಂಬ ಸಂದರ್ಭ ಬಹುಮತದ ಆಧಾರದ ಮೇಲೆ ಬಂದರೂ ಕೂಡ ನಾಳೆ ದಿವಸ ಅದನ್ನು ಜನತೆಯ ಮುಂದಿಟ್ಟು, ಜನತೆಯ ಮುಂದೆ ತೀರ್ಮಾನವಾಗತಕ್ಕದ್ದು ಅಷ್ಟು ಸುಲಭ ವಲ್ಲ. ದೃಷ್ಟಿಯಿಂದ ಹೇಳುತ್ತಿದ್ದೇನೆ ಸಚ್ಚಾರಿತ್ರ್ಯದ ಆಡಳಿತದ ಹಿನ್ನೆಲೆಯಲ್ಲಿ ಮಾತನಾಡತಕ್ಕವರು, ಸಚ್ಚಾರಿತ್ರ್ಯದ ಆಡಳಿತವನ್ನು ಜನಸಾಮಾನ್ಯರಿಗೆ ಕೊಡತಕ್ಕವರು ಮೊದಲು ಅದನ್ನು ಪರಿಪಾಲನೆ ಮಾಡುವುದನ್ನು ಕಲಿಯಬೇಕು, ಆಚರಣೆಗೆ ತರಬೇಕು. ಕೆಲವು ಸಂದರ್ಭಗಳಲ್ಲಿ ಮನೆತನದವರ, ಸಂಬಂಧಿಕರ ಮತ್ತು ಅತೀ ಸ್ನೇಹಿತರಾಗಿರತಕ್ಕವರು ಹೆಸರುಗಳು ಚರ್ಚೆಗೆ ಬರುತ್ತವೆ. ಇದು ಹಿಂದೆ ಕೂಡ ಆಗಿರತಕ್ಕದ್ದು ಉಂಟು. ಅಧಿಕಾರದಲ್ಲಿದ್ದಾಗ ಆಸ್ತಿ ಮಾಡಿಟ್ಟು ಅಧಿಕಾರಹೋದ ತಕ್ಷಣ ಕಳೆದು ಕೊಂಡಿರುವುದು ಉಂಟು. ತಮ್ಮ ಹೆಸರಿಗೆ ಮಾಡಿಕೊಂಡರೆ ಗೊತ್ತಾಗುತ್ತದೆ, ಸಂಬಂಧಿಕರ ಹೆಸರಿಗೆ ಮಾಡಿದರೆ ಗೊತ್ತಾಗುತ್ತದೆಂದು 24 ಗಂಟೆಗಳ ಕಾಲವೂ ತಮ್ಮ ಜೊತೆ ಸುತ್ತಾಡುವವರ ಹೆಸರಿಗೆ ಆಸ್ತಿ ಮಾಡಿಟ್ಟು ಅಧಿಕಾರ ಹೋದ ತಕ್ಷಣ ಆಸ್ತಿ ಯಾರ ಹೆಸರಿಗೆ ಇರುತ್ತದೆ ಅವರ ಕಡೆ ಹೋಗಿರುವುದು ಉಂಟು.

ಶ್ರೀ ಡಿ. ಟಿ. ಜಯಕುಮಾರ್.—ಫ್ರೆಂಡ್‌ಶಿಪ್ ಅಂದ್ರಲ್ಲ, ಫ್ರೆಂಟ್‌ಶಿಪ್‌ನಲ್ಲೇ ಈ ರೀತಿ ಆದರೆ ?.........

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಜಯಕುಮಾರ್‌ರವರೇ ನಿಮಗಿನ್ನೂ ಚಿಕ್ಕ ವಯಸ್ಸು, ನಿಮಗೆ ಅರ್ಥವಾಗುವುದಿಲ್ಲ. ನೀವು ಈ ಬಗ್ಗೆ ವಿವರ ಹೇಳಿದರೆ ಒಳ್ಳೆಯದು, ನಿಮ್ಮ ಮತಿಯಿಂದಲೇ ಬಂದರೆ ಕೆಲಸ ಬೇಗ ಮುಗಿಯುತ್ತದೆ.

ಶ್ರೀ ಬಿ. ರಾಚಯ್ಯ.—ಯಾರು ಆಸ್ತಿ ಮಾಡಿಕೊಂಡಿದ್ದಾರೆ ಅವರಿಗೆ ಪಾರ್ಲಿಮೆಂಟಿನಲ್ಲಿ ಕಾನೂನು ತಂದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾಡಿದ್ದಾರೆ. ಇದು ಮೊದಲೇ ರಿಜಿಸ್ಟರ್ ಆಗಿದೆ. ಇದು ಬೇನಾಮಿ ಏನಲ್ಲ.

ಶ್ರೀ ಬಿ. ರಾಚಯ್ಯ.—ಈಗಾಗಲೇ ಏನು ಆಯಿದೆ ಆಗಿದೆ ಅದರ ಪ್ರಕಾರ ಮಾಡುತ್ತೇವೆ

ಶ್ರೀ ಎಸ್. ಬಂಗಾರಪ್ಪ.—ಅಧಿಕಾರಕ್ಕೆ ಬಂದರು, ದುರುಪಯೋಗಪಡಿಸಿಕೊಂಡರು, ಆಮೇಲೆ ಅಧಿಕಾರ ಹೋಯಿತು, ಆಸ್ತಿಯೂ ಹೋಯಿತು ಎಂಬುದಕ್ಕೆ ಒಂದು ಉದಾಹರಣೆ ಕೊಟ್ಟೆ.

ಅಧ್ಯಕ್ಷರು.—ನಿಮ್ಮದು ನಾಂದಿ ಹೇಳುವುದರಲ್ಲೇ ಹತ್ತು ನಿಮಿಷ ಆಯಿತು, ಬೇಗ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಮಾತನಾಡುವಾಗ ಮಧ್ಯೆ ಬಂದರೆ ಏನು ಮಾಡುವುದು ಈ ಸಂದರ್ಭದಲ್ಲಿ ನೇರವಾಗಿರತಕ್ಕ ವಿಷಯು ಅಂದರೆ ಮುಖ್ಯ ಮಂತ್ರಿಗಳಿಗೆ ಸಂಬಂಧ ಇರತಕ್ಕಂತಹ ಆ ರೇವಜೀತ್ ಬಿಲ್ಡರ್ಸ್, ಅದಕ್ಕಾಗಿ ನಾವು ನೇರವಾಗಿ ಅಪಾದನೆ ಮಾಡುತ್ತಿದ್ದೇವೆ.

೬.೦೨ ಪಿ. ಎಂ.

ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡುತ್ತಿದ್ದೇವೆ. ಕುಮ್ಮಕ್ಕೂ ಕೂಡ ಇದೆ. ಇಲ್ಲಿ ಬಹಳ ನೀತಿಯನ್ನು ಪ್ರತಿಪಾದನೆ ಮಾಡತಕ್ಕ ಶ್ರೀಮಾನ್ ಲಕ್ಷ್ಮೀಸಾಗರ್ ಅವರ ಕೈಯಲ್ಲಿ ಈ ಇಲಾಖೆಯು ಇದ್ದಾಗ ಆಗಿರುವಂತಹದ್ದು.

ಶ್ರೀ ಎಂ. ರಘುಪತಿ.—ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ನಾವು ಪಾಯಿಂಟ್ ಆಫ್ ಆರ್ಡರ್‌ನ್ನು ಶ್ರೀಮಾನ್ ಖರ್ಗೆಯವರು ಮಾತನಾಡತಕ್ಕ ಸಂದರ್ಭದಲ್ಲೇ ಎತ್ತಿದ್ದೇನೆ. ಅದಕ್ಕೆ ತಾವು ರೂಲಿಂಗ್‌ನ್ನೂ ಕೂಡ ಕೊಟ್ಟಿದ್ದೀರಿ. ಅವರ ಮೇಲೂ ಈಗ ಕುಮ್ಮಕ್ಕು ಅಂತ ಹೇಳುತ್ತಿದ್ದಾರೆ. ಇದನ್ನು ತಾವು ಅಲೋ ಮಾಡಬೇಕೇ ಅಥವಾ ಬೇಡವೇ ಎಂಬುದನ್ನು ತಮ್ಮ ಅವಗಾಹನೆಗೆ ಬಿಡುತ್ತೇನೆ. ತಾವು ತೀರ್ಪನ್ನು ಕೊಡಬೇಕು. ನಾನು ಮತ್ತೆ ಅದನ್ನೇ ಹೇಳಬೇಕಾಗಿಲ್ಲ. ಮತ್ತೆ ಅದನ್ನೇ ಓದಿ ತಿಳಿಸ ಬೇಕಾಗಿಲ್ಲ, ಸ್ಪಷ್ಟವಾಗಿದೆ. ದಯವಿಟ್ಟು ತಾವು ಅವರನ್ನು ನಿಯಂತ್ರಣ ಮಾಡಬೇಕು. ತಮ ಮೂಲಕ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಪ್ರಸ್ತಾಪ ಮಾಡದೇ ಇರುವಂತಹದು ಒಳ್ಳೆಯದು. ಹೈಕೋರ್ಟಿನ ಎದುರು ಇದೇ ವಿಷಯ ಇದೆ. ಇದೇ ವಿಚಾರದಲ್ಲಿ ಚಾಲೆಂಜ್ ಮಾಡಿದ್ದಾರೆ. ಇದೇ ವಿಷಯದಲ್ಲಿ ಅಲ್ಲಿ ಚಾಲೆಂಜ್ ಆಗಿರುವಾಗ ಈ ರೀತಿಯಾಗಿ ಕುಮ್ಮಕ್ಕು ಎಂಬ ಪದಗಳನ್ನು ಉಪಯೋಗಿಸುವುದು ಸರಿಯಲ್ಲ. ಅದನ್ನು ಉಪಯೋಗಿಸದ ಹಾಗೆ ತಾವು ನಿಯಂತ್ರಣ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಹೆಸರನ್ನು ಏಕೆ ತೆಗೆದುಕೊಳ್ಳುತ್ತೀರಿ ? ಲ್ಯಾಪ್ಸಸ್ ಬಗ್ಗೆ ಬೇಕಾದರೆ ಹೇಳಿ. ಅವರು ಈಗಾಗಲೇ ಸಿ. ಐ.ಡಿ. ಸಿ. ಓ. ಡಿ. ವಿಚಾರಣೆಯಾಗಬೇಕೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಯಾರು ಹೇಳಿದ್ದಾರೆ, ಸಿ.ಓ.ಡಿ. ವಿಚಾರಣೆಯಾಗಬೇಕು ಅಂತ.

ಅಧ್ಯಕ್ಷರು.—ಒಟ್ಟಿನಲ್ಲಿ ಒಂದು ವಿಚಾರಣೆಯಾಗಬೇಕು. ಆಯಿತು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಕೇಳಿದ್ದನ್ನು ಬಿಟ್ಟು ಹೊಸದಾಗಿ ಹೇಳುತ್ತಿದ್ದೀರಲ್ಲಾ, ಯಾವ ವಿಚಾರಣೆಯನ್ನು ನಾವು ಕೇಳಿದ್ದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಿ. ಬಿ. ಐ. ವಿಚಾರಣೆ......

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಅಧ್ಯಕ್ಷರು ಸಿ.ಐ.ಡಿ. ಸಿ.ಓ. ಡಿ. ವಿಚಾರಣೆ ಅಂತ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಅವರು ಹೇಳಿದ್ದನ್ನು ಹೇಳಿದೆ. ನಿಮಗೆ ಏನು ಆಗಬೇಕೆಂಬುದನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮುಂಜಾನೆಯೇ ಹೇಳಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ಏನು ಉಪಯುಕ್ತ ಸಲಹೆಗಳನ್ನು ಕೊಡುತ್ತಾರೋ ಅದನ್ನು ತಕ್ಷಣವೇ ಜಾರಿಗೆ ತರುತ್ತೇನೆಂದು ಮುಂಜಾನೆಯೇ ಹೇಳಿದ್ದಾರೆ. ಆದ್ದರಿಂದ ಸಿ. ಬಿ. ಐ. ವಿಚಾರಣೆಯಾಗಬೇಕೆಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನನ್ನ ವಿಚಾರ ಇಷ್ಟೆ. ಬಿ. ಎಲ್. ನಾರಾಯಣಸ್ವಾಮಿ ಅಂಡ್ ಸನ್ಸ್ ಇವರಿಗೆ ಪರ್ಮಿಷನ್ ಅನ್ನು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ವಿನಾಯಿತಿ ಕೇಳಬೇಕಾದರೆ ಅವರು ಏನು ಕಾರಣ ಕೊಟ್ಟಿದ್ದಾರೆಂದರೆ ಸಾಲಗಳಿವೆ, ಅವುಗಳನ್ನು ತೀರಿಸಬೇಕಾಗಿದೆ ಎಂದು ಕೇಳಿದರು. ಇದರ ಬಗ್ಗೆ ಶ್ರೀಮಾನ್ ಭಜಂತ್ರಿ ಎನ್ನತಕ್ಕಂತಹವರು ಬಹಳ ಸ್ಪಷ್ಟವಾಗಿ ಕಡತದಲ್ಲಿ ಬರೆದಿದ್ದಾರೆ. Wherein they have stated that they have got some bank loans to be discharged. ಎನ್ನತಕ್ಕಂತಹ ವಿಚಾರವನ್ನು ಬಿಟ್ಟುಬಿಟ್ಟರೆ, ಅದೂ ಕೂಡ partly ಸುಮನನಗೆ ಗೊತ್ತಿದ್ದಹಾಗೆ; ಉಳಿದ ಯಾವುದಕ್ಕೂ ಡಾಕ್ಯುಮೆಂಟರಿ ಎವಿಡೆನ್ಸ್. ಸಾಲ ಮಾಡಿದ್ದೇವೆ ಎಂಬುದಕ್ಕೆ ಇಲ್ಲ. Bank loan discharge reason ಬಗ್ಗೆ ಶ್ರೀ ಭಜಂತ್ರಿ ಅವರು ತಮ್ಮ ನೋಟ್‌ನಲ್ಲಿ ಸ್ಪಷ್ಟವಾಗಿ ಬರೆದಿಟ್ಟುಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ರೀಸನ್ ಸರಿಯಾಗಿಲ್ಲ ಎನ್ನುವ ಕಾರಣಕ್ಕಾಗಿ ಎಂಬುದನ್ನು ಕೊಟ್ಟಿಲ್ಲ. ಬ್ಯಾಂಕ್ ಲೋನ್ ಬಹಳ ಕಡಿಮೆ ಹಣ. ೩೫ ಸಾವಿರ ರೂಪಾಯಿಗಳಷ್ಟೇ ಸಾಲ ಇದೆ. ಅದಕ್ಕಾಗಿ ಸಾಲ ತೀರಿಸುವುದಕ್ಕಾಗಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ಅವರಿಗೆ ಎಕ್ಸೆಂಪ್ಷನ್ ಕೊಡಬೇಕು ಅಂತ ಇದ್ದರೆ ಸರ್ಕಾರಕ್ಕೆ ಬರಬೇಕೇ ವಿನಃ ಬೇರೆ ಯಾವುದೇ ಕಾರಣಕ್ಕಾಗಿ ಕಡತ ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ರಿಜೆಕ್ಟ್ ಮಾಡಬಹುದು. because it is supporred do other documentry evidence or any other kind of evidence. ಎವಿಡೆನ್ಸ್ ಯಾವುದಾಗಲಿ ಇವತ್ತು ರೆಕಾರ್ಡಿನಲ್ಲಿಲ್ಲ. Here we see no order to that effect saying at least at least at least at a later stage, after Joint Secretary Bajentri writes. Parties went direct to the Minister handled him over certain documents wherein they have got so many loans to be discharged ಎನ್ನತಕ್ಕ ಮಾತನ್ನು ಬೇಕಾದರೂ ಅವರು ಹೇಳಿಬಿಟ್ಟಿದ್ದರೆ ಅದನ್ನಾದರೂ ನಾವು ಒಪ್ಪಬಹುದಾಗಿತ್ತು. ಆದರೆ ಅದೂ ಕೂಡ ಇದರಲ್ಲಿಲ್ಲ, ಆಮೇಲೆ ಇದರಲ್ಲಿ ಏನಾಗಿದೆ ಎಂದರೆ ಕೊಟ್ಟಿರತಕ್ಕ ಕಾರಣಗಳು ಸಂಪೂರ್ಣವಾಗಿ ಸತ್ಯವಾಗಿರತಕ್ಕ ಕಾರಣಗಳಿಲ್ಲ. ಎಕ್ಸೆಂಪ್ಷನ್ ಕೇಳಬೇಕಾದರೆ ಏನು ಕಾರಣಗಳನ್ನು ಹೇಳಿದ್ದಾರೆ, ಆ ಕಾರಣಗಳೂ ಇದರಲ್ಲಿಲ್ಲ. ಇದರ ಅರ್ಥ ಕೊಟ್ಟಿರತಕ್ಕ ಎಕ್ಸೆಂಪ್ಷನ್‌ಗೆ ಬೇರೆ ಕಾರಣಗಳು ಇರುತ್ತವೆ. ಅಧಿಕಾರದ ಒತ್ತಡದಿಂದ ಆಗಿರಬಹುದು. ಅಧಿಕಾರದ ದುರುಪಯೋಗ ಆಗಿರಬಹುದು. ಅಥವಾ ಅವರಿಗೆ ಬೇಕಾಗಿರತಕ್ಕ ಸಂಬಂಧಿಕರಿಗೆ ಸಹಾಯ ಮಾಡಿರತಕ್ಕ ವಿಚಾರ ಏನೂ ಇದರಲ್ಲಿ ಸಿಕ್ಕುವುದಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆಮೇಲೆ ಇದರಲ್ಲಿ ಒಂದು ಕೈಗೆ ಟಾರ್, ಇನ್ನೊಂದು ಕೈಗೆ ಬ್ರಷ್ ತೆಗೆದುಕೊಂಡು ನನ್ನ ಮುಖಕ್ಕೆ ಮಸಿ ಬಳಿಯುವುದಕ್ಕೆ ಹೊರಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ.

ಅಧ್ಯಕ್ಷರು.—ಮುಕ್ತಾಯ ಮಾಡಿ, ಅದನ್ನು ಏಕೆ ಹೇಳುತ್ತಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.—ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಜನ ನಿಮಗೆ ಮೊದಲು ಅಧಿಕಾರವನ್ನು ಕೊಟ್ಟರಲ್ಲಾ, ಆಗ ಅದಕ್ಕೂ ಮೊದಲೇ ನಿಮಗೆ ಟಾರು ಬ್ರಷ್‌ನ್ನು ಕೊಡಲಿಲ್ಲ. ಅವರು ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟರು. ಅವರು ನಿಮಗೆ ಅಧಿಕಾರವನ್ನು ಕೊಟ್ಟಿದ್ದು ಅಧಿಕಾರವನ್ನು ದುರುಪಯೋಗ ಮಾಡಬಾರದು. ಲಂಚಗುಳಿತನ ಮಾಡಬಾರದು, ಭ್ರಷ್ಟಾಚಾರ ಇರಬಾರದು, ಸ್ವಜನಪಕ್ಷಪಾತ ಇರಬಾರದು ಅಂತ ಹೇಳಿ ಅವರು ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟರು. ಆದರೆ ಅವರು ನಿಮಗೆ ಕೊಟ್ಟಂತಹ ಅಧಿಕಾರವನ್ನು ನೀವೇ ಒಂದು ಕೈಯನ್ನು ಬ್ರಷ್ ಮಾಡಿಕೊಂಡಿರಿ, ಇನ್ನೊಂದು ಕೈಯನ್ನು ಟಾರ್ ಮಾಡಿ ಇಟ್ಟುಕೊಂಡಿರಿ. ಪೂರ್ತಿ ಪ್ರಜಾಪ್ರಭುತ್ವ ಮುಖಕ್ಕೆ, ಪೂರ್ತಿ ಮೌಲ್ಯಾಧಾರಿತ ರಾಜಕಾರಣಕ್ಕೆ, ಪೂರ್ತಿ ನೀತಿ, ನ್ಯಾಯ ಸತ್ಯ ಏನೇನು ಇದೆಯೋ ಅಷ್ಟೂ ಮುಖಕ್ಕೆ ಮಸಿ ಬಳಿದು ಕಡೇ ಗಳಿಗೆಗೆ ಬಂದು ಕುಳಿತಿದ್ದಾರೆ. ಸ್ವಲ್ಪ ಮತ್ತೇನಾದರೂ ಬಾಕಿ ಇದ್ದರೆ ಹೇಳಿ. ಅದಕ್ಕೂ ಮಸಿ ಬಳಿದು ಕೂತುಬಿಡುತ್ತಾರೆ. ಆ ಮಟ್ಟಕ್ಕೆ ಬಂದಿರತಕ್ಕದ್ದು ಇದು. ಬೆಳಿಗ್ಗೆ ರೂಲ್ ೬೯ರ ಕೆಳಗೆ ಚರ್ಚೆಗೆ ಇದೆ ಎಂದಾಗ ನಾನು ಸುಮ್ಮನೆ ಸೂಚ್ಯವಾಗಿ ಹೇಳಿದೆ, ರೂಲ್ ೬೯ರ ಪ್ರಕಾರ ಚರ್ಚೆ ಇದೆ ಎಂದಮೇಲೆ ನಾನು ವಿವರಕ್ಕೆ ಹೋಗುವುದಿಲ್ಲ ಎಂದು ಕೂಡ ಹೇಳಿದೆ. ಹಿಂದೆ ನಾವು ಅಪಾದನೆ ಮಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅನ್ಯಾಯವಾಗಿ ಅಪಾದನೆ ಮಾಡುತ್ತಿದ್ದಾರೆ. ನಮ್ಮ ಮನೆಯಲ್ಲಿ ಚಿಕ್ಕಚಿಕ್ಕ ಮಕ್ಕಳು, ಮೊಮ್ಮಕ್ಕಳನ್ನು ಬಿಟ್ಟರೆ ಇನ್ನಾರನ್ನೂ ಕೂಡಾ ಅವರು ಬಿಟ್ಟಿಲ್ಲ ಎನ್ನತಕ್ಕ ಮಾತಾಡಿದರು. ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. "ಜೀತು" ಎನ್ನುವ ಮುಖ್ಯಮಂತ್ರಿಯವರ ಮೊಮ್ಮಗಳು......ಕ್ಷಮಿಸಬೇಕು. ಏಕೆಂದರೆ ವಿವರಕ್ಕೆ ಹೋಗಬೇಕೆಂದು ಆಸೆ ಅಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಏಕೆ ಡೀವಿಯೇಷನ್ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪ ಎತುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮೈನರ್ ಮಕ್ಕಳ ಹೆಸರಿಗೆ ಕಂಪನಿ ಮಾಡಿದ್ದಾರೆ.

(ಗೊಂದಲ)

ಶ್ರೀ ಎಸ್. ಆರ್ ಬೊಮ್ಮಾಯಿ.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಸ್. ಬಂಗಾರಪ್ಪ.—ಚಿಕ್ಕ ಚಿಕ್ಕ ಮಕ್ಕಳ ಹೆಸರಿನಲ್ಲಿ ಬಿಲ್ಡರ್ಸ್ ಮಾಡಿ...—

ಅಧ್ಯಕ್ಷರು.—ಸದನದಲ್ಲಿ ಯಾರು ಇಲ್ಲ ಅವರ ಹೆಸರನ್ನು ಎತ್ತುವುದು ಬೇಡ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಸ್. ಬಂಗಾರಪ್ಪ.—ನನಗೂ ಗೊತ್ತು ಪಾಯಿಂಟ್ ಆಫ್ ಆರ್ಡರ್. ದಯವಿಟ್ಟು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಈಗಾಗಲೇ ತಾವು ರೂಲಿಂಗ್ ಕೊಟ್ಟ ಹಾಗೆ ಈ ವಿಚಾರದಲ್ಲಿ ಹೈಕೋರ್ಟ್ ಮುಂದೆ ಇದೆ, ಎಂದರೆ relationship of the partners of the Chief Minister ಆ ಕಾರಣಕ್ಕಾಗಿ ಬರುವುದಿಲ್ಲ ಎರಡನೆಯದಾಗಿ specific allegations against the Minister ಮಾಡುವುದಿದ್ರೆ, ಬರವಣಿಗೆಯಲ್ಲಿ ಮೊದಲು ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಮತಿ ಕೆ. ಎಸ್ ನಾಗರತ್ನಮ್ಮ.—ಎಲ್ಲಾ ಜಗರ್‌ಜಾಹೀರಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜಗರ್‌ಜಾಹೀರಾಗಿದೆ. ಬಂಗಾರಪ್ಪನವರದು, ಎಲ್ಲರದ್ದೂ ಜಗರ್‌ಜಾಹೀರ್ ಆಗಿದೆ. ಜಗತ್ತಿನಲ್ಲಿ ಬಹಳ ವಿಚಾರಗಳು ಆದಿದ್ದಿವೆ. ಆ ವಿಷಯಬೇಡ. ಈ ಮನೆಯು ನಿಯಮಾವಳಿ ಪ್ರಕಾರ ನಾವು ನಡೆದುಕೊಳ್ಳಬೇಕು. ಪತ್ರಿಕೆಗಳಲ್ಲಿ ಬೇಕಾದಷ್ಟು ಬಂದಿರ ಬಹುದು. ಯಾವುದೇ ಮಂತ್ರಿ ಮೇಲೆ ಆರೋಪ ಮಾಡಬೇಕಾದರೆ, ಮೊದಲು ಬರವಣಿಗೆಯಲ್ಲಿ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ರೂಲ್‌ಬುಕ್ಕಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ಬುಕ್ಕಲ್ಲಿ ಅದು ಬರುವುದಿಲ್ಲ. ರೂಲ್ಸ್‌ನಲ್ಲಿ ವಿಷಯದ ಬಗ್ಗೆ ಚರ್ಚೆ ಮಾಡಬಹುದು. ಒಬ್ಬ ಮುಖ್ಯಮಂತ್ರಿ, ಮಂತ್ರಿ ಅಥವಾ ಸದಸ್ಯನ ಮೇಲೆ ವೈಯಕ್ತಿಕ ಆಪಾದನೆ ಮಾಡುವುದಾದರೆ ನೋಟೀಸ್ ಕೊಡಬೇಕಾಗುತ್ತದೆ. ನೋಟೀಸ್ ಕೊಟ್ಟು ಮೇಲೆ ಅಧ್ಯಕ್ಷರು ಅಲೋ ಮಾಡಬೇಕಾಗುತ್ತದೆ. ಆ ಕಾರಣಕ್ಕಾಗಿ ಈ ರೀತಿ ನೋಟೀಸ್ ಕೊಡದೇ ಆಪಾದನೆ ಮಾಡುವುದಕ್ಕೆ ಬರುವುದಿಲ್ಲ. ಇನ್ನೊಂದು ವಿಚಾರ. ಮುಖ್ಯಮಂತ್ರಿಯವರ ಮೊಮ್ಮಗಳ ಹೆಸರು ಜಿತಿ. (ಜಿ ಐ ಟಿ ಐ) ಜೀತೂ ಎನ್ನುವುದು ಬೇರೆ. (ಜಿ ಇ ಟಿ ಯು) ಜೀತು ಬೇರೆ, ಜಿತಿ ಬೇರೆ. ಯಾವುದನ್ನೋ ಹೇಳಿ ಇಲ್ಲಿ ಎತ್ತುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದನ್ನೆಲ್ಲಾ ಏಕೆ ಹೇಳುತ್ತಿದ್ದೀರಿ? ಜಿತಿ ಎಂದೇ ಹೇಗೆ ನೀವು ಹೇಳುತ್ತೀರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವಳ ಹೆಸರು ಜಿತಿ ಇದೆ. ಬರ್ತ್ ಸರ್ಟಿಫಿಕೇಟ್‌ನಲ್ಲೂ ಇದೆ. ಸ್ಕೂಲ್‌ನಲ್ಲೂ ಅದೇ ಇದೆ. ಜಿ ಐ ಟಿ ಐ ಎಂದೇ ಇದೆ. ಇದು ನನಗೆ ಗೊತ್ತಿರುವುದರಿಂದ ನಾನು ಹೇಳುತ್ತಿದ್ದೇನೆ, ಜೀತು ಅಲ್ಲ. ತಮ್ಮ ಕಲ್ಪನಾ ರಾಜ್ಯದಿಂದ ಕಟ್ಟುಕತೆ ಹೇಳುವುದಕ್ಕೆ ಇಲ್ಲಿ ಅವಕಾಶ ಇಲ್ಲ. ಮತ್ತೇ ರೇವು ಎನ್ನುವ ಹೆಸರು ಇರುವ ಮಕ್ಕಳು ಅವರ ಸಂಬಂಧೀಕರಲ್ಲೇ ಇಲ್ಲ. ರೇವು ಎನ್ನುವ ಮಕ್ಕಳ ಹೆಸರೇ ಇಲ್ಲ. ರೇವತೀ ಎನ್ನುವುದೂ ಇಲ. ರೇವು ಇಲ್ಲ. ರೇವತಿಯೂ ಇಲ್ಲ. ಆದಕೋಸ್ಕರ ನಾನು ಹೇಳುತ್ತಿದ್ದೇನೆ, ತಾವು ರೈಟಿಂಗ್‌ನಲ್ಲಿ ನೋಟೀಸ್ ಕೊಟ್ಟು ಬೇಕಾದಷ್ಟು

ಚರ್ಚೆ ಮಾಡಿ. ಅವಕ್ಕೆ ನಾವು ಅಂಜಿಕೊಳ್ಳುವುದಿಲ್ಲ. ಬೇಕಾದಷ್ಟು ಸ್ಪೆಸಿಫಿಕ್ ಆದ ಅಪಾದನೆ ಮಾಡಿ ಅದರ ಬಗ್ಗೆ ಚರ್ಚೆ ಮಾಡಿ. First you have to give notice in writing. Without notice you can't speak.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಅವರ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೇನೆ. ದಯಮಾಡಿ ಲ್ಯಾಪ್ಸಸ್ ಬಗ್ಗೆ ಏನಾದರೂ ಇದ್ದರೆ ಹೇಳಿ, ನಿಮಗೆ ಕೊಟ್ಟ ೧೦ ಮಿನೀಟ್ ಈಗಾಗಲೇ ಮುಗಿಯಿತು. ದಯವಿಟ್ಟು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲ "ಜೀತು" ಅವರ ಪ್ರಕಾರ ಜಿತು. ಅಂತಹುದು ಏನಾದರೂ ದಾಖಲೆ ಇದ್ದರೆ ಕೊಡಿ ಅಂತಕೇಳಿದ್ದೇ ಅದೂ ಕೂಡ ಅವರ ಹತ್ತಿರ ಇಲ್ಲ. ನಿಮಗೂ ಗೊತ್ತಿಷ್ಟ ಹಾಗೆ ಅವರು ನಿಮ್ಮ ಮನೆಯ ಮೊಮ್ಮಗಳೂ ಅಲ್ಲ. ಅಥವಾ ನಮ್ಮ ಮನೆಯ ಮೊಮ್ಮಗಳು ಅಲ್ಲ. ನೀವು ಹೇಗೆ ಕೇಳಿ ತಿಳಿದುಕೊಂಡಿದ್ದೀರೋ ಹಾಗೇ ನಾನು ಕೂಡ ಕೇಳಿ ತಿಳಿದುಕೊಂಡಿದ್ದೇನೆ. ನಿಮ್ಮ ಪ್ರಕಾರ "ಜಿತಿ"ಯಾದರೆ, ನನ್ನ ಪ್ರಕಾರ "ಜಿತು". ಅದಲ್ಲ ಎಂಬುದಕ್ಕೆ ನಿಮ್ಮಲ್ಲಿ ದಾಖಲೆ ಏನಾದರೂ ಇದ್ದರೆ ಕೊಡಿ ಆಮೇಲೆ ನೋಡೋಣ.

Sri S.R. Bommai.—Without notice, he cannot make allegations ಅವರು ಹೇಳಿದ್ದೇನೆಲ್ಲಾ ಕಡತದಿಂದ ತೆಗೆಯಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ......

ಅಧ್ಯಕ್ಷರು.—ನಿಯಮ ೩೧೧ರ ಪ್ರಕಾರ

"No allegation of the defematory or incrimintory nature shall be made by a member against any person unless the member has given previous intimation to the Speaker and also to the mioister concerned so that the minister may be able to make investigation into the maater or the purpose of reply"

ಆದ್ದರಿಂದ ದಯವಿಟ್ಟು ಲ್ಯಾಪ್ಸಸ್ ಬಗ್ಗೆ ಹೇಳಿ. ೧೦ ನಿಮಿಷ ಆಗೇ ಹೋಯಿತ್ತು. ದಯವಿಟ್ಟು ಮುಗಿಸಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ತಮ್ಮ ಗಮನಕ್ಕೆ ತರಬೇಕಾದಂತಹ ವಿಚಾರ ಏನು ಇದೆ ಅಂದರೆ.........

ಅಧ್ಯಕ್ಷರು.—ನೀವು ಸೀಜನ್ ಪಾಲಿಟಿಷಿಯನ್. ಕೊಟ್ಟಂತಹ ಸಮಯದಲ್ಲಿ ನಿಮ್ಮ ಭಾಷಣ ವನ್ನು ಮುಗಿಸಬೇಕು. ಈಗಾಗಲೇ ನಿಮಗೆ ಕೊಟ್ಟಂತಹ ಸಮಯ ಮುಗಿದಿದೆ. ಮುಗಿಸಿಬಿಡಿ.

ಡಾ॥ ಜೀವರಾಜ್ ಆಳ್ವ.—ಬೇಕಾದ್ದು ಹೇಳಿ, ಬೇಕಾದ್ದನ್ನು ಮಾಡಿ. ಚಿಕ್ಕ ಮಗು ಮೊಮ್ಮ ಗಳ ಹೆಸರನ್ನು ಮಾತ್ರ ಬದಲಾಯಿಸಬೇಡಿ.

ಶ್ರೀ ಎಸ್. ಬಂಗಾರಪ್ಪ.—ಅದನ್ನೇ ನೀವು ಮಾಡಬೇಡಿ ಅಂತ ಹೇಳುತ್ತಿದ್ದೇನೆ.

ಡಾ॥ ಜೀವರಾಜ ಆಳ್ವ.—ಅದನ್ನೇ ನಾನು ಹೇಳುತ್ತಿದ್ದೇನೆ. ಎಷ್ಟಾದರೂ ಮಾಡಿ. ಆದರೆ ಎಲ್ಲಿಗೆ ಹೋಗುತ್ತಿದ್ದೀರಿ. ಏಕೆ ಹೀಗಾಯಿತು ಅಂತ,

ಶ್ರೀ ಎಸ್. ಬಂಗಾರಪ್ಪ.—ಎಲ್ಲರೂ ಹೇಳುವುದು ಅದನ್ನೇ. ನಾನು ಅಧ್ಯಕ್ಷರ ಮುಖಾಂತರ ನಿಮಗೆ ಅದನ್ನೇ ಹೇಳುತ್ತಿದ್ದೇನೆ. ನೀವುಯಾವ ಕೆಲಸ ಮಾಡುವುದಕ್ಕೆ ಹೋಗಿದ್ದೀರಿ. ಮತ್ತೊಂದು ತೊಟ್ಟಿಲನ್ನು ಹಾಕಿ ತೂಗುವುದಕ್ಕೆ ಹೋಗಬೇಡಿ ಅಂತ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಕೆಟ್ಟ ಮಾತುಗಳನ್ನು ಏಕೆ ಬಳಸುತ್ತಿದ್ದೀರಿ? ಮುಕ್ತಾಯ ಮಾಡಿ ದಯವಿಟ್ಟು.

ಶ್ರೀ ಎಸ್. ಬಂಗಾರಪ್ಪ.—ಆಯಿತಲ್ಲಾ ಮಧ್ಯೆ ಮಧ್ಯೆ ಅವರು ಮಾತನಾಡಿದರೆ ನಾನು ಏನು ಮಾಡಬೇಕು.........ಈ ಸಂದರ್ಭದಲ್ಲಿ.........

(ಗೊಂದಲ)

ಸಿ.ಬಿ. ಐ. ವಿಚಾರಣೆಯನ್ನು ಮಾಡಬೇಕೆಂದು ಕೇಳಿದ್ದೇವೆ. ಸಿ. ಬಿ. ಐ. ವಿಚಾರಣೆ ಮಾಡಬೇಕೆಂದು ಕೇಳತಕ್ಕಂತಹ ಉದ್ದೇಶವೇನೆಂದರೆ, ಸಂಬಂಧ ಇರಬಹುದು, ಅಧಿಕಾರ ದುರುಪಯೋಗ ಇರಬಹುದು ಲ್ಯಾಂಡ್ ವ್ಯಾಲ್ಯುಯೇಷನ್ ಇರಬಹುದು, ಅಂಡರ್ ವ್ಯಾಲ್ಯುಯೇಷನ್ ಇರಬಹುದು ಹಾಗೆ ಕಾನೂನು ವಿಚಾರ ಇರಬಹುದು........

ಅಧ್ಯಕ್ಷರು.—ಆಯಿತು...

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ತಾವು ಹೇಳುವುದಾದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ದಯವಿಟ್ಟು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಮಾತನಾಡಿ ಮುಗಿಸತಕ್ಕಂತಹ ಹಂತದಲ್ಲಿದ್ದಾಗ ತಾವು ಅಧ್ಯಕ್ಷರಾಗಿ ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಕೊನೆಯದಾಗಿ ಹೇಳಿ, ಏನು ಆಗಬೇಕೆಂಬುದನ್ನು ಹೇಳಿ.

ಶ್ರೀ ಎಸ್.ಬಂಗಾರಪ್ಪ.—ಏನು ಕೆಲಸ ಮಾಡುತ್ತಿದ್ದೀರಿ? ನಮಗೂ ಜವಾಬ್ದಾರಿ ಇದೆ. ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ.

(ಗೊಂದಲ)

ಮಾನ್ಯ ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿರಿ ಅವರ ಪಾಯಿಂಟ್ ಆಫ್ ಆರ್ಡರ್ ಹೇಳಿದ ಮೇಲೆ ರೂಲಿಂಗನ್ನು ಕೊಡುವುದಕ್ಕಿಂತ ಮುಂಚೆ ನಮ್ಮನ್ನು ಹಿಯರ್ ಮಾಡುವುದು ಬೇಡ ನಮ್ಮನ್ನು ಹಿಯರ್ ಮಾಡುವ ಮೊದಲೆ ಹೇಗೆ ರೂಲಿಂಗ್ ಕೊಡುತ್ತೀರಿ ? ಇದನ್ನು ಬಿಡಬೇಕು. ಸರ್ಕಾರ ತೆಗೆದುಕೊಳ್ಳುತ್ತದೆಂದು ಅಲ್ಲ. ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ ಮೇಲೆ ನಮ್ಮ ಕಡೆಯಿಂದಲೂ ಆ ಬಗ್ಗೆ ಕೇಳಿ ನಂತರ ರೂಲಿಂಗ್ ಕೊಡಬೇಕು.***

ಅಧ್ಯಕ್ಷರು.— ಏಕೆ ಹೀಗೆ ಮಾತನಾಡುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಏನು ರೂಲಿಂಗ್ ಕೊಟ್ಟಿದ್ದೀರಿ ?

ಅಧ್ಯಕ್ಷರು.—(1) ನಿಮಿಷ ಆಯಿತು ಮುಗಿಸಿ,

ಶ್ರೀ ಎಸ್. ಬಂಗಾರಪ್ಪ.— ರೂಲಿಂಗ್ ಕೊಡುವುದಕ್ಕಿಂತ ಮುಂಚೆ ನಮ್ಮ ಕಡೆಯಿಂದ ಕೇಳುವುದು ಬೇಡ ? ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ ಮೇಲೆ ನಮ್ಮ ಕಡೆಯಿಂದ ಕೂಡ ಕೇಳಿ ಆಮೇಲೆ ರೂಲಿಂಗ್ ನೀಡುವುದು ? ಅದನ್ನು ಬಿಟ್ಟು *** ಕೊಡುವಂತಹದ್ದು ಹೇಗೆ ?

ಅಧ್ಯಕ್ಷರು.—ಆಯಿತು ಮುಕ್ತಾಯ ಮಾಡಿ ದಯವಿಟ್ಟು.

ಶ್ರೀ ಎಸ್. ಬಂಗಾರಪ್ಪ.—ಮುಕ್ತಾಯ ಮಾಡೋಣ. ಮುಕ್ತಾಯ ಮಾಡುವುದಕ್ಕೂ ಒಂದು ರೀತಿ ನೀತಿ ಇರುತ್ತದೆ. ಆದ್ದರಿಂದ ಈ ಬಗ್ಗೆ ಸಿ. ಬಿ. ಐ. ವಿಚಾರಣೆಯಾಗಬೇಕು. ಸಂಬಂಧಿಸಿದವರ ಹೆಸರಿನಿಂದ ಹಿಡಿದು ಅಧಿಕಾರ ದುರುಪಯೋಗದವರೆಗೂ ಈ ರೀತಿಯ ಎಲ್ಲಾ ವಿಚಾರ ಸಂಪೂರ್ಣವಾಗಿ ತನಿಖೆ ಒಳಪಡಬೇಕು. ಸರ್ಕಾರದ ಒಡೆತನದಲ್ಲಿ ಇರತಕ್ಕ ಸಿ. ಓ. ಡಿ.ಗೆ ಇದನ್ನು ತನಿಖೆ ಮಾಡುವುದಕ್ಕೆ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಇದೊಂದು ವೆರಿ ಬಿಗ್ ಮ್ಯಾಟರ್. ಇಂತಹ ವಿಚಾರವನ್ನು ವಿಚಾರಣೆಗಾಗಿ ಇವರ ಕೈಗೆ ಕೊಟ್ಟುಬಿಟ್ಟರೆ ಮನಸ್ಸಿಗೆ ಬಂದ ಹಾಗೆ ಬರೆಸಿ ಇಡತಕ್ಕಂತಹ ವ್ಯವಹಾರ ಇದರಲ್ಲಿ ಆಗುತ್ತದೆ. ಅವರು ಇವರ ಕಂಟ್ರೋಲ್‌ನಲ್ಲಿರತಕ್ಕ ಇಲಾಖೆಯಾಗಿರುವುದರಿಂದ ಆ ದೃಷ್ಟಿಯಿಂದ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಸಿ. ಬಿ. ಐ. ಗೆ ಕೊಡತಕ್ಕ ಸಂಪೂರ್ಣ ಜವಾಬ್ದಾರಿ ಮನಸ್ಸು ಹೊತ್ತು, ನೀತಿ ಪಾಠವನ್ನು ಈ ದೇಶಕ್ಕೆ ಏನು ಇಲ್ಲಿಯವರೆಗೆ ಹೇಳುತ್ತಾ ಬಂದಿದ್ದಾರು, ಇತ್ತೀಚೆಗೆ ಅವರ ನೀತಿ ಪಾಠ ನಿಂತು ಹೋಗಿದೆ. ಅದರ ಬಗ್ಗೆ ಸಂಪೂರ್ಣ ತನಿಖೆಯಾಗಿ ಜನರ ಮನಸ್ಸಿನಲ್ಲಿರತಕ್ಕ ಸಂಶಯವನ್ನು ನಿವಾರಣೆ ಆಗಲೇಬೇಕು. ಅವರ ನೀತಿಪಾಠ ಏನು ಇದೆ ಅದರಂತೆ ನೆರವೇರಿಸಿ ಕೊಡಬೇಕೆಂಬುವುದೇ ನಮ್ಮ ವಾದ.

(* * * Expunged as ordered by the SPeaker)

ಶ್ರೀ ಎಂ. ರಘುಪತಿ.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ತಮ್ಮನ್ನು ಉದ್ದೇಶಿಸಿ ಮಾನ್ಯ ಬಂಗಾರಪ್ಪನವರು ಭಾಷಣ ಮಾಡುತ್ತಾ ಪಕ್ಷಪಾತದಿಂದ ವರ್ತನೆ ಮಾಡುತ್ತಿದ್ದೀರಿ ಎಂದು ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆದುಹಾಕಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಏನು ಹೇಳಿದರು ಅಂದರೆ ಪಕ್ಷಪಾತ ಮಾಡುತ್ತೀರಿ ಎಂದು ಹೇಳಿದ್ದಾರೆ, ನಾನು ಹೇಳುವುದನ್ನು ಇಲ್ಲಿ ಕೇಳಿ, ನಾನು ಪಕ್ಷಪಾತ ಮಾಡುವುದಕ್ಕೆ ಸಾಧ್ಯವೇ ಇಲ್ಲ. ತಾವೆಲ್ಲಾ ೨೨೪ಜನ ನನ್ನನ್ನು ಸರ್ವಾನುಮತದಿಂದ ಆರಿಸಿದ್ದೀರಿ. ಅವರಿಗೂ ರಕ್ಷಣೆ ಕೊಡಬೇಕು, ಇವರಿಗೂ ರಕ್ಷಣೆ ಕೊಡಬೇಕು. ನಿಯಮಾವಳಿಗಳ ಚೌಕಟ್ಟಿನಲ್ಲಿ ನಾನು ಕೆಲಸ ಮಾಡಬೇಕು. ನಾನು ಪಕ್ಷಪಾತ ಯಾವಾಗಲೂ ಇಲ್ಲ. ನಾನು ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಧರ್ಮಸಿಂಗ್‌ರವರು ಭಾಷಣ ಮಾಡುವುದಕ್ಕೆ ಮೊದಲು ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ ಆ ಮಂತ್ರಿಗಳು (ಶ್ರೀ ಎಂ. ರಘುಪತಿ) ನಾವು ಹೇಳುವುದು ಮುಗಿಯುವವರೆಗೂ ಅವರು ಏಳಬಾರದೆಂದು ಹೇಳಿ. ಅವರು ಮಧ್ಯೆ ಮಧ್ಯೆ ಎದ್ದು ಮಾತನಾಡಬಾರದೆಂದು ಹೇಳಿ, ಅವರು ಯಾವಾಗಲೂ ಎದ್ದು ಮಾತನಾಡುತ್ತಿರುತ್ತಾರೆ.

ಅಧ್ಯಕ್ಷರು.—ಪಕ್ಷಪಾತಿ ಎನ್ನುವುದು ಸರಿಯಲ್ಲ ಅದನ್ನು ಎಕ್ಸ್‌ಪಂಜ್ ಮಾಡಿರೆಂದು ಹೇಳಿದ್ದೇನೆ. ನೀವು ಏತಕ್ಕೆ ಹೇಳಿದ್ದೀರಿ ಅದನ್ನು ವಾಪಸ್ಸು ತೆಗೆದುಕೊಳ್ಳಿಯೆಂದು ಹೇಳ ಬೇಕಾಗಿಯೂ ಇಲ್ಲ. ಏನೋ ಒಮ್ಮೊಮ್ಮೆ ಉದ್ದೇಶಿಸಿ ಮಾತನಾಡುವಾಗ ಏನೋ ಒಂದು ಪ್ರವಾಹದಿಂದ ಹೇಳುತ್ತಾರೆ ಅದನ್ನು ನಾವು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾಗಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಧ್ಯೆ ಮಧ್ಯೆ (ಶ್ರೀ ಎಂ. ರಘುಪತಿಯವರು) ಏಳುವುದು ಬೇಡವೆಂದು ಹೇಳಿ.

ಅಧ್ಯಕ್ಷರು.—ಆಯಿತು.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧಪಕ್ಷದ ನಾಯಕಿಯವರು ಉಪ ನಾಯಕರು, ಬಂಗಾರಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ವಿಷಯದಲ್ಲಿ ನಾವು ಬಹಳ ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. ಈ ವಿಚಾರ ಹೈಕೋರ್ಟ್‌ನಲ್ಲಿದೆ ಎನ್ನತಕ್ಕ ಮಾತನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ಕೂಡ ಹೇಳಿದ್ದಾರೆ, ವೇದಾಂತ ಹೆಮ್ಮಿಗೆಯವರು ಹೇಳಿದ್ದಾರೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಏನಾಗುತ್ತಿದೆ ಯಾವರೀತಿಯಲ್ಲಿದೆ ಎಂಬುದನ್ನು ಜನರು ಪತ್ರಿಕೆಗಳಲ್ಲಿ ಓದುತ್ತಾರೆ. ಜನರ ಮನಸ್ಸಿಗೆ ಬರುವಹಾಗೆ ಸರ್ಕಾರದಿಂದ ಉತ್ತರ ಬರಬೇಕಾಗುತ್ತದೆ. ಇಲ್ಲಿ ನಾಲ್ಕು ಆಕ್ಟ್‌ಗಳು ಇನ್‌ವಾಲ್ವ್ ಆಗಿವೆ. ಇದರಲ್ಲಿ ಒಂದರಮೇಲೊಂದು ಕಾನೂನು ಬರುವುದರಿಂದ ಒಂದು ಹೋದರೆ ಮತ್ತೊಂದು ಬರುತ್ತದೆ ಎಲ್ಲಿಯಾದರೂ ಸಿಕ್ಕಿಬೀಳಲೇಬೇಕು. ಫಸ್ಟ್ ಬರತಕ್ಕದ್ದು ಲ್ಯಾಂಡ್ ರಿಫಾರಮ್ಸ್ ಆಕ್ಟ್ ಸೆಕ್ಷನ್ ೭೯ ನಲ್ಲಿ ಒಂದು ಕಂಪನಿ cannot hold agricultural land ಎಂದಿದೆ. ಅಗ್ರಿಕಲ್ಚರಲ್ ಲ್ಯಾಂಡ್ ೩೪ಎಕರೆ ೨೪ಗುಂಟೆ ಏನಿದೆ ಅನು ನಾರಾಯಣಸ್ವಾಮಿಯವರದು. ಪ್ರಪ್ರಥಮವಾಗಿ ಅಗ್ರಿಕಲ್ಚರಲ್, ಲ್ಯಾಂಡ್ ನಾನ್ ಆಗ್ರಿಕಲ್ಚರಲ್ ಆಗಬೇಕಾದರೆ ಇಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಬರುತ್ತದೆ. ಅರ್ಬನ್ ಲ್ಯಾಂಡ್ ಸೀಲಿಂಗ್‌ನಲ್ಲಿ one cannot hold thousand square metres Again there is ಸೆಕ್ಷನ್ ೨೧ (ಬಿ) ಏನು ಹೇಳುತ್ತದೆ ? ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ತಂದದ್ದು ೧೯೭೬ರಲ್ಲಿ. ೧೯೭೬ಕ್ಕಿಂಥ ಮೊದಲೂ ಸಹ ಯಾರಿಗಾದರೂ ಹಾರ್ಡ್‌ಶಿಪ್ ಇದ್ದರೆ ಲಯಬಿಲಿಟೀಸ್ ಇದ್ದರೆ ಆಗ ಅವರು ಸರ್ಕಾರಕ್ಕೆ ಕನ್ವಿನ್ಸ್ ಮಾಡಿ, ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಸೆಕ್ಷನ್ ೨೧ (ಬಿ) ಪ್ರಕಾರ ಎಕ್ಸ್‌ಂಪಷನ್ ತೆಗೆದುಕೊಳ್ಳಬೇಕು Government has got power to exempt. ಇಲ್ಲಿ ಏನಾಗಿದೆ ಅಂದರೆ ಅದನ್ನು ಸರ್ಕಾರದ ಪತಿಯಿಂದ ಹೇಳಬೇಕು. ಲ್ಯಾಂಡ್ ರಿಫಾರಮ್ಸ್ ಆಕ್ಟ್ ಸೆಕ್ಷನ್ ೭೯ರಲ್ಲಿ ಇವತ್ತು ಅಗ್ರಿಕಲ್ಚರಲ್ ಲ್ಯಾಂಡ್ ನಾನ್ ಅಗ್ರಿಕಲ್ಚರ್ ಲ್ಯಾಂಡ್ ಆಗಿದೆಯೆನ್ನತಕ್ಕದ್ದು ಒಂದು ಪಾಯಿಂಟ್.

ಶ್ರೀ ರಮೇಶ್‌ಕುಮಾರ್.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದಂತಹ ವೇದಾಂತ ಹೆಮ್ಮಿಗೆಯವರು ಕ್ರಿಯಾಲೋಪವನ್ನು ಎತ್ತಿ ರಿಟ್ ಪಿಟಿಷನ್

ಕಾಪಿಯಲ್ಲಿರತಕ್ಕದ್ದನ್ನು ಪ್ಯಾರಾಪ್ಸೈಸ್ ಏನಿದೆ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಆ ರಿಟ್ ಪಿಟಿಷನ್ ಕಾಪಿ ತಮ್ಮಲ್ಲಿರಬೇಕು. ಅವರು ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ಎಲ್ಲವನ್ನೂ ಗವುನಿಸಿ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ತಾವು ನಿಯಂತ್ರಣ ಮಾಡುತ್ತೀರಿಯೆಂದು ನಾನು ಭಾವಿಸಿದ್ದೆ. ಶ್ರೀ ಭಾರ್ಗವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಇನ್‌ಕಮ್ ಟ್ಯಾಕ್ಸ್ ರೂಲ್ಸ್ ಉಲ್ಲಂಘನೆ ಆಗಿದೆಯೆಂದು ಹೇಳಿದರು. ಮತ್ತೆ ಈಗ ಮಿತ್ರರಾದ ಶ್ರೀ ಧರ್ಮಸಿಂಗ್ ಅವರು ಮಾತನಾಡುತ್ತಾ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಉಲ್ಲಂಘನೆ ಆಗಿದೆಯೆಂದು ಹೇಳಿದರು. ರಿಟ್ ಪಿಟಿಷನ್‌ನಲ್ಲಿ ಇವರ ಫಸ್ಟ್ ಪ್ರೇಯರ್ ಇರತಕ್ಕಂಥಾದ್ದೇ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕಾಂಟ್ರವೆನ್‌ಷನ್ ಆಗಿದೆ ಎಂದು. ತಮ್ಮ ಕಡೆಗೆ ರಿಟ್ ಪಿಟಿಷನ್ ಕಾಪಿ ಇಲ್ಲದಿದ್ದರೆ ನಾನು ಕಳಿಸಿಕೊಡುತ್ತೇನೆ. ನನಗೆ ತಿಳಿಯ ಬೇಕಾದದ್ದು ಇಷ್ಟು. ತಾವು ಏನು ರೂಲಿಂಗ್ ಕೊಟ್ಟಿದ್ದೀರಿ. ಪ್ರಿಸೈಡಿಂಗ್ ಆಫೀಸರ್ಸ್ ಕಾನ್‌ಫರೆನ್ಸ್‌ನಲ್ಲಿ ನಿರ್ಣಯ ಆಗಿರುವ ಪ್ರಕಾರ ಈ ರೀತಿ ಸಭೆಯನ್ನು ನಡೆಸುತ್ತೀರೋ ಇಲ್ಲದಿದ್ದರೆ ಹೊಸ ಸಂಪ್ರದಾಯ ಏನಾದರೂ ಈ ಸಭೆಗೆ ಹಾಕಿಕೊಡುತ್ತೀರೋ ನನಗೆ ಗೊತ್ತಿಲ್ಲ. ರಿಟ್ ಪಿಟಿಷನ್ ಕಾಪಿ ನನ್ನ ಹತ್ತಿರ ಇದೆ. ಬೇಕಾದರೆ ಅದನ್ನು ಕಳಿಹಿಸಿಕೊಡುತ್ತೇನೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಕಾಂಟ್ರಾವೆನ್‌ಷನ್ ಆಗಿದೆಯೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ಮಾತನಾಡುತ್ತಾ ಭಜಂತ್ರಿಯವರು ನೋಟ್ ಹಾಕಿರತಕ್ಕಂಥಾದ್ದು ಮತ್ತು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ವಯೋಲೇಷನ್ ಆಗಿರತಕ್ಕಂಥಾದ್ದನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಕೂಡ ರಿಟ್‌ಪಿಟಿಷನ್‌ನಲ್ಲಿ ಕವರ್ ಆಗಿದೆ. ಕೋರ್ಟ್ ನಿರ್ಣಯಕ್ಕಾಗಿ ಕಾದು ನಿಂತಿದೆ. ಯಾವುದನ್ನೂ ನಾವು ಚರ್ಚೆ ಮಾಡುವುದಕ್ಕೆ ಆಸ್ಪದ ಇಲ್ಲ. ಅಂಥಾದ್ದನ್ನು ಚರ್ಚೆ ಮಾಡಬಹುದು ಎನ್ನುವುದಾದರೆ ಅದು ಹೊಸ ಸಂಪ್ರದಾಯವಾಗುತ್ತದೆ. ಆಗ ನಾವು ಅದಕ್ಕೆ ಬದ್ಧರಾಗಿರಬೇಕು, ನಾನು ಬೇಡ ಎನ್ನುವುದಿಲ್ಲ.

ಅಧ್ಯಕ್ಷರು.—ಹೊಸ ಸಂಪ್ರದಾಯ ಏನೂ ಇಲ್ಲ. ಈಗ ಅವರೇನಾದರೂ ಡೀವಿಯೇಷನ್ ಮಾಡಿದರೆ, ನಿಯಮಗಳ ವ್ಯಾಪ್ತಿಯನ್ನು ಬಿಟ್ಟು ಮಾತನಾಡಿದರೆ, ಸಬ್‌ಜ್ಯೂಡಿಸ್‌ನಲ್ಲಿ ಇರುವುದನ್ನು ಎತ್ತಿ ಮಾತನಾಡಿದರೆ ಆಗ ಪಾಯಿಂಟ್ ಆಫ್ ಆರ್ಡರ್ ಎತ್ತಲಿಕ್ಕೆ ಸಾಧ್ಯವಿಲ್ಲ. ನಾನು ರೂಲಿಂಗ್ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ...

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಏನು ಎತ್ತಿದ್ದಾರೆ, ನಿಜ, ಅದರಲ್ಲಿ ಸತ್ಯಾಂಶ ಇದೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಏನು ವಯಲೇಟ್ ಆಗಿದೆ ಎಂದು ಹೇಳಿದ್ದಾರೆ ಮತ್ತು ರಿಟ್ ಪಿಟಿಷನ್‌ನಲ್ಲಿ ಇದೆಯೆಂದು ಹೇಳಿದ್ದಾರೆ. ಇದೆ ಅಂದಮೇಲೆ ಮತ್ತು ಅದನ್ನು ತೆಗೆಯಬೇಡಿ. ನಾನು ಮೊದಲೇ ನಿಮಗೆ ಹೇಳಿದ್ದೇನೆ. ಸಬ್‌ಜ್ಯೂಡಿಸ್ ವಿಚಾರ ಏನಿದೆ ಅದನ್ನು ಬಿಟ್ಟು ಮಾತನಾಡಿ ಎಂದು ಹೇಳಿದ್ದೇನೆ. ಶ್ರೀ ರಮೇಶ್‌ಕುಮಾರ್ ಅವರು ಪಾಯಿಂಟ್ ಆರ್ಡರ್ ಮೂಲಕ ಹೇಳಿದ್ದಾರೆ. ಅವರದ್ದೇನಾದರೂ ಡಿವಿಯೇಟ್ ಮಾಡಿದರೆ ಅದನ್ನು ಹೇಳುವುದು ಸಭೆಯ ಇತರ ಸದಸ್ಯರ ಕರ್ತವ್ಯ ಆಗಿರುತ್ತದೆ. ಅದನ್ನು ಶ್ರೀ ರಮೇಶ್‌ಕುಮಾರ್ ಅವರು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಥ್ಯಾಂಕ್ಸ್. ಅವರ ಪಾಯಿಂಟ್ ಆಫ್ ಆರ್ಡರ್‌ನ್ನು ನಾನು ಎತ್ತಿಹಿಡಿದಿದ್ದೇನೆ. ಶ್ರೀ ಧರ್ಮಸಿಂಗ್ ಅವರೇ, ದಯವಿಟ್ಟು ವ್ಯಾಪ್ತಿಯಲ್ಲಿ ಮಾತನಾಡಿ ಅವರೆಲ್ಲ ಈಗಾಗಲೇ ಮಾತನಾಡಿಬಿಟ್ಟಿದ್ದಾರೆ. ಮೂರು ಜನ ಮಾನ್ಯ ಸದಸ್ಯರುಗಳು ಹೇಳುವುದೆಲ್ಲ ಹೇಳಿಬಿಟ್ಟಿದ್ದಾರೆ. ನೀವು ಬೇರೆ ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಧರ್ಮಸಿಂಗ್.—ಇವತ್ತು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಲ್ಲಿ ಎಕ್ಸೆಂಷನ್ ಅದನ್ನು ಶ್ರೀ ನಾರಾಯಣಸ್ವಾಮಿಯವರಿಗೆ ಕೊಟ್ಟಿದ್ದಾರೆ......

ಅಧ್ಯಕ್ಷರು.—ಕಡೆಗೆ ನಾನು ಹೇಳುತ್ತೇನೆ. Out of the way ನೀವು ಮಾತನಾಡಿದಿರಿ ಎಂದರೆ I have to expunge all those words.

ಶ್ರೀ ಧರ್ಮಸಿಂಗ್.—ಯಾರು ಲೈನ್‌ಮೇಲೆ ಮಾತನಾಡುತ್ತಿದ್ದಾರೆ ಅವರಿಗೇ ಹೇಳುತ್ತಿದ್ದೀರಾ ನೀವು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಇದರಲ್ಲಿ ಪ್ರಾಣ ತ್ಯಾಗ ಆದರೂ ಕೂಡ ಈ ವಿಂಗಡಣೆಯನ್ನು ಅನುಸರಿಸಿ ಮಾತನಾಡುವುದಕ್ಕೆ ಪರಬ್ರಹ್ಮನಿಗೂ ಸಾಧ್ಯವಿಲ್ಲ. ಶ್ರೀ ರಮೇಶ್

ಕುಮಾರ್ ಅವರು ಆ ರೀತಿ ಮಾತನಾಡಿದರೆ ನಾನು ಅವರಿಗೆ ಶರಣಾಗತನಾಗುತ್ತೇನೆ. ಮಾತನಾಡುವವರಿಗೆ ಮಾತನಾಡುವುದಕ್ಕೆ ಬಿಟ್ಟುಬಿಡಿ. ಆಮೇಲೆ ಸರಿಯಿಲ್ಲವೆಂದರೆ ಎಕ್ಸ್‌ಪಂಜ್ ಮಾಡಿದರೆ ಆಯಿತು.

ಅಧ್ಯಕ್ಷರು.—ಪರಬ್ರಹ್ಮನಿಗೆ ಸಾಧ್ಯ ಇರಲಿಕ್ಕಿಲ್ಲ. ಆದರೆ ನಮ್ಮೆಲ್ಲರಿಗೆ ಸಾಧ್ಯವಿದೆ. ಈ ಪುಸ್ತಕ ಇದೆಯಲ್ಲಾ ನಾನು ಓದುತ್ತಿರುವುದು, ಅದು ಬೈಬಲ್ ಇದ್ದಹಾಗೆ. ಅದರ ಚೌಕಟ್ಟಿನಲ್ಲಿ ಮಾತನಾಡುವುದು ಎಲ್ಲರ ಕರ್ತವ್ಯ.

ಶ್ರೀ ಧರ್ಮಸಿಂಗ್.—ನಾನು ಹೇಳುತ್ತಿರುವುದು ಏನೆಂದರೆ ಇಲ್ಲಿ ನಾಲ್ಕು ಆ್ಯಕ್ಟ್‌ಗಳ ಉಲ್ಲಂಘನೆಯಾಗಿದೆ. ಅರ್ಬನ್ ಲ್ಯಾಂಡ್ ಸೀಲಿಂಗ್ ಆ್ಯಕ್ಟ್‌ನಲ್ಲಿ ಒಂದು ಪ್ರಾವಿಜನ್ ಇದೆ. ಶ್ರೀ ನಾರಾಯಣಸ್ವಾಮಿಯವರು ಜಮೀನು ಮಾಲೀಕರು ಅವರು ಅಪ್ಲಿಕೇಷನ್ ಕೊಟ್ಟಾಗ ೬೯ ಸಾವಿರ ರೂಪಾಯಿ ನನಗೆ ದೇನಾ ಬ್ಯಾಂಕಿನಲ್ಲಿ ಕೊಡಬೇಕಾಗಿದೆ ಎಂದು ಕೊಟ್ಟರು. ಆಗ ಜಾಯಿಂಟ್ ಸೆಕ್ರೆಟರಿಯವರು ೬೪ ಸಾವಿರ ರೂಪಾಯಿ ನಮಗೆ ಎಕ್ಸೆಂಪ್ಷನ್ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಫೈಲು ವಾಪಸ್ಸು ಆಯಿತು. ೧೯೭೬ಕ್ಕೆ ಮುಂಚೆ ಲ್ಯಾಂಡ್‌ಲಾರ್ಡ್‌ಗೆ ಅನ್‌ಡ್ಯೂ ಹಾರ್ಡ್‌ಶಿಪ್ ಇದ್ದರೆ ಫಸ್ಟ್ ಅಪ್ಲಿಕೇಷನ್‌ನಲ್ಲೇ ಐದು ಲಕ್ಷ, ಆರು ಲಕ್ಷ ಇದೆಯೆಂದು ಕೊಡಬಹುದಿತ್ತು, ವೈಟ್‌ಪೇಪರ್‌ನಲ್ಲಿ ೪ ಲಕ್ಷ ೭೬ ಸಾವಿರ ನನಗೆ ಲಯಬಿಲಿಟಿ ಇರತಕ್ಕದ್ದು ಎಂದು ಕೊಟ್ಟಿದ್ದಾರೆ. ಅದಕ್ಕೆ ಅನ್‌ಡ್ಯೂ ಹಾರ್ಡ್‌ಶಿಪ್ ಹಾಕಿದ್ದಿಲ್ಲ. ಅದರ ಮೇಲೆ ಎಕ್ಸೆಂಪ್ಷನ್ ಕೊಟ್ಟಿದ್ದರೆ ಅದು ತಪ್ಪು.

ಶ್ರೀ ರಮೇಶ್‌ಕುಮಾರ್.—ಮಾನ್ಯ ಧರ್ಮಸಿಂಗ್ ಅವರೇ, ರಿಟ್ ಪಿಟಿಷನ್ ಪ್ಯಾರಾ ೯ರಲ್ಲಿ ಈ ವಿಷಯ ಬಂದಿದೆ, ಆದ್ದರಿಂದ......

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಹಾಗಾದರೆ, ನಾವು ಏನು ಹೇಳಬೇಕು ? ಡಿಸ್ಕಷನ್ ಎಂದರೆ ಏನು ?

ಅಧ್ಯಕ್ಷರು,—ಈಗಾಗಲೇ ಮೂರು ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಇನ್ನು ಹೇಳುವುದು ಏನೂ ಉಳಿದಿಲ್ಲ. ಅವರು ಹೇಳದೇ ಬಿಟ್ಟಿರುವುದು ಏನಾದರೂ ಇದ್ದರೆ, ಅದನ್ನು ಹೇಳಿ.

ಶ್ರೀ ಧರ್ಮಸಿಂಗ್.—ನಾನು ಅವರು ಹೇಳದೇ ಬಿಟ್ಟಿದ್ದನ್ನೇ ಹೇಳುತ್ತಿದ್ದೇನೆ. ನಾರಾಯಣ ಸ್ವಾಮಿಯವರು, when he approached the Government first he said ನನಗೆ ದೇನಾ ಬ್ಯಾಂಕ್‌ನಲ್ಲಿ ೬೪ ಸಾವಿರ ರೂಪಾಯಿ ಕೊಡಬೇಕಾಗಿದೆ, ಅದಕ್ಕೆ ಕೊಡುವುದಕ್ಕಾಗು ವುದಿಲ್ಲವೆಂದು ಹೇಳಿ, ಎರಡನೇ ಸಾರಿ ೪ ಲಕ್ಷ ೭೬ ಸಾವಿರ ರೂಪಾಯಿಗಳ ಅಫಿಡವಿಟ್ ಕೊಟ್ಟಿದ್ದಾರೆ, ಮೂರನೆಯದು ಇವತ್ತು ಅಲ್ಲಿರತಕ್ಕಂಥ ಲ್ಯಾಂಡ್ ವ್ಯಾಲ್ಯೂ ಏನಿದೆ ಕನಿಷ್ಟ ೨ ಕೋಟಿ ೫೦ ಲಕ್ಷ...

ಶ್ರೀ ರಮೇಶ್ ಕುಮಾರ್.—ಪಾಯಿಂಟ್ ಆಫ್ ಆರ್ಡರ್. ರಿಟ್ ಪಿಟಿಷನ್ ಕಾಪಿ ತಮ್ಮ ಕಡೆ ಇಲ್ಲದೇ ಇದ್ದರೆ, ನಾನು ಕಳುಹಿಸಿಕೊಡುತ್ತೇನೆ. ಇದರಲ್ಲಿ ಪ್ಯಾರಾ ೯ರಲ್ಲಿ ನಾರಾಯಣಸ್ವಾಮಿ ಯವರಿಗೆ ೬೪ ಸಾವಿರ ರೂಪಾಯಿಗಳು ಸಾಲ ಇರುವುದು, ಈ ಎಲ್ಲಾ ವಿಚಾರಗಳನ್ನೂ ಇವರಲ್ಲಿ ಪ್ರಸ್ತಾಪ ಮಾಡಿದ್ದಾರೆ.....

ಶ್ರೀ ಎಂ. ರಾಮಪ್ಪ.—ನಾವು ಹೇಳುವುದನ್ನೆಲ್ಲಾ ಸಬ್‌ಜುಡೀಸ್ ಎಂದು ಹೇಳಿಕೊಳ್ಳು ತ್ತಿದ್ದಾರೆ......

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ದಯವಿಟ್ಟು ಸಬ್‌ಜುಡೀಸ್ ಎಂದರೆ ಏನು ಎಂಬುದಕ್ಕಾದರೂ ಡಿಸ್ಕಷನ್ ಮಾಡಿಬಿಡಿ, ಅಡ್ವೊಕೇಟ್ ಜನರಲ್ ಅವರನ್ನೂ ಕರೆಸಿ, ಇಲ್ಲಿ ಇದನ್ನು ಪ್ರಸ್ತಾಪ ಮಾಡಬಾರದು ಎಂದು ಎಲ್ಲೂ ಇಲ್ಲ......

ಶ್ರೀ ರಮೇಶ್ ಕುಮಾರ್.—ಎಲ್ಲೆಲ್ಲಿ ಪ್ರೆಜುಡೀಸ್ ಆಗಿದೆ ಅಲ್ಲೆಲ್ಲಾ ಸಬ್‌ಜುಡೀಸ್......

ಶ್ರೀ ಕೆ. ಹೆಚ್. ಶ್ರೀನಿವಾಸ್.—ರಿಟ್ ಪಿಟಿಷನ್‌ನಲ್ಲಿ ಹೇಳಿರುವುದನ್ನು ಇಲ್ಲಿ ಪ್ರಸ್ತಾಪ ಮಾಡಬಾರದು ಎಂದು ಎಲ್ಲೂ ಇಲ್ಲ. ಮಾನ್ಯ ವೇದಾಂತ ಹೆಮ್ಮಿಗೆಯವರು ಸಬ್‌ಜುಡೀಸ್ ಮೇಲೆ ಮಾತನಾಡಿದರೆ, ಅದು ಸಬ್‌ಜುಡೀಸ್ ಆಗುವುದಿಲ್ಲ......

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ್‌ರವರು ಏನೂ ಸರ್ವಜ್ಞರಲ್ಲ. ಅವರು ಸರ್ವಜ್ಞರು ಎಂದು ತಿಳಿದುಕೊಂಡಿದ್ದರೆ ಅದು ತಪ್ಪು.........

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಬ್‌ಜುಡೀಸ್‌ಗೂ, ಮಾನ್ಯ ಹೆಮ್ಮಿಗೆಯವರಿಗೂ ಏನು ಸಂಬಂಧ ? ಗೋಕುಲಾಷ್ಟಮಿಗೂ, ಇಮಾಮ್‌ಸಾಬ್‌ಗೂ ಇದ್ದ ಸಂಬಂಧ ಕೂಡ ಇಲ್ಲ......

ಶ್ರೀ ಧರ್ಮಸಿಂಗ್.—ಏಕೆ ತರಾತುರಿಯಿಂದ ಮಾಡಿದಿರಿ ? ಸ್ಟಾಂಪ್ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ನಮ್ಮ ಖಜಾನೆಗೆ ಬರಬೇಕಾದ ಹಣ ಬರಲಿಲ್ಲ. ಇದರಿಂದ ನಮ್ಮ ಖಜಾನೆಗೆ ಲುಕ್ಸಾನಾಗಿದೆ. ಇನ್ನು ೪ನೇ ಪಾಯಿಂಟು, ಇವತ್ತಿನ ದಿವಸ ಈ ತರಹದ ವ್ಯವಹಾರ ಇಲ್ಲಿ ೧೦ ಲಕ್ಷಕ್ಕೂ ಹೆಚ್ಚಿನ ವ್ಯವಹಾರ ಮಾಡತಕ್ಕಂಥ ಸಂದರ್ಭದಲ್ಲಿ, ಪರವಾನಗಿ ತೆಗೆದುಕೊಂಡು ಮಾಡತಕ್ಕಂತಾದ್ದು ಬರುತ್ತದೆ ಎನ್ನತಕ್ಕಂಥ ದೃಷ್ಟಿಯಲ್ಲಿ ಸರ್ಕಾರ ಹೆಚ್ಚಿನ ರೀತಿಯಲ್ಲಿ ಕಾಳಜಿ ವಹಿಸಿ, ಮಾಡಬೇಕಾಗಿತ್ತು ಅಲ್ಲಿ ಜಾಯಿಂಟ್ ಸಕ್ರೆಟರಿ ಕೂಡ ಒಪ್ಪಲಿಲ್ಲ, ಬೇರೆಯವರೂ ಒಪ್ಪಲಿಲ್ಲ. ಲ್ಯಾಂಡ್ ಆಕ್ಟ್ ವೈಲೇಟ್ ಆಗಿದೆ, ಅರ್ಬನ್‌ಸೀಲಿಂಗ್ ಆಕ್ಟ್ ವೈಲೇಟ್ ಆಗಿದೆ. ಸ್ಟಾಂಪ್ ಅಂಡ್ ರಿಜಿಸ್ಟ್ರೇಷನ್‌ನಿಂದ ಸಾಕಷ್ಟು ಹಾನಿಯಾಗಿದೆ. ಮತ್ತು ಇನ್‌ಕಮ್ ಟ್ಯಾಕ್ಸ್ ಅವಾಯ್ಡ್ ಮಾಡುತ್ತವೆಂದು ಈ ರೀತಿಯಾಗಿ ಪರವಾನಗಿ ಕೊಡುವುದಕ್ಕೆ, ಸರ್ಕಾರಕ್ಕೆ ಯಾವ ತರಹ ಪ್ರಮೇಯ ಬಂದಿತು, ಸಂದರ್ಭ ಇತ್ತು ಎಂಬ ಬಗ್ಗೆ ಈ ಸದನಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—೬೦–೬೫ ನಿಮಿಷ ಆಯಿತು, ಮುಕ್ತಾಯ ಮಾಡೋಣ. ನಾನು ಇದಕ್ಕೆ ೬೦ ನಿಮಿಷ ಎಂದು ಹೇಳಿದ್ದೆ, ಇದು ಒಂದು ತಾಸಿನ ಚರ್ಚೆ. ಈಗಾಗಲೇ ೬೫ ನಿಮಿಷ ಆಯಿತು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಶ್ರೀ ಶ್ರೀನಿವಾಸ್‌ರವರು, ಪಾಟೀಲರು ಮತ್ತು ಉಮರಬ್ಬ ಅವರು, ಈ ಮೂರು ಜನ ಮಾತನಾಡಲಿ—...

ಅಧ್ಯಕ್ಷರು.—ಹಾಗಾದರೆ ೫–೫ ನಿಮಿಷ ಮಾತನಾಡಿ. ಈಗ ಮಾನ್ಯ ಕೆ. ಹೆಚ್. ಪಾಟೀಲರು ಮಾತನಾಡಲಿ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ನಾನು 5 ನಿಮಿಷ ಕೂಡ ತೆಗೆದುಕೊಳ್ಳುವುದಿಲ್ಲ. ಈವರೆಗೆ ಸಂಬಂಧಿಸಿದ ವಿವರಣೆಯ ಸಲುವಾಗಿ ನಮ್ಮ ನಾಯಕರಯರವು ಮತ್ತು ಇನ್ನಿಬ್ಬರು ಸದಸ್ಯರು ಹೇಳಿದ್ದಾರೆ. ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಒಂದು ಮಾತನ್ನು ಇಲ್ಲಿ ಅತ್ಯವಶ್ಯವಾಗಿ ಲಕ್ಷ್ಯದಲ್ಲಿಡಬೇಕು. ಅದೇನೆಂದರೆ, ಅಡ್ಮಿನಿಸ್ಟ್ರೇಷನ್ ಮಾಡುವಾಗ ಅನೇಕ ಲೋಪದೋಷಗಳ ಬಗ್ಗೆ ಆರೋಪಗಳು ಬರುತ್ತದೆ, ಸತ್ಯವಾದ ಆರೋಪಗಳೂ ಬರುತ್ತವೆ, ಅಸತ್ಯವಾದ ಆರೋಪಗಳೂ ಬರುತ್ತವೆ. ನಾನು ಈ ಸದನದ ನಾಯಕರ ಮುಖಾಂತರ ಸರ್ಕಾರಕ್ಕೆ ಬಿನ್ನಹ ಮಾಡುವುದು ಇಷ್ಟೆ. ಏನೆಂದರೆ, ಮುಧೋಳ್‌ಕರ್ ಕಮೀಷನ್‌ರವರು ಒಂದು ಸಲಹೆ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ, even they have gone to the extent of mentioning in representation Act. ಮೆನ್‌ಷನ್ ಮಾಡುವ ಮಟ್ಟಕ್ಕೆ ಸಹಿತ ಹೋಗಿದ್ದಾರೆ. ಏನೇನು, "Who by his deliberate act or omission causes loss to the State Exchequer, who generally commits breaches of procedural rules..." ಪ್ರೊಸೀಜರ್ ರೂಲ್ಸ್ ಮಾಡಿದರೂ ಸಹಿತ ಆದರಿಂದ ಸ್ಟೇಟ್‌ಗೆ ಲಾಸ್ ಆಗುತ್ತಿದ್ದರೆ, ಅಂತಹ ಅಧಿಕಾರಿಗಳನ್ನು ವಿಜಿಲೆನ್ಸ್‌ಗೆ ರೆಫರ್ ಮಾಡಬೇಕೆನ್ನುವ ಮಾತನ್ನು ಆಗಲೇ ಹೇಳಿದ್ದಾರೆ. ಆಮೇಲೆ "Who has found guilty of Court of Law or a Commission of enquiry indulging in corruption or self-aggrandisement in any manner, who improperly confirmed benefits..." ಇದು ಆಯಿತು. ಇನ್ನು "who deliberately

6–30 ಪಿ.ಎಂ.

violates his oath of office" ಇದನ್ನು ಹೇಳಿದ್ದಾರೆ. ಇದಲ್ಲದೆ ಸಂತಾನಂ ಕಮಿಟಿಯವರೂ ಹೇಳಿದ್ದಾರೆ. ಯಾರ ಮೇಲಾದರೂ ತಕರಾರು ಬಂದರೆ 10 ಜನ ಸದಸ್ಯರು, 10 ಜನ ಪಾರ್ಲಿಮೆಂಟ್ ಸದಸ್ಯರು ತಕರಾರು ಮಾಡಿದರು ಎಂದರೆ, ಕಮಿಷನ್ ಆಫ್ ಎನ್‌ಕ್ವೈರಿ ನೇಮಕ

ಮಾಡಬೇಕೆಂಬ ದೃಷ್ಟಿಯಿಂದ ಹೇಳಿದ್ದಾರೆ. ಇದೇನೂ ಕಾನೂನು ಬದ್ಧವಾಗಿ ಅಲ್ಲ, ಆದರೂ ಸಹಿತ ನೀತಿಯು ನೆಲೆಗಟ್ಟನ್ನು ಹಾಕಿಕೊಂಡಿರತಕ್ಕ ಸರ್ಕಾರದ ಮೇಲೆ ಯಾವ ರೀತಿಯಿಂದಲಾದರೂ ಅಪಾದನೆ ಬಂದರೆ, ವಿಜಿಲೆನ್ಸ್‌ಗೆ ಹಾಕಲಿ. ಯಾವ ಮಂತ್ರಿಗಳು ಭಾಗಿದಾರರು ಎಂದು ಹೇಳುವ ಹವ್ಯಾಸಕ್ಕೆ ನಾನು ಈ ಸಂದರ್ಭದಲ್ಲಿ ಹೋಗುವುದಿಲ್ಲ. ಏನಾದರೂ ರೂಲ್ಸ್ ಆಫ್ ಪ್ರೊಸೀಜರ್ ವಯುಲೇಟ್ ಆಗಿದ್ದರೆ, ಅದನ್ನು ವಯಲೇಟ್ ಮಾಡಿರುವುದರಿಂದ ಸ್ಟೇಟ್ ಎಕ್ಸ್‌ಚೆಕ್ಕರ್‌ಗೆ ಲಾಸ್ ಆಗಿದ್ದರೆ ಈ ಲಾಸ್‌ಗೆ ಯಾರು ಹೊಣೆಗಾರರು ಎಂಬುದನ್ನು ನಿರ್ಧಾರ ಮಾಡುವುದಕ್ಕೆ ಲಕ್ಷಾವಧಿ ಖರ್ಚು ಮಾಡಿ ವಿಜಿಲೆನ್ಸ್ ಕಮಿಷನ್ ಎಂದರೆ ಲೋಕಾಯುಕ್ತ ಮಾಡಿದ್ದೀರಿ. ಇದನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿರಿ. ಸಿ.ಬಿ.ಐ.ಗೆ ಮಾಡುವುದು ತಡವಾಗುವ ಹಾಗಿದ್ದರೆ ಸಿ.ಬಿ.ಐ.ಗೆ ಫೈಂಡಿಂಗ್ಸ್ ಆದಮೇಲೆ ರೆಫರ್ ಮಾಡಬೇಕಾದರೆ, ಅದಕ್ಕಿಂತ ಮೊದಲು ಇದನ್ನು ಡಿಟರ್‌ಮೈನ್ ಮಾಡುವುದಕ್ಕೆ ಲೋಕಾಯುಕ್ತಕ್ಕೆ ಇದನ್ನು ರೆಫರ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನೆಕ್ಸ್ಟ್, ಮಾನ್ಯ ಉಮರಬ್ಬನವರು...

ಶ್ರೀ ಬಿ.ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ಅಪೋಸಿಷನ್ ಪಾರ್ಟಿಯವರು ಎಲ್ಲಾ ಕಡೆ ಲೀಡ್‌ನಲ್ಲಿದ್ದಾರೆ. ಇವರಿಗೆ 75 ನಿಮಿಷ ಅವಕಾಶ ಕೊಟ್ಟಿದ್ದೀರಿ, ಮತ್ತೆ ಇನ್ನೇನು ಕೊಡುತ್ತೀರಿ? ಅಪೋಸಿಷನ್ ಪಾರ್ಟಿಯವರು ಎಲ್ಲಾ ಕಡೆ ಲೀಡ್ ಆಗುತ್ತಿದ್ದಾರೆ ನಾವು ಹೋಗಬೇಕು...

ಅಧ್ಯಕ್ಷರು.—ಮಾನ್ಯ ನೀಲಕಂಠಪ್ಪನವರೇ, ಕೂಡಿರಿ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರೂ ಬರೆದುಕೊಟ್ಟಿದ್ದಾರೆ. ಅವರೂ ಕೂಡಾ ಮಾತನಾಡುತ್ತಾರೆ, ಅವರಿಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಉಮರಬ್ಬನವರೇ, ಹೌದು ಮುಗಿಸಿರಿ. ಮಾನ್ಯ ಪಾಟೀಲರು ಹೇಳಿದ ಹಾಗೆ ಹೇಳಿ ಬೇಗ ಮುಗಿಸಿರಿ.

ಶ್ರೀ ಬಿ.ಆರ್. ನೀಲಕಂಠಪ್ಪ.—ಅಧ್ಯಕ್ಷರೇ......

ಅಧ್ಯಕ್ಷರು.—ಮೂರು ಮಿನಿಟ್‌ನಲ್ಲಿ ಮುಗಿಸಿರಿ. ಉಮರಬ್ಬನವರೇ ಒಂದೆರಡು ಸೆಂಟೆನ್ಸ್‌ನಲ್ಲಿ ಹೇಳಿ ಮುಗಿಸಿರಿ. ಈ ಚರ್ಚೆ ಒಂದು ಗಂಟೆ ಒಳಗಾದರೂ ಮುಗಿಯಬೇಕು. ಅವರು ಮಾತ ನಾಡಿದರಲ್ಲಾ ಹಾಗೆ ಬೇಗ ಮೂರು ಮಿನಿಟ್‌ನಲ್ಲಿ ಮುಗಿಸಿ.

ಶ್ರೀ ಬಿ. ಎ. ಉಮರಬ್ಬ (ವಿಠಲ).—ಸನ್ಮಾನ್ಯ ಅಧ್ಯಕ್ಷರೇ, ಅತ್ಯಂತ ನಿರ್ಬಂಧಿತವಾದ ಪರಿಸ್ಥಿತಿಯಲ್ಲಿ ಒಂದು ನಿಗೂಢ ಸತ್ಯವನ್ನು ಭೇದಿಸುವಂತಹ ಅನಿವಾರ್ಯವಾದ ಕರ್ತವ್ಯವನ್ನು ನಾವು ಪಾಲಿಸುತ್ತಿದ್ದೇವೆ ಎಂದು ನನ್ನ ಪಾಲಿಗೆ ಅನ್ನಿಸುತ್ತಿದೆ. ಬಹಳ ಗಂಭೀರವಾದಂಥ ವಿಚಾರ ಎಂದು ಹೇಳಿ ಚರ್ಚೆಗೆ ತೆಗೆದುಕೊಳ್ಳುವಾಗ, ಆ ಚರ್ಚೆಯ ವ್ಯಾಪ್ತಿಯನ್ನು ಮೊಟಕುಗೊಳಿಸುವಂತಹ ಕೆಲಸ ಈ ಸದನದಲ್ಲಿ ಆಗುತ್ತಿರುವುದು ಅತ್ಯಂತ ವಿಷಾದನೀಯ. ನಾನು ಪ್ರಾರಂಭ ಮಾಡುವುದಕ್ಕೆ ಮೊದಲು ಒಂದು ಅನುಮಾನದ ಮೇಲೆ ನನಗೆ ಸ್ಪಷ್ಟೀಕರಣ ಬೇಕಾಗಿದೆ. ಈ ಪ್ರಕರಣದ ಬಗ್ಗೆ ಯಾರೋ ಕೋರ್ಟ್‌ಗೆ ಹೋಗಿದ್ದಾರೆ ಎನ್ನುವ ಅಭಿಪ್ರಾಯವನ್ನು ಆಡಳಿತ ಪಕ್ಷದ ಸಚಿವರ ಸರ್ವೇತವಾಗಿ ಎಲ್ಲರೂ ಹೇಳಿದ್ದಾರೆ. ನಾನು ಒಂದು ಸ್ಪಷ್ಟೀಕರಣ ಕೇಳುತ್ತಿದ್ದೇನೆ, ಕೋರ್ಟಿಗೆ ಇದು ಹೋಗಿದೆ, ಆದರೆ ಹೈಕೋರ್ಟಿನಲ್ಲಿ ಇದು ಅಡ್ಮಿಟ್ ಆಗಿದೆಯೋ ಎಂಬುದರ ಬಗ್ಗೆ ನಾನು ಸ್ಪಷ್ಟೀಕರಣ ಕೊಡಬೇಕು, ಯಾವುದೇ ಒಂದು ಕೇಸ್ ಹೈಕೋರ್ಟಿನಲ್ಲಿ ಅಡ್ಮಿಟ್ ಆಗಿಲ್ಲ ಎಂದರೆ ಅದು ಸಬ್‌ಜ್ಯುಡೀಸ್ ಆಗುತ್ತದೆಯೋ ಎಂಬುದನ್ನು ಹೇಳಬೇಕೆಂದು ಮೊದಲು ನಾನು ಕೇಳಿಕೊಳ್ಳು ತ್ತೇನೆ. ಆಮೇಲೆ ತಾವು ಕೊಟ್ಟ 5 ನಿಮಿಷನೋ ಹತ್ತು ನಿಮಿಷನೋ ನಾನು ಚರ್ಚೆಗೆ ಬಳಸಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಹೌದು ಮುಗಿಸಿರಿ. You come to the point.

ಶ್ರೀ ಬಿ.ಎ. ಉಮರಬ್ಬ.—ಇದು ಅಡ್ಮಿಟ್ ಆಗಿದೆಯೋ ? High Courtನಲ್ಲಿ ಅಡ್ಮಿಟ್ ಆಗದೇ ಇರುವಂತಹ ಕೇಸ್ ಸಬ್‌ಜ್ಯುಡೀಸ್ ಆಗುತ್ತದೆಯೋ ? ಕಾನೂನು ಮಂತ್ರಿಗಳು ಹೇಳಲಿ.

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬೇಕಾಗಿಲ್ಲ, ಅದು ಬೇಡ, ಈ ವಿಷಯದ ಬಗ್ಗೆ ನೀವು ಏನು ಹೇಳುವುದು ಇದೆ ಹೇಳಿ. ಚರ್ಚೆ ಶುರುವಾಗಿದೆ. ನೀವು ಈ ಪಾಯಿಂಟ್ ಬಗ್ಗೆ ಹೇಳುತ್ತೀರೋ ಇಲ್ಲ ಕ್ಲೋಸ್ ಮಾಡಲೋ?

ಶ್ರೀ ಬಿ.ಎ. ಉಸುರಬ್ಬ.—ಈ ಕೇಸ್ ಹೈಕೋರ್ಟಿನಲ್ಲಿ ಅಡ್ಮಿಟ್ ಆಗಿದೆಯೋ? ಹೈಕೋರ್ಟಿನಲ್ಲಿ ಅಡ್ಮಿಟ್ ಆಗದೇ ಇದ್ದರೆ ಸಬ್‌ಜ್ಯುಡೀಸ್ ಆಗುತ್ತದೆಯೋ?

MR. SPEAKER.—The matter is closed ಎಂದು ಹೇಳಿಬಿಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮೊದಲು ಏನೆಂದರೆ ಸಬ್‌ಜ್ಯುಡೀಸ್ ಆಗುತ್ತದೆ ಮಾತ ನಾಡಬೇಡಿ ಎಂದಿರಿ. ಇದಕ್ಕೆ ಸ್ಪಷ್ಟೀಕರಣ ಕನ್‌ಸರ್ನ್ಡ್ ಮಿನಿಸ್ಟರ್‌ರವರಿಂದ ಬರಲಿಲ್ಲ. ಏತಕ್ಕೆ ಅವರು ಸ್ಪಷ್ಟೀಕರಣ ಕೊಡಬಾರದು?

ಅಧ್ಯಕ್ಷರು.—ನೀವೇ ಹೇಳಿದರಲ್ಲರಿ, ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂದು. ನಾನು ಏತಕ್ಕೆ ಹೇಳಲಿ. ಹೈಕೋರ್ಟಿನಲ್ಲಿ ಅಡ್ಮಿಟ್ ಆಗಿದೆ ಆಗಿಲ್ಲ ಎಂದು ನಾನು ಏತಕ್ಕೆ ಹೇಳಲಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ನನಗೆ ಇವತ್ತು ಇದ್ದಂಥ ಮಾಹಿತಿ ಮೇಲೆ ಇದು ಅಡ್ಮಿಟ್ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆದರೆ once the matter is filed before the Court......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಡ್ಮಿಟ್ ಆಗದೇ ಇದ್ದರೂ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಡ್ಮಿಟ್ ಆಗಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ ಮೇಲೆ ಏನಾದರೂ ಇದ್ದರೆ ಹೇಳಿ. ಒಂದು ದಾವೆಗೆ ಕೋರ್ಟಿನಲ್ಲಿ ದಾಖಲಾಗಿ ನಂಬರು ಬಿದ್ದರೆ ಅದು ಕೋರ್ಟಿನ ಅಧಿಕಾರಕ್ಕೆ ಬರುತ್ತದೆ. It comes under the jurisdiction of the Court when the matter is registered. ಅದನ್ನು ಅಡ್ಮಿಟ್ ಮಾಡತಕ್ಕಂಥಾದ್ದು ಬಿಡತಕ್ಕಂಥಾದ್ದು ಕೋರ್ಟಿಗೆ ಬಿಟ್ಟಿದ್ದು. ತಾವು ಈಗ ಏನು ರೂಲಿಂಗ್ ಕೊಟ್ಟಿದ್ದೀರಿ ಅದು ಸರಿಯಾಗಿದೆ. Now the matter is registered and the High Court is seized of the matter. ಕಾರಣ ಗಳನ್ನು ಕೊಡತಕ್ಕಂಥದ್ದಕ್ಕೆ ರೂಲಿಂಗ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಅದು ಸರಿಯಾಗಿ ಇದೆ. ಅದಕ್ಕೆ ಒಳಪಟ್ಟಂತೆ ಮಾತನಾಡಿ.

ಶ್ರೀ ಬಿ.ಎ. ಉಸುರಬ್ಬ.—ಇದುವರೆವಿಗೂ ಅದು ಅಡ್ಮಿಟ್ ಆಗಿಲ್ಲ. ಒಂದು ವಿಚಾರದ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಸಬ್‌ಜುಡೀಸ್ ಆಗುತ್ತದೆ ಎಂದು ನಿರ್ಬಂದಕ್ಕೆ ಒಳಪಡಿಸತಕ್ಕಂಥ ಪ್ರಯತ್ನ ನಡೆದಿದೆ. ಈ ಸದನವನ್ನು ತಪ್ಪು ದಾರಿಗೆ ಎಳೆದೀತಕ್ಕಂಥಾದ್ದು ಆಗಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ಕೊಟ್ಟಿರತಕ್ಕಂಥ ನಿಮಿಷಗಳಲ್ಲಿ ಮಾತನಾಡುತ್ತಾ ಹೇಳುವುದಾದರೆ ಹಲವಾರು ವಿಷಯಗಳನ್ನು ಚರ್ಚೆ ಮಾಡಿದವರು ಪ್ರಸ್ತಾಪ ಮಾಡಿದ್ದಾರೆ. ನಾನು ನೇರವಾಗಿ ಹೇಳುವುದಿಷ್ಟೇ. ನಾರಾಯಣಸ್ವಾಮಿ ಅಂಡ್ ಸನ್ಸ್ ಅವರಿಗೆ ಜಮೀನು ಮಾರಾಟ ವಿನಾಯಿತಿ ಬಗ್ಗೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಶ್ನೆ ಬಂದಾಗ ಮಿಂಚಿನ ವೇಗದಲ್ಲಿ ಹೆಚ್.ಯು.ಡಿ. ಡಿಪಾರ್ಟ್‌ಮೆಂಟ್‌ನಲ್ಲಿ ಅವರ ಫೈಲ್ ಓಡಾಡಿದೆ. ಅನೇಕ ಅಧಿಕಾರಿಗಳ ಟೇಬಲ್‌ಗೆ ಹೋಗಿದೆ. ಅನೇಕ ಸಲ ಅನೇಕ ಅಧಿಕಾರಿಗಳ ಟೇಬಲ್‌ಗೆ ಹೋಗಿ ಬರುತ್ತದೆ. ವಾಪಸ್ ಬರುತ್ತದೆ. ಒಂದು ಪ್ರಮುಖ್ಯವಾದ ಹಂತದಲ್ಲಿ ಸುಮಾರು 16,194 ಚದರ ಮೀಟರ್ ಜಮೀನಿಗೆ ಬರೀ ಮೂರು ತಿಂಗಳಲ್ಲಿ ವಿನಾಯಿತಿ ಕೊಡಲಾಗಿದೆ. ಎರಡನೆಯದಾಗಿ, ಮತ್ತೆ ಕೇಳುವಂತಹ ವಿನಾಯಿತಿ 3,444 ಚದರ ಮೀಟರ್‌ಗಳು ಕೇವಲ 30 ದಿವಸಗಳಲ್ಲಿ ಮಂಜೂರಾತಿ ಕೊಡುವಂತಾದ್ದು ವಿನಾಯಿತಿಗೆ ಅನುಮತಿಗೆ ಪ್ರಯತ್ನವಾಗಿದೆ. ನಾನು ಕೇಳುತ್ತೇನೆ ವಿಶೇಷ ಆದ್ಯತೆ ನಾರಾಯಣ ಸ್ವಾಮಿ ಅಂಡ್ ಸನ್ಸ್ ಫೈಲ್‌ಗೆ ಕೊಟ್ಟಿದ್ದಕ್ಕೆ ಕಾರಣವೇನು? ಮತ್ತು ಹೆಚ್.ಯು.ಡಿ. ಆಫೀಸಿನಲ್ಲಿ ಅನೇಕ ಕೊಳೆಯುತ್ತಿರುವಂತಹ ಫೈಲುಗಳು ಇವೆ. ಜಿರಲೆಗಳು ತಿನ್ನುತ್ತಿವೆ. ಆದರೆ ಈ ರೀತಿ

ಅನೇಕ ಜನ ಆಸಕ್ತಿ ವಹಿಸಿ ಹೊರಗಡೆ ಕಾಯುತ್ತಿದ್ದಾರೆ. ಆ ಬಗ್ಗೆ ಸರ್ಕಾರ ಗಮನಹರಿಸುತ್ತಾ ಇಲ್ಲ. ಸಚಿವರ ಟೇಬಲ್‌ಗೆ ಹೋಯಿತು. ಮಾನ್ಯ ಲಕ್ಷ್ಮೀಸಾಗರ್‌ರವರ ಟೇಬಲ್‌ನಲ್ಲಿ ಅನೇಕ ವರ್ಷಗಳಿಂದ ಇರುವಂತಹ ಫೈಲುಗಳು ಇವೆ. ಆದರೆ ನಾರಾಯಣಸ್ವಾಮಿ ಅಂಡ್ ಸನ್ಸ್ ಅವರ ಫೈಲ್ ರಭಸವಾಗಿ ಮೂವ್ ಆಗಿದೆ. ಇದಕ್ಕೆ ಹಿನ್ನೆಲೆ ಏನು? ಈ ಫೈಲಿಗೆ ಯಾವ ವೇಗವರ್ಧಕವನ್ನು ಉಪಯೋಗಿಸಿದ್ದೀರಿ? ಇದು ಅಧಿಕಾರಸ್ಥ ವ್ಯಕ್ತಿಗಳಿಗೆ ಸಂಬಂಧಪಟ್ಟ ಫೈಲು ಎನ್ನುವ ಏಕೈಕ ಕಾರಣದಿಂದ ರಭಸವಾಗಿ ಶರ ಮಿಂಚಿನ ವೇಗ ಇದಕ್ಕೆ ಸಿಕ್ಕಿದೆ ಎಂದು ಹೇಳುವುದಕ್ಕೆ ನಾನು ಅಪೇಕ್ಷಿಪಡುತ್ತೇನೆ.....

ಅಧ್ಯಕ್ಷರು.—ಈಗಾಗಲೇ ಒಂದು ಗಂಟೆಯಾಯಿತು. ಒಂದು ಗಂಟೆ ಮೇಲೆ 15 ನಿಮಿಷ ಜಾಸ್ತಿ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರೇನು ಹೇಳುತ್ತಾರೋ ಅದನ್ನು ಕೇಳುತ್ತಾ ಇಲ್ಲವಲ್ಲ.

ಅಧ್ಯಕ್ಷರು.—ಒಂದು ಗಂಟೆಯಾಯಿತು. ಅದಕ್ಕಿಂತ ಹೆಚ್ಚು ಸಮಯ ಕೊಟ್ಟಿದ್ದೇನೆ. ಇಲ್ಲಿ ಹೆಚ್ಚು ಸಮಯ ಕೊಡಲಿಕ್ಕೆ ಬರುವುದಿಲ್ಲ. As per rule, "the Speaker may allot two sittings in a week on which such matters may be taken up for discussion and allow such time for discussion not exceeding one hour..." ನಾವು ಪುಸ್ತಕ ಬಿಟ್ಟು ಹೋಗುವುದು ಬೇಡ. ರೂಲ್ಸ್ ಎತಕ್ಕೆ ಇದೆ? ಈಗಾಗಲೇ ಒಂದು ಗಂಟೆ ಇಪ್ಪತ್ತು ನಿಮಿಷವಾಯಿತು. ಇನ್ನೂ ಉತ್ತರ ಆಗಿಲ್ಲ. ನಾನು ಹೆಚ್ಚು ಟೈಮ್ ಕೊಟ್ಟಿದ್ದೇನೆ. ತಿಳಿದುಕೊಳ್ಳಿ.

ಶ್ರೀ ಬಿ.ಎ. ಉಮಾರಬ್ಬ.—ನಾನು ವೈಯುಕ್ತಿಕವಾಗಿ ತಮಗೆ ಪತ್ರ ಬರೆದು ವೈಯುಕ್ತಿಕವಾಗಿ ತಮ್ಮನ್ನು ಕಂಡು ಮಾತನಾಡಿದಾಗ ನಿಮಗೆ 15 ನಿಮಿಷ ಟೈಮ್ ಕೊಡುತ್ತೇನೆಂದು ಹೇಳಿದ್ದೀರಿ. ಅದನ್ನು ಉಳಿಸಿಕೊಳ್ಳಿ. ಅದಕ್ಕಿಂತ ಜಾಸ್ತಿ ನಾನು ಕೇಳುವುದಿಲ್ಲ.

ಅಧ್ಯಕ್ಷರು.—ಇದು ಒಂದು ಗಂಟೆ ಚರ್ಚೆ. ನಿಮ್ಮವರೇ ಹೆಚ್ಚು ಮಾತನಾಡಿದ್ದಾರೆ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಚರ್ಚೆಗೆ ಅಲೋ ಮಾಡಿದ್ದೀರಿ. ಆಗ ಮಾನ್ಯ ಲಕ್ಷ್ಮೀಸಾಗರ್‌ರವರು ಏನು ಹೇಳಿದರೆಂದರೆ ಇದು ರಿಟ್ ಪಿಟಿಷನ್ ಅಡ್ಮಿಟ್ ಆಗಿದೆ, ಆದ್ದರಿಂದ ಇದು ಸಬ್‌ಜ್ಯುಡೀಸ್ ಆಗುತ್ತದೆಂದು ಹೇಳಿದರು. ಈಗ ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳಿದರೆ ಉತ್ತರ ಕೊಡುತ್ತಿಲ್ಲ.

ಅಧ್ಯಕ್ಷರು.—ನಾನು ಈಗಾಗಲೇ 1-15 ನಿಮಿಷ ಕೊಟ್ಟಿದ್ದೇನೆ. ರಿಪ್ಲೈ ಕೂಡ ಆಗಬೇಕು. ಮುಕ್ತಾಯ ಮಾಡಿ.

ಶ್ರೀ ಬಿ.ಎ. ಉಮಾರಬ್ಬ.—ಮಾನ್ಯ ಅಧ್ಯಕ್ಷರೇ, ಈ ಫೈಲಿನ ಹಿನ್ನೆಲೆ ಮತ್ತು ಸಂಬಂಧಪಟ್ಟ ಜಮೀನಿನ ವಿವರವ ಹಿನ್ನೆಲೆ ಹುಡುಕುತ್ತಾ ಹೋದರೆ ಅನೇಕ ಅನುಮಾನಗಳು ಉದ್ಭವವಾಗುತ್ತವೆ. ನನಗೆ ಗೊತ್ತಿರುವ ಚಿತ್ರವನ್ನು ನಾನು ಇಲ್ಲಿ ಇಡುತ್ತೇನೆ. ಈ ಜಮೀನಿನ ಬಗ್ಗೆ 1-4-48ರಲ್ಲಿ ಸಿ. ಐ. ಟಿ. ಬಿ. ಆಗ ಏನಿತ್ತು ಅದು ಈಗ ಬಿ. ಡಿ. ಎ. ಆಯಿತು. ಅಂತೂ ಆ ಡೇಟ್‌ನಲ್ಲಿ ನೋಟಿಫೈ ಆದಂಥ ಜಮೀನು. ನೋಟಿಫೈ ಆದಂಥ ಜಮೀನನ್ನು ಬಿ.ಡಿ.ಎ. ಅಕ್ವೈರ್ ಮಾಡಿದೆಯೋ ಇಲ್ಲವೇ ಎನ್ನುವ ಯಾವ ಪ್ರಸ್ತಾಪಕ್ಕೂ ಹೋಗದೆ, ಯಾವ ಸ್ಪಷ್ಟೀಕರಣವನ್ನೂ ಕೇಳದೆ ಆ ವಿಚಾರದ ಬಗ್ಗೆ ಕಣ್ಣುಮುಚ್ಚಿಕೊಳ್ಳುವುದಕ್ಕೆ ಕಾರಣ ಏನು? ಎರಡನೇ ಪ್ರಶ್ನೆ ಎಂದರೆ, ದಿನಾಂಕ ೧೭ನೇ ಜುಲೈ ೧೯೮೫ರಲ್ಲಿ ೧೬,೯೯೪ ಚದರ ಮೀಟರ್ ಭೂಮಿಗೆ ವಿನಾಯಿತಿ ದೊರೆತ ಮೇಲೆ ಕನ್‌ವರ್ಷನ್ ಮಾಡದೆ ಕೈಗಾರಿಕಾ ಚಟುವಟಿಕೆಯನ್ನು ನಾರಾಯಣ ಸ್ವಾಮಿ ಅಂಡ್ ಸನ್ಸ್ ನಡೆಸುತ್ತಿದ್ದರಾದರೂ ಸಹ ಆ ಲ್ಯಾಂಡ್‌ನ್ನು ಅಗ್ರಿಕಲ್ಚರ್ ಲ್ಯಾಂಡ್ ಎಂದು ಪರಿಗಣಿಸಿಕೊಂಡು ಅಗ್ರಿಕಲ್ಚರ್ ಭೂ ಕಂದಾಯವನ್ನು ಕೊಟ್ಟಿರುವುದು ಬೆಳಕಿಗೆ ಬಂದಿದ್ದರೂ ಸಹ ಈ ಹಂತದಲ್ಲಿ ಹೆಚ್.ಯು.ಡಿ. ನಲ್ಲಿ ಯಾವುದೇ ತನಿಖೆಗೆ ಅಥವಾ ಯಾವುದೇ ಸ್ಪಷ್ಟೀಕರಣ ಕೇಳಲಿಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ? ಇದಕ್ಕೆ ಕಾರಣ ಏನು? ಇನ್ನು ಮೂರನೆಯ ಪ್ರಶ್ನೆ ಕೇಳುತ್ತೇನೆ. ಸಾಲ ಆಗಿದೆಯೆಂದು ಜಮೀನನ್ನು ಮಾರಾಟ ಮಾಡುವುದಕ್ಕೋಸ್ಕರ ಯಾರಾದರೂ ಸೀಲಿಂಗ್ ಲಿಮಿಟ್‌ನ್ನು ವಿನಾಯಿತಿ ಕೇಳುವ ಸಂದರ್ಭ ಬಂದಾಗ ಅಂಥವರುಗಳಿಗೆ ನೀವು ಪರ್ಮಿಷನ್ ಕೊಡುವುದಿಲ್ಲ. ಇಲ್ಲಿ

ಏನಾಗಿದೆ ಎಂದರೆ, ಸಾಲಗಾರರ ಒತ್ತಾಯಕ್ಕೆ ಒಳಗಾಗಿ ಜಮೀನನ್ನು ಮಾರಾಟ ಮಾಡಬೇಕಾಗಿ ಬಂದರೆ ಮಾತ್ರ ನೀವು ಸೀಲಿಂಗ್ ಲಿಮಿಟ್‌ಗೆ ವಿನಾಯಿತಿ ಕೊಡಬಹುದು. ಅಂದರೆ, ಸಾಲ ಮಾಡಿದವನ ಮೇಲೆ ಕೋರ್ಟ್ ಡಿಕ್ರಿ ಆಗಿರಬೇಕು, ಇಲ್ಲಾ ಪ್ರಾಮಿಸರಿ ನೋಟ್‌ಗೆ ವಾಯಿದೆ ಮೀರಿರಬೇಕು. ಅಂಥ ಸಾಲಗಾರರಿಗೆ ಮಾತ್ರ ಭೂ ಮಿತಿ ಕಾಯಿದೆಯಿಂದ ವಿನಾಯಿತಿ ನೀಡಬಹುದು. ಅದು ಬಿಟ್ಟು ವಾಲಂಟರಿಯಾಗಿ ಬಂದು ನನಗೆ ಸಾಲ ಇದೆ, ಆದ್ದರಿಂದ ಜಮೀನು ಮಾರಾಟ ಮಾಡುವುದಕ್ಕೆ ಭೂ ಮಿತಿ ಕಾಯಿದೆಯಿಂದ ವಿನಾಯಿತಿ ಕೊಡಿ ಎಂದರೆ ಕೊಡುವುದಕ್ಕೆ ಬರುವುದಿಲ್ಲ. ಈ ನಾರಾಯಣ ಸ್ವಾಮಿ ಅಂಡ್ ಸನ್ಸ್‌ನವರು ಈ ಜಮೀನಿಗೆ ಕೇಳಿರುವ ಭೂಮಿ ಮಿತಿ ಕಾಯಿದೆ ವಿನಾಯಿತಿಯನ್ನು ತಾವು ವಿಶೇಷ ಆದ್ಯತೆ ಕೊಟ್ಟು ವಿಶೇಷವಾದ ಅವಕಾಶವನ್ನು ಕಲ್ಪಿಸಿಕೊಡಲಿಕ್ಕೆ ಕಾರಣ ಏನು? ಎನ್ನುವುದನ್ನು ನಾನು ಪ್ರಶ್ನೆ ಮಾಡುತ್ತೇನೆ. ನಾಲ್ಕನೇಯದಾಗಿ ವಿನಾಯಿತಿ ಇಲ್ಲದೆ.....

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಬೇರೆಯವರು ಏನು ಹೇಳಿದರೋ! ಅದನ್ನೇ ಇವರೂ ಹೇಳುತ್ತಿದ್ದಾರೆ. ಇವರು ಹೊಸದೇನು ಹೇಳುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಉಮರಬ್ಬ ಅವರೇ ಬೇಗ ಮುಕ್ತಾಯ ಮಾಡಿ.

ಶ್ರೀ ಬಿ. ಎ. ಉಮರಬ್ಬ.—ನಾನು ಯಾರ ಮೇಲಾದರೂ ಆರೋಪ ಮಾಡುತ್ತಾ ಇದ್ದೀನಾ? ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ. ಲ್ಯಾಂಡ್ ಸೀಲಿಂಗ್ ಲಿಮಿಟ್ ಮೀರಿ ಅಧಿಕವಾಗಿ ಅನೇಕ ಸಮಯದವರೆಗೂ ನಾರಾಯಣಸ್ವಾಮಿ ಅಂಡ್ ಸನ್ಸ್ ಅವರ ಕೈಯಲ್ಲಿ ಈ ಜಮೀನು ಇದ್ದರೂ ಸಹ ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಹಾಗೇ ಬಿಟ್ಟುಕೊಂಡು ಬರಲಿಕ್ಕೆ ಕಾರಣ ಏನು?

ಅಧ್ಯಕ್ಷರು.—ಸಾಕು. ಮುಕ್ತಾಯ ಮಾಡಿ.

ಶ್ರೀ ಬಿ. ಎ. ಉಮರಬ್ಬ.—ಹಣಕಾಸಿನ ವ್ಯವಹಾರದ ಬಗ್ಗೆ ಇಲ್ಲಿ ಚರ್ಚೆಯಾಗುವಾಗ ನಾರಾಯಣಸ್ವಾಮಿ ಅಂಡ್ ಸನ್ಸ್ ಅವರು ನನಗೆ ಸಾಲ ಇದೆ ಅದನ್ನು ತೀರಿಸುವುದಕ್ಕಾಗಿ ಈ ಜಮೀನು ಮಾರಾಟ ಮಾಡುವುದಕ್ಕೆ ಭೂ ಮಿತಿ ಕಾಯಿದೆಯಿಂದ ವಿನಾಯಿತಿ ಕೊಡಬೇಕೆಂದು ಹೇಳಿದರೆ ಸಾಲದು, ಸಾಲ ಇರುವ ಬಗ್ಗೆ ಸಾಬೀತು ಮಾಡಬೇಕು. ಪರ್ಮಿಷನ್‌ನ್ನು ಅವರು ಕೇಳಿದ ಮೇಲೆ ಆ ಫೈಲು ಮೊದಲು ಅಂಡರ್ ಸೆಕ್ರೆಟರಿಯಿಂದ ಡೆಪ್ಯುಟಿ ಸೆಕ್ರೆಟರಿಗೆ ಬರಬೇಕು. ಡೆಪ್ಯುಟಿ ಸೆಕ್ರೆಟರಿಯಿಂದ ಜಾಯಿಂಟ್ ಸೆಕ್ರೆಟರಿಗೆ, ಜಾಯಿಂಟ್ ಸೆಕ್ರೆಟರಿಯಿಂದ ಹೆಚ್.ಯು.ಡಿ. ಸೆಕ್ರೆಟರಿಗೆ ಬರಬೇಕು. ನಾರಾಯಣ ಸ್ವಾಮಿ ಅಂಡ್ ಸನ್ಸ್ ಅವರು ದೇನಾ ಬ್ಯಾಂಕಿನಿಂದ ಹಣ ತೆಗೆದುಕೊಂಡಿರುವ ಬಗ್ಗೆ ಮಾತ್ರ ಪುರಾವೆಯನ್ನು ಒದಗಿಸಿದ್ದಾರೆ. ಬೇರೆ ರೀತಿಯಾಗಿ ಒದಗಿಸಿರುವ ಪುರಾವೆಗಳು ಅಧಿಕೃತವಾಗುವುದಿಲ್ಲ. ಇವರು ಒದಗಿಸಿರುವ ಪುರಾವೆಗಳಲ್ಲಿ, ನಾವು ನಾರಾಯಣ ಸ್ವಾಮಿ ಅಂಡ್ ಸನ್ಸ್ ಅವರಿಗೆ ಸಾಲ ಕೊಟ್ಟಿದ್ದೇವೆ ಸಾಲ ಕೊಟ್ಟಿದ್ದೇವೆ ಎಂದು ಬರೆದು ಕೊಟ್ಟಿದ್ದಾರೆ. ನನ್ನಲ್ಲಿ ಅವುಗಳ ಸರ್ಟಿಫೈಡ್ ಕಾಪಿಗಳು ಇವೆ. ಈ ಎಲ್ಲಾ ಕಾಪಿಗಳೂ ಡಿಟ್ಟೋ ಒಂದೇ ತರಹ ಇವೆ. ಈ ಎಲ್ಲಾ ಪತ್ರಗಳನ್ನು ಒಂದೇ ಟೈಪ್‌ರೈಟರ್‌ನಲ್ಲಿ ಒಂದೇ ತರಹ ಟೈಪ್ ಮಾಡಿರುತ್ತಾರೆ. ನಾನು ಹೇಳುತ್ತೇನೆ. ಈ ದಾಖಲೆಗಳನ್ನು ಅವರೇ ಸೃಷ್ಟಿಸಿರುವಂತದ್ದಾಗಿವೆಯೇ ವಿನಃ ನಿಜವಾದ ದಾಖಲೆಗಳು ಆಗಲಿಕ್ಕೆ ಇವು ಸಾಧ್ಯವಿಲ್ಲ. ಇವುಗಳನ್ನು ತಮಗೆ ಒದಗಿಸಿ ಕೊಡುತ್ತೇನೆ.

ಶ್ರೀ ಎಂ. ರಘುಪತಿ.—ಎಲ್ಲಾ ದಾಖಲೆಗಳನ್ನು ಕೊಟ್ಟು ವಾದ ಮಾಡಲಿ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಬಿ. ಎ. ಉಮರಬ್ಬ.—ಒಂದೇ ಟೈಪ್‌ರೈಟರ್‌ನಲ್ಲಿ ಬೆರಳಚ್ಚು ಮಾಡಲಾಗಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇವರು ಎಷ್ಟು ಸಾರಿ ಹೇಳುವುದನ್ನೇ ಹೇಳುವುದು?

ಅಧ್ಯಕ್ಷರು.—ಮಾನ್ಯ ಉಮರಬ್ಬ ಅವರೇ ಸಾಕು. ಮುಗಿಸಿ.

ಶ್ರೀ ಬಿ. ಎ. ಉಮರಬ್ಬ.—ನಾನು ಪೂರ್ತಿ ಮಾಡುವುದಕ್ಕೆ ಅವಕಾಶ ಕೊಡಿ. ನಾನು ಯಾರ ಮೇಲಾದರೂ ಆರೋಪ ಮಾಡುತ್ತಿದ್ದೇನೆಯೇ? ಅಥವಾ ದಾರಿ ತಪ್ಪಿ ಮಾತನಾಡುತ್ತಿದ್ದೇನೆಯೇ? ಮತ್ತೆ ಒಬ್ಬ ಸಾಮಾನ್ಯ ವ್ಯಕ್ತಿಯು ಅವನು ಮಾಡಿರುವ ಸಾಲವನ್ನು ತೀರಿಸಲಿಕ್ಕೆ ಭೂಮಿ ಮಾರುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದಾಗ ಎಲ್ಲಾ ದಾಖಲೆಗಳನ್ನು ಕೇಳುತ್ತೀರಲ್ಲಾ? ಅಂದರೆ, ನಾವುಗಳು ಬೇರೆ, ಕರ್ನಾಟಕದ ೪ ಕೋಟಿ ಜನಗಳು ಬೇರೆ ಅಥವಾ ಬಾಂಬೆಯಿಂದ ಬಂದಂಥ ಶೋಬಾ

ಮಂಕೀಜಾ ಬೇರೆ ಎಂದು ತಿಳಿದುಕೊಂಡಿದ್ದೀರಾ? ಅವರಿಗೆ ಆದ್ಯತೆ ಹೇಗೆ ಸಿಕ್ಕಿದೆ ಎಂದು ನಾನು ಕೇಳುತ್ತಿದ್ದೇನೆ. "ಅಫಿಡವಿಟ್ ಕೊಟ್ಟು ನನಗೆ ಇಷ್ಟು ಸಾಲ ಇದೆ ಎಂದು ಹೂರಾಟಗರು ಹೇಳಿ. ಅದನ್ನು ನೀವು ಒಪ್ಪುವುದಾದರೆ ಒಂದು ರೀತಿಯ ಅತ್ಯಂತ ಅನಾನುಕೂಲಕರವಾದ ಕೆಟ್ಟ ಸಂಪ್ರದಾಯ ವನ್ನು ನಿರ್ಮಾಣ ಮಾಡಿದ ಹಾಗೆ ಆಗುತ್ತದೆ." ಇದು ನಾನು ಹೇಳಿದ ಮಾತಲ್ಲ. ಹೆಚ್.ಯು.ಡಿ. ನಲ್ಲಿ ಇರುವ ಕಾನೂನಿನಲ್ಲಿ ಪರಿಣಿತರಾಗಿರುವ ಒಳ್ಳೆಯ ಹೆಸರು ಗಳಿಸಿರುವಂಥ ಜಾಯಿಂಟ್ ಸೆಕ್ರೆಟರಿ ಯವರಾದ ಮಾನ್ಯ ಶ್ರೀ ಬಜಂತ್ರಿಯವರೇ ತಮ್ಮ ಫೈಲಿನಲ್ಲಿ ಈ ರೀತಿ ಬರೆದಿದ್ದಾರೆ. ಇದನ್ನು ತಾವು ಗಮನಿಸಬೇಕು. ಇದನ್ನು ನಿರ್ಲಕ್ಷಿಸಿ ಅವರು ಕೊಟ್ಟಿರುವ ಸಾಲದ ಮಾಹಿತಿಯನ್ನು ಒಪ್ಪಿ ಕೊಳ್ಳುವ ಅವಶ್ಯಕತೆ ಏನಿತ್ತು? ಇನ್ನೊಂದೇ. ಅದು ಹೌಸಿಂಗ್‌ದು. ಅಂದರೆ ಸಾಮೂಹಿಕ ಗೃಹ ನಿರ್ಮಾಣ ಮಾಡುವುದಕ್ಕಾಗಿ ಖಾಸಗಿ......

ಶ್ರೀ ಬಿ. ಆರ್. ನೀಲಕಂಠಪ್ಪ.—ಅವರು ಮಾತನಾಡಲು ನೀವು ಬಿಟ್ಟಿರುವುದನ್ನು ನಾವು ಒಪ್ಪುವುದಿಲ್ಲ. ೧೦ ನಿಮಿಷಕ್ಕಿಂತ ಜಾಸ್ತಿ ಮಾತಾಡಿದ್ದಾರೆ.

ಶ್ರೀ ಬಿ. ಎ. ಉಮರಬ್ಬ.—ಅವುಗಳಿಗೆ ಹೆಚ್ಚು ಆದ್ಯತೆ ಕೊಡಬೇಕೆನ್ನುವ ಸರ್ಕಾರದ ನಿರ್ಧಾರ ಆದರೂ ಸಹ ಈ ಕೇವಲ ರೇವಜಿತ್ ಬಿಲ್ಡರ್ಸ್ ಮತ್ತು ಡೆವಲಪರ್ಸ್‌ಗೆ ಮಾತ್ರವೇ......

(ಗೊಂದಲ)

ಶ್ರೀ ಬಿ. ಆರ್. ನೀಲಕಂಠಪ್ಪ.—ಮುಗಿಸಲಿ. ೧೫ ನಿಮಿಷದ ಮೇಲಾಯಿತು.

ಶ್ರೀ ಬಿ. ಎ. ಉಮರಬ್ಬ.—ಈ ರೇವಜಿತ್ ಬಿಲ್ಡರ್ಸ್‌ಗೆ ಸಾಮೂಹಿಕ ಗೃಹ ನಿರ್ಮಾಣಕ್ಕೆ ಅನುಮತಿ ಕೊಡುವಾಗ ಇವರು ಯಾರು, ಇವರ ಹಣಕಾಸಿನ ಸ್ಥಿತಿಗತಿ ಏನು, ಇವರ ಕಾರ್ಯವ್ಯಾಪ್ತಿ ಏನು ಎಂಬುದನ್ನೆಲ್ಲಾ......

ಅಧ್ಯಕ್ಷರು.—ಹೋಗುತ್ತಾ ಹೋಗುತ್ತಾ ಹಳಿ ತಪ್ಪುತ್ತೀರಲ್ಲಾ.

ಶ್ರೀ ಬಿ. ಎ. ಉಮರಬ್ಬ.—ಅವರ ಅನುಭವ ಏಕೆ ಕೇಳಲಿಲ್ಲ? ಅಥವಾ ಇವರನ್ನು ಕೇಳುವ ಅವಶ್ಯಕತೆಯೇ ಇಲ್ಲ ಎಂದು ನಿಮಗೆ ನೀವೇ ನಿಶ್ಚಯಿಸಿಕೊಂಡುಬಿಟ್ಟಿರೋ?

ಅಧ್ಯಕ್ಷರು.—ನಿಮ್ಮದು ಮತ್ತೆ ದಾರಿ ತಪ್ಪುತ್ತಿದೆ, ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೇ, ನಾನು ಯಾರ ಹೆಸರನ್ನೂ ಇಲ್ಲಿ ತರುವುದಕ್ಕೆ ತಯಾರಿಲ್ಲ. ಆದರೆ ಮಾನ್ಯ ಮುಖ್ಯ ಮಂತ್ರಿಗಳ ಸಂಬಂಧಿಕರು ಇವರಲ್ಲಿ ಒಳಪಟ್ಟಾಗ......

ಶ್ರೀ ಎಂ. ರಘುಪತಿ.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

(ಗೊಂದಲ)

ಅಧ್ಯಕ್ಷರು.—ರೆಕಾರ್ಡ್‌ಗೆ ಹೋಗುವುದಿಲ್ಲ. ಪಾಯಿಂಟ್ ಆಫ್ ಆರ್ಡರ್ ಇದೆ, ಕೇಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾಯಿಂಟ್ ಆಫ್ ಆರ್ಡರ್ ನನ್ನದೂ ಇದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾಯಿಂಟ್ ಆಫ್ ಆರ್ಡರ್ ಇದೆ ಎಂದರೂ ಉದ್ದಕ್ಕೆ ಭಾಷಣ ಮಾಡಿದರೆ ಏನು ಮಾಡುವುದು? ಮಂತ್ರಿಗಳ ಮೇಲಾಗಲಿ ಮುಖ್ಯ ಮಂತ್ರಿಗಳ ಮೇಲಾಗಲಿ ವೈಯಕ್ತಿಕ ಆಪಾದನೆ ಮಾಡುವುದಿದ್ದರೆ ನೋಟಿಸ್ ಕೊಡಬೇಕಾಗುತ್ತದೆ. ಆಮೇಲೆ ಈ ಮನೆಯ ಸದಸ್ಯರಲ್ಲದವರ ಹೆಸರು ಇಲ್ಲಿ ಬಂದಿದೆ.

ಶ್ರೀ ಪಟವಾಕ್ಕಿ ರತ್ನಾಕರ್.—ಅದೆಲ್ಲಾ ಗೊತ್ತಿದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಗೊತ್ತಿದ್ದೂ ಇಲ್ಲಿ ಮಾಡಿದರೆ ಗೊತ್ತು ಮಾಡಬೇಕಾಗುತ್ತದೆ. ಮಾನ್ಯ ಉಮರಬ್ಬ ಅವರು ನೋಟೀಸ್ ನೀಡದೆ ಹೇಳಿರುವುದನ್ನು ಕಡತದಿಂದ ತೆಗೆದು ಹಾಕಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರ ಪಾಯಿಂಟ್ ಆಫ್ ಆರ್ಡರಲ್ಲಿ ಸತ್ಯಾಂಶ ಇದೆ. ಎಷ್ಟು ಗೌರವದಿಂದ ಮೊದಲ ಮೂವರು ಮಾತಾಡಿದರು. ಆದರೆ ಮಾನ್ಯ ಉಮರಬ್ಬ ಅವರೇ, ಮೊದಲು ರೂಲ್ಸು, ರೆಗ್ಯುಲೇಷನ್ಸ್ ತಿಳಿದುಕೊಳ್ಳಿ. ೧೦ ನಿಮಿಷ ಅವಕಾಶ ಕೊಟ್ಟಿದ್ದಾಯ್ತು, ಕುಳಿತುಕೊಳ್ಳಿ. Rule 311 says that no allegation of a defiamatory or incriminatory nature shall be made by a member against any person.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರದು ಮುಗಿಯಬೇಕು. We have given notice to discuss the matter.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಆಡಳಿತ ಪಕ್ಷದವರು ನಮ್ಮನ್ನು ಮೊದಲೇ ದಾರಿ ತಪ್ಪಿಸಿದರು. ಕಡತ ತೆಗೆಸಿ ನೋಡಿ, ಕೋರ್ಟಿನಲ್ಲಿ ರಿಟ್ ಅಡ್ಮಿಟ್ ಆಗದೇ ಇರುವಾಗ ನಮ್ಮನ್ನೆಲ್ಲಾ ಸಬ್‌ಜ್ಯುಡಿಸ್ ಅಂತ ಕನ್‌ಫ್ಯೂಸ್ ಮಾಡಿ ಮಾಡಿ.....

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಸರಿ, ಚರ್ಚೆಗಾಗಿ ಇಟ್ಟದ್ದ ೧ ಗಂಟೆ ಮುಗಿಯಿತು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಈ ಮನೆಯನ್ನು ಮಿಸ್ಲೀಡ್ ಮಾಡಿದ್ದಾರೆ, ಅವರ ಮೇಲೆ ಬ್ರೀಚ್ ಆಫ್ ಪ್ರಿವಿಲೇಜ್ ತರಬೇಕಾದೀತು ಅಷ್ಟೆ. ಆದ್ದರಿಂದ ಮೊದಲು ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಛೀಮಾರಿ ಹಾಕಿ.

ಅಧ್ಯಕ್ಷರು.—ಅಂಥಾದ್ದು ಏನೂ ಆಗಿಲ್ಲ. They are not misguiding or misleading.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ತಾವು ಕೂಡ್ರಿ, ತಮ್ಮದು ಆಯ್ತು......

(ಗೊಂದಲ)

ಅಧ್ಯಕ್ಷರು.—ಮಾನ್ಯ ಉಮರಬ್ಬರವರೇ, ತಾವು ಕುಳಿತುಕೊಳ್ಳಿ. ಒಂದು ಗಂಟೆ ಚರ್ಚೆಯನ್ನು ಒಂದೂಮುಕ್ಕಾಲು ಗಂಟೆ ಚರ್ಚೆ ಮಾಡಿದ್ದೀರಿ ನಿಮಗೆ ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈಗ ಅವರು ಕನ್‌ಕ್ಲೂಡ್ ಮಾಡುತ್ತಿದ್ದಾರೆ. ಕನ್‌ಕ್ಲೂಡ್ ಮಾಡಬೇಕಾದರೆ ವಿಚಾರವನ್ನು......

(ಗೊಂದಲ)

MR. SPEAKER.—The matter has been closed ನಾನು ಸಾಕಷ್ಟು ಅವಕಾಶ ಕೊಟ್ಟಿದ್ದೇನೆ ಚರ್ಚೆ ಮುಕ್ತಾಯವಾಗಿದೆ ಮಾನ್ಯ ಮಂತ್ರಿಗಳಿಂದ ಈಗ ಉತ್ತರ. ೫ ನಿಮಿಷ ಎಂದು ೨೦ ನಿಮಿಷ ತೆಗೆದುಕೊಂಡಿದ್ದಾರೆ. ತಾವು ಕುಳಿತುಕೊಳ್ಳಿ. ಅವರು ಏನು ಹೇಳಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಮಂತ್ರಿಗಳ ಉತ್ತರ ಬೇಡವೇ? ಚರ್ಚೆ ಪ್ರಾರಂಭವಾಗಿ ಎರಡು ತಾಸು ಆಗುತ್ತಾ ಬಂದಿದೆ

ಅಧ್ಯಕ್ಷರು.—ಚರ್ಚೆ ಪ್ರಾರಂಭವಾಗಿ ಎರಡು ತಾಸಾಗುತ್ತಾ ಬಂದಿದೆ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಕಾನೂನು ಪ್ರಕಾರ ನಾವು ನಡೆಯಬೇಕಾಗುತ್ತದೆ. ಈಗ ಚರ್ಚೆ ಮುಕ್ತಾಯವಾಗಿದೆ. ಏನು ಹೇಳಬೇಕೋ ಅದೆಲ್ಲವನ್ನೂ ಹೇಳಿದ್ದೀರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ಸದನಕ್ಕೆ ಮಿಸ್‌ಲೀಡ್ ಮಾಡಿ ಹೇಳಬೇಕಾದ್ದನ್ನು ಮುಚ್ಚಿಟ್ಟಿದ್ದೀರಿ ಸಬ್‌ಜ್ಯುಡೀಸ್ ಆಗುತ್ತದೆ ಎಂದು.

(ಗೊಂದಲ)

ಅಧ್ಯಕ್ಷರು.—ಈಗ ನಾನು ಅದನ್ನು ಕ್ಲೋಸ್ ಮಾಡಿದ್ದೇನೆ. ಚರ್ಚೆ ಮುಕ್ತಾಯವಾಗಿದೆ.

(ಗೊಂದಲ)

(ಈ ಹಂತದಲ್ಲಿ ವಿರೋಧೀ ಪಕ್ಷದ ಸದಸ್ಯರು ಒಮ್ಮೆಲೆ ಎದ್ದು ನಿಂತು ಮಾತನಾಡ ತೊಡಗಿದರು.)

ಅಧ್ಯಕ್ಷರು.—ಈ ಪುಸ್ತಕದಲ್ಲಿರುವ ರೂಲ್ಸ್ ಅನ್ನು ಫಾಲೋ ಮಾಡಬೇಕೋ ಬೇಡವೋ ಒಂದು ತಾಸು ಎಂದು ಇದರಲ್ಲಿದೆ ಈಗ ಒಂದೂವರೆಕಾಲು ತಾಸಾಗಿದೆ.

(ಗೊಂದಲ)

ಅಧ್ಯಕ್ಷರು.—ಈಗ ಮಂತ್ರಿಗಳನ್ನು ಉತ್ತರ ಕೊಡಲು ಕರೆದಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎರಡು ನಿಮಿಷದಲ್ಲಿ ಮುಗಿಸುತ್ತಾರೆ ಅವಕಾಶ ಕೊಡಿ ಸರಿಯಾಗಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಂತರ ಶ್ರೀನಿವಾಸ್‌ರವರು ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು.—ಅವರಿಗೆ ಅವಕಾಶ ಕೊಡುವುದಿಲ್ಲ. ಒಂದು ಗಂಟೆ ೪೫ ನಿಮಿಷವಾಗಿದೆ. ಆಗುವುದಿಲ್ಲ. ನಿಯಮದ ವ್ಯಾಪ್ತಿಯಲ್ಲಿ ಒಂದು ಗಂಟೆಯಲ್ಲಿ ಚರ್ಚೆ ಮಾಡಿದರೆ ವಾರದಲ್ಲಿ ಎರಡು ಸಾರಿ ಅವಕಾಶ ಮಾಡಿಕೊಡುತ್ತೇನೆ. ಈಗ ಒಂದೂವರೆಕಾಲು ಗಂಟೆ ತೆಗೆದುಕೊಂಡಿದ್ದೀರಿ. ನಾನು ರೂಲ್ಸ್ ಬಿಟ್ಟು ಹೋಗುವುದಕ್ಕೆ ತಯಾರಿಲ್ಲ. ನೀವೆಲ್ಲರೂ ಸೇರಿ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ಏಕೆ ಕೂರಿಸಿದಿರಿ? ನಾನು ನಿಯಮ ಬಿಟ್ಟು ಹೋಗುವುದಕ್ಕೆ ತಯಾರಿಲ್ಲ. ಎಲ್ಲರಿಗೂ ಹತ್ತು ಹತ್ತು ನಿಮಿಷ ಅವಕಾಶ ಕೊಟ್ಟಿದ್ದೇನೆ. The matter has been closed for discussion.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನೀವು ಅವರಿಗೆ ಛೀಮಾರಿ ಹಾಕಬೇಕು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಅವರಿಗೆ ಏನೂ ಹೇಳುತ್ತಿಲ್ಲ. ಅವರಿಗೆ ಛೀಮಾರಿ ಹಾಕುತ್ತಿಲ್ಲ. ನಾವು ನಿಮಗೆ ಗೌರವ ಕೊಟ್ಟೆವು. ಅವರು ಹೇಳುವುದು ಸಬ್‌ಜ್ಯುಡೀಸ್ ಆಗುತ್ತದೆ. ನೀವು ಅವರಿಗೆ ಛೀಮಾರಿ ಹಾಕುತ್ತಿಲ್ಲ. ನಾವು ಎಂದೂ ಅದನ್ನು ರೆಫರ್ ಮಾಡಲಿಲ್ಲ. ಅವರು ಮಿಸ್‌ಲೀಡ್ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನಾನು ನಿಯಮ ಬಿಟ್ಟು ಹೋಗುವುದಕ್ಕೆ ತಯಾರಿಲ್ಲ. ಒಂದೂವರೆಕಾಲು ತಾಸು ಆಗಿದೆ.

ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಈಗ ಅವರು ಉತ್ತರ ಹೇಳಲಿ. ಮಂತ್ರಿಯವರಿಗೆ ಉತ್ತರ ಹೇಳುವುದಕ್ಕೆ ಕರೆದು ಬಿಟ್ಟಿದ್ದೇನೆ. ಚರ್ಚೆ ಮುಕ್ತಾಯವಾಗಿದೆ. ಈಗಾಗಲೇ ಒಂದು ತಾಸು ನಲವತ್ತೈದು ಮಿನಿಟ್‌ನ್ನು ತೆಗೆದುಕೊಂಡಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಚಂದ್ರಶೇಖರ್‌ರವರೇ, ತಾವು ಶುರು ಮಾಡಿ.

(ಗೊಂದಲ)

ಅಧ್ಯಕ್ಷರು.—ಮತ್ತೊಮ್ಮೆ ನಿಯಮ ೬೮ ನ್ನು ತೆಗೆದುಕೊಂಡು ಬಂದರೆ ಚರ್ಚೆಗೆ ತಮಗೆ ಅವಕಾಶವನ್ನು ಮಾಡಿಕೊಡಬೇಕೇ ಬೇಡವೇ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ.........

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ಇದರ ಬಗ್ಗೆ ಅವಕಾಶನ್ನು ಈಗಾಗಲೇ ಮೋರ್ ದ್ಯಾನ್ ಒನ್ ಹವರ್ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಶ್ರೀನಿವಾಸ್‌ಗೌವರೂ ಅವಕಾಶವನ್ನು ಕೊಡಿ.

(ಗೊಂದಲ)

ಅಧ್ಯಕ್ಷರು.—ಆಯಿತು. ಅದಕ್ಕೆ ಸರ್ಕಾರ ಕೂಡಾ ಒಪ್ಪುತ್ತದೆ. ಅಡ್ಡಿಯಿಲ್ಲ. ಮಾನ್ಯ ಶ್ರೀನಿವಾಸ್ ರವರೇ, ೫ ಮಿನಿಟ್‌ನಲ್ಲಿ ಮುಗಿಸಿ. ಶ್ರೀನಿವಾಸ್‌ರವರೇ, You must compliment the Government

(ಗೊಂದಲ)

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನನ್ನ ದುರಾದೃಷ್ಟ ಏನೆಂದರೆ ನಾನು ೧೯೬೭ನೇ ಇಸವಿಯಲ್ಲಿ ಈ ಸದನಕ್ಕೆ ಬಂದಿದ್ದೆ. ತಾವು ಎಷ್ಟನೇ ಇಸವಿಯಲ್ಲಿ ಬಂದರೋ ನನಗಂತೂ ಗೊತ್ತಿಲ್ಲ. ಆದರೆ ಪ್ರತಿ ಸಂದರ್ಭದಲ್ಲೂ ನನ್ನನ್ನು ಮಾತನಾಡುವುದಕ್ಕೆ ಈ ಸದನದಲ್ಲಿ ಈ ಕಡೆ ಯಲ್ಲಿರುವವರು ಮತ್ತು ಆ ಕಡೆಯಲ್ಲಿರುವವರು ಎಲ್ಲರೂ ಕೂಡಾ ಹೇಳಿ ಆಶೀರ್ವಾದ ಮಾಡಿ ಕೊಡಿಸಬೇಕೇ ಹೊರತು ನಿಮ್ಮ ಕೃಪೆ ಒಂದು ಸಾರಿಯೂ ನಮ್ಮ ಮೇಲೆ ನೇರವಾಗಿ ಬೀಳಲಿಲ್ಲವಲ್ಲಾ.

೭-೦೦ ಪಿ. ಎಂ.

ಅಧ್ಯಕ್ಷರು.—ನಿಮ್ಮ ಮೇಲೆ ನನ್ನ ದೃಷ್ಟಿ ಯಾವಾಗಲೂ ಇದ್ದೇ ಇದೆ. ಏಕೆಂದರೆ ನೀವು ಚಲೋ ಮಾತನಾಡುತ್ತೀರಿ. with in the four corners ಮಾತನಾಡುತ್ತೀರಿ. ನಿಯಮಾವಳಿಗಳ ಚೌಕಟ್ಟಿನಲ್ಲಿ ಮಾತನಾಡುತ್ತೀರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತುಂಬಾ ಬಹಳ ಗಂಭೀರ ಎನ್ನತಕ್ಕಂಥ ಒಂದು ವಿಷಯದ ಬಗ್ಗೆ ನಾವು ಒಂದು ಚರ್ಚೆಯನ್ನು ಮಾಡುತ್ತಿದ್ದೇವೆ. ಇದರಲ್ಲಿ ಈಗಾಗಲೇ ಕೆಲವೊಂದು ವಾಸ್ತವಾಂಶಗಳ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ತನ್ಮಧ್ಯೆ ಏನು ಪ್ರಸಂಗ ಉದ್ಭವವಾಗಿದೆ ಎಂದರೆ ಉಚ್ಚ ನ್ಯಾಯಾಲಯದಲ್ಲಿ ಯಾರೋ ಒಂದು ಮನವಿಯನ್ನು ಸಲ್ಲಿಸಿರುವುದರಿಂದ ಅದರ ವ್ಯಾಪ್ತಿಯಲ್ಲಿ ಬರತಕ್ಕಂಥ ಅಂಶಗಳನ್ನು ಇಲ್ಲಿ ಚರ್ಚಿಸಬಹುದೇ ಇಲ್ಲವೇ ? ಇಲ್ಲಿ ಏನು ಸಬ್-ಜುಡೀಸ್ ಎಂದು ಹೇಳುತ್ತೇನೆ, ಸಬ್-ಜುಡೀಸ್ ಬಗ್ಗೆ ಅದಕ್ಕೆ ನಾನು ಹೇಳಿದೆ, ಒಂದು ದಿವಸ ಈ ಸಬ್-ಜುಡೀಸ್ ಏನು ಎನ್ನುವುದರ ಬಗ್ಗೆ ಅಡ್ವೋಕೇಟ್ ಜನರಲ್‌ರವರನ್ನು ಕರೆಸಿಕೊಂಡು ಚರ್ಚೆ ಮಾಡುವುದು ಒಳ್ಳೆಯದು. ಏಕೆಂದರೆ ಈ ಸದನಕ್ಕೆ ಅನ್ಯಾಯವಾಗಿರುವಂಥದ್ದನ್ನು ಚರ್ಚೆ ಮಾಡುವುದು ಸಂಪೂರ್ಣ ವಾಗಿ ಪ್ರತಿಬಂಧಿಸತಕ್ಕಂಥ ಶಕ್ತಿ ಆ ಎರಡು ಶಬ್ದಕ್ಕೆ ಇದ್ದು ಬಿಟ್ಟರೆ ಈಗ ನಾವು ನಮ್ಮ ನಿಯಮಾವಳಿ ಗಳನ್ನು ಬದಲಾವಣೆ ಮಾಡುವುದಕ್ಕೆ ಯೋಚನೆ ಮಾಡಬೇಕಾದಂಥ ಸಂದರ್ಭ ಬರಬಹುದು. ಇದು ಕೆಲವು ಹೌದು, ಕೆಲವು ರೂಪದ ಕೇಸ್‌ಗಳಲ್ಲಿ ಸಬ್-ಜುಡೀಸ್ ತಲೆಗೆಲ್ಲಾ ಒಂದೇ ಮಂತ್ರ ಎಂದು ಹೇಳಿ ಯಾರ್‍ಯಾರೋ ಏನಾಗಬೇಕು ? ಈಗಂತೂ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳು ಬೇಕಾದಷ್ಟು ಬರುತ್ತದೆ. ಕೆಲವು ಪಾಪ ನ್ಯಾಯವಾಗಿ ಹಾಕುವವರು ಇದ್ದಾರೆ, ಕೆಲವರು ಸುಮ್ಮ ಸುಮ್ಮನೆ ಯಾರ್‍ಯಾರನ್ನೋ ಹೆದರಿಸಿಕೊಂಡು ಕೊನೆಗೆ ಅರ್ಜಿಯನ್ನು ಯಾವಾಗ ಬೇಕೋ ಅವತ್ತು

ಇಟ್ಟುಕೊಳ್ಳುತಕ್ಕಂಥವರು ಎಲ್ಲಾ ತರಹದ ಒಂದು ಅವಕಾಶ ಸಿಕ್ಕಿದ ಮೇಲೆ ಆ ಅವಕಾಶದ ಉಪಯೋಗ ದುರುಪಯೋಗ ಎಲ್ಲವೂ ಕೂಡಾ ನಡೆಯುತ್ತದೆ ಹೈಕೋರ್ಟ್‌ನಲ್ಲಿ ಒಂದು ಅರ್ಜಿ ಇದೆ ಎಂದು ಇಟ್ಟುಕೊಳ್ಳಿ. ಅದು ಇಂತಿಷ್ಟು ದಿವಸ ಆದಮೇಲೆ ಆ ದಿವಸದೊಳಗೆ ಸರಿಯಾಗಿ ಹೈಕೋರ್ಟಿನವರೇ ತೀರ್ಮಾನವನ್ನು ಕೊಟ್ಟುಬಿಡುತ್ತಾರೆ, ಇದಕ್ಕಿಂತ ದೊಡ್ಡ ತೀರ್ಮಾನ ಬೇರೆ ಯಾವುದೂ ಬೇಕಾಗಿಲ್ಲ. ನಾವು ಅದಕ್ಕೆ ಒಪ್ಪಿಕೊಂಡು ಬಿಡಬಹುದು. ಆದರೆ ಅದು ಏನಾಗುತ್ತದೆ ಎನ್ನತಕ್ಕಂಥ ಅವಕಾಶ ಇಲ್ಲದೇ ಇರುವುದರಿಂದ ನಾವು ಇದನ್ನು ಚರ್ಚೆ ಮಾಡಲೇಬೇಕು. ಆ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಆದುದರಿಂದ ಯಾವುದೇ ಫ್ಯಾಕ್ಟ್ಸ್‌ನ್ನು ಅದನ್ನು ಹೇಳಲೇಬಾರದು, ಅಥವಾ ಅದರ ಬಗ್ಗೆ ಪ್ರಸ್ತಾಪ ಮಾಡಬಾರದು ಎಂದರೆ ಆಗುವುದಿಲ್ಲ. ಒಂದು ಹೆಜ್ಜೆ ಆ ಕಡೆ ಈ ಕಡೆ ವಾಲದೆ ನೀವು ದಾರದ ಮೇಲೆ ನಡೆದರೂ ಕೂಡಾ ದೇಹ ಸ್ವಲ್ಪ ಆ ಕಡೆ ಈ ಕಡೆ ವಾಲದಂತೆ ಬ್ಯಾಲೆನ್ಸ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಇದು ಹಾಗೆ ಅಲ್ಲವೇ ಅಲ್ಲ. ನೀವು ಏನು ಹೇಳುವುದು ಎಂದರೆ ದಾರದಷ್ಟೇ ನೆಟ್ಟಗೆ ನಡೆಯಬೇಕು ಎಂದು ಹೇಳಿದರೆ ಯಾವ ಸರ್ಕಸ್‌ನವರೂ ಕೂಡಾ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಹೇಳುವುದಕ್ಕೆ ಚೆಂದವೇ ಹೊರತು ಮಾಡುವುದಕ್ಕೆ ಆಗುವುದಿಲ್ಲ. ನೀವೇ ಇದರ ಬಗ್ಗೆ ಭಾಷಣ ಮಾಡಿ ಹೈಕೋರ್ಟ್‌ನಲ್ಲಿ ಇರುವಂಥ ಒಂದು ಅಕ್ಷರವೂ ಇಲ್ಲಿ ಬಾರದ ರೀತಿಯಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಆದರೆ ಹೈಕೋರ್ಟ್‌ಗೆ ಮಾನ್ಯತೆಯನ್ನು ಕೊಡುವುದನ್ನು ಕೊಡೋಣ. ಅವರು ನಾಳೆ ಹೇಳಬಹುದಾದ್ದನ್ನೆಲ್ಲಾ ನಾವು ಇಲ್ಲಿ ಜಡ್ಜಮೆಂಟ್‌ನ್ನು ಹೇಳಿಬಿಡುವುದು ಬೇಡ ಎನ್ನತಕ್ಕಂಥ ವಿಷಯವನ್ನು ಹೇಳತಕ್ಕಂಥದ್ದನ್ನು ಒಪ್ಪಿಕೊಂಡು ಅಷ್ಟಕ್ಕೇ ನಾವು ಸೀಮಿತಗೊಳಿಸತಕ್ಕಂಥದ್ದು, ಇವತ್ತು ಪ್ರಶ್ನೆ ಏನು ಎಂದರೆ ಬೆಂಗಳೂರು ಬೆಳೆಯುತ್ತಿರತಕ್ಕಂಥ ಒಂದು ಮಹಾನಗರದಲ್ಲಿ ಇವತ್ತು ಒಂದೊಂದು ಇಂಚು ಭೂಮಿಗೂ ಕೂಡಾ ದಿವಸ ಬೆಲೆ ವಿಷ ಏರಿದಂತೆ ಏರುತ್ತಿದೆ. ಸರ್ಕಾರದ ಜವಾಬ್ದಾರಿ ಇಲ್ಲಿ ಏನು ಇದೆ, ಅನಾವಶ್ಯಕವಾಗಿ ಎಲ್ಲೆಲ್ಲಿಂದಲೋ ಹಣವಂತರು ಬಂದು ಇಲ್ಲಿ ಈ ಊರಿನಲ್ಲಿರತಕ್ಕಂಥ ಭೂಮಿ ಪ್ರತಿಯೊಂದು ಕೂಡಾ ಏರದೇ ಆಕಾಶಕ್ಕೆ ಇದ್ದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಕೂಡಾ ಸರ್ಕಾರದ ಮೇಲೆ ಇದೆ. ನಾಳೆ ದಿವಸ ಇಲ್ಲಿದ್ದವರು ಯಾರಿಗೂ ಒಂದು ತುಂಡು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲದೆ ಎಲ್ಲಾ ಭೂಮಿಯನ್ನು ಬಾಂಬೆಯವರಿಗೆ, ಕಲ್ಕತ್ತದವರಿಗೆ ಮಾರಟ ಮಾಡಿಕೊಂಡು ಮನೆಗೆ ಹೋಗತಕ್ಕಂಥ ಪರಿಸ್ಥಿತಿಯನ್ನು ತಡೆಗಟ್ಟುವ ನೀತಿ ಕೂಡಾ ಸರಕಾರದಿಂದ ಬೇಕು. ಆ ಜವಾಬ್ದಾರಿ ಕೂಡಾ ಸರಕಾರಕ್ಕೆ ಇದೆ. ಇದನ್ನು ಯಾರು ಮಾಡುತ್ತಿದ್ದಾರೆ, ಹೆಸರು ಏನು ಇಟ್ಟುಕೊಂಡಿದ್ದಾರೆ, ಪ್ರಶ್ನೆ ಅದಲ್ಲ. ಹೆಸರು ಯಾರದ್ದೋ ಇಟ್ಟುಕೊಂಡಿದ್ದಾರೆ, ಯಾರದ್ದೋ ಚೆನ್ನಾಗಿ ಇಡಿರಬಹುದು, ಇನ್ನೊಬ್ಬರ ಮನೆ ಹೆಸರೇ ಚೆನ್ನಾಗಿ ಕಂಡು ಅದನ್ನು ಇಟ್ಟುಕೊಳ್ಳಬಾರದೆಂದೇನೂ ಇಲ್ಲ, ಇದರಲ್ಲಿ ನನ್ನ ಕೇಸ್ ಕೂಡಾ ಒಂದು ಇದೆ, ಯಾವುದೋ ಬಾಡಿಗೆ ಮನೆಯಲ್ಲಿ ನಾನು ಇದ್ದೆ, ಅದು ನನ್ನದೇ ಮನೆ ಎಂದು ಹೇಳಿ ನನ್ನ ಸ್ನೇಹಿತರೂ ಕೂಡಾ ತಿಳಿದುಕೊಂಡು ಬಿಟ್ಟಿದ್ದರು. ನನಗೂ ಆ ಮನೆಗೂ ಸಂಬಂಧ ಇಲ್ಲದಿದ್ದರೂ ಕೂಡಾ ಹಾಗೆ ತಿಳಿದುಕೊಂಡಿದ್ದರು, ಒಂದೊಂದು ಅಕ್ಷರಕ್ಕೂ ಒಂದೊಂದು ಹೆಸರು ಇರಬಹುದು. ಜೀ ಎಂದರೆ ಜೀವರಾಜ್ ಆಳ್ವ ಎನ್ನಬಹುದು, ಅದು ಸತ್ಯ ಇದ್ದರೂ ಇರಬಹುದು; ನನಗೆ ಅದು ಗೊತ್ತಿಲ್ಲ, ಏತಕ್ಕೊ ಅವರು ಇಲ್ಲ ಎಂದು ಹೇಳುತ್ತಿಲ್ಲ. ಇಲ್ಲಿ ಅದಲ್ಲ ಪ್ರಶ್ನೆ ಅದು ಏನಾದರೂ ಇರಲಿ. ಈಗ ಬಂದಿರುವುದು ಏನೆಂದರೆ ನಮ್ಮ ತಿಳುವಳಿಕೆಗೆ ಕೆಲವು ವಿಚಾರಗಳು ಬಂದಿವೆ, ಈಗ ಅರ್ಬನ್ ಲ್ಯಾಂಡ್ ಸೀಲಿಂಗ್ ಕಾನೂನು ಇದೆ. ಸಾಕಷ್ಟು ಬಿಗಿಯಾಗಿರತಕ್ಕಂಥ ಕಾನೂನು, ಇದನ್ನು ಯಾವ ಉದ್ದೇಶದಿಂದ ಮಾಡಿದ್ದು ಎಂದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಅರ್ಬನ್ ಲಾಂಡ್ಸನ್ನು ಸೇಫ್‌ಗಾರ್ಡ್ ಮಾಡುವುದಕೋಸ್ಕರ ಮಾಡಿದ್ದು. ಹೇಗೆ ರೂರಲ್ ಅಗ್ರಿಕಲ್ಚರಲ್ ಲ್ಯಾಂಡ್‌ಗೆ ಒಂದು ಇತಿಮಿತಿ ಇದೆಯೋ ಹಾಗೆ ಅರ್ಬನ್ ಲ್ಯಾಂಡ್ ವಿಷಯದಲ್ಲೂ ಕೂಡಾ ಒಂದು ಇತಿಮಿತಿ ಇರಬೇಕು. ಅದನ್ನು ಟ್ರೇಡ್ ಮಾಡಿ ಯಾರು ಏನು ಬೇಕಾದರೂ ಮಾಡುವುದಕ್ಕೆ ಅವಕಾಶ ಇರಬಾರದು. ಆದರೂ ಇವತ್ತು ನಮ್ಮ ಒಟ್ಟಿನ ಆರ್ಥಿಕ ವ್ಯವಸ್ಥೆ ಹೇಗೆ ಇದೆ ಎಂದರೆ ದುಡ್ಡಿದ್ದವನು ಮರಿ ಹಾಕುವ ವ್ಯವಸ್ಥೆ ಇದೆಯೇ ಹೊರತು, ದುಡ್ಡಿಲ್ಲದವನು ಕಷ್ಟಪಟ್ಟು ಬೆವರು ಸುರಿಸಿ ದುಡಿಮೆ ಮಾಡುವುದಕ್ಕೆ ಪೋಷಕವಾದ ವ್ಯವಸ್ಥೆ ಇಲ್ಲ, ಇವತ್ತು ಒಂದು ಲಕ್ಷ ರೂಪಾಯಿ ದುಡ್ಡಿರುವವನು ಹತ್ತು ಲಕ್ಷ ರೂಪಾಯಿ ಮಾಡುತ್ತಾನೆ, ಹತ್ತು ಲಕ್ಷ ಇದ್ದವನು ಒಂದು ಕೋಟಿ ಮಾಡುತ್ತಾನೆ. ಬೆಂಗಳೂರು ನಗರದಲ್ಲಿ ಇವತ್ತು ದಿಢೀರ್ ಎಂದು ಲಕ್ಷಾಧಿಪತಿಗಳು, ಕೋಟ್ಯಾಧಿಪತಿಗಳು ಆಗುತ್ತಾರೆ. ಹೌಸಿಂಗ್ ಸೊಸೈಟಿಗಳದ್ದು ಒಂದು ರ್ಯಾಕೆಟ್ ಆಗಿದೆ. ಜಿನೈನ್ ಹೌಸಿಂಗ್ ಸೊಸೈಟಿಗಳು ಇವೆ. ರ್ಯಾಕೆಟ್ ಸ್ವರೂಪದ ಸೊಸೈಟಿಗಳು ಇವತ್ತು ಲ್ಯಾಂಡ್‌ನ್ನು ಎಲ್ಲಿ ಆಯಿತು ಅಲ್ಲಿ, ಹೇಗೆ ಆಯಿತು ಹಾಗೆ ತೆಗೆದುಕೊಂಡು ಅಗ್ರಿಮೆಂಟ್ ಮಾಡಿಸಿಕೊಳ್ಳುತ್ತಾರೆ. ಇವರದ್ದು ಒಂದು ಬಿಲ್ಲೆ ದುಡ್ಡೂ ಖರ್ಚಾಗಿರುವುದಿಲ್ಲ,

ಒಬ್ಬರ ಹತ್ತಿರ ಅಗ್ರಿಮೆಂಟ್ ಮಾಡಿಸಿಕೊಳ್ಳುವುದು, ಈ ಕಡೆಗೆ ಇನ್ನೊಬ್ಬರ ಕಡೆಗೆ ಮಾರಾಟ ಮಾಡುವುದು, ಮಧ್ಯೆ ಬಂದ ದುಡ್ಡನ್ನು ಪೂರ್ತಿ ಇವರು ಹೊಡೆದುಕೊಂಡು ಹೋಗುವುದು, ಇದರಲ್ಲಿ ಒಂದು ಪಾಲು ಶಾಖೆಯ ಲವಣಾಯ ಎಂದು ಆಫೀಸರ್ಸ್‌ಗೋ, ಯಾರಿಗೋ ಕೊಟ್ಟುಬಿಡುವುದು, ಇದು ನಡೆದಿದೆ. ಇವತ್ತು ಅರ್ಬನ್ ಲ್ಯಾಂಡ್ ಸೀಲಿಂಗ್ ಕಾನೂನು ಸಾಕಷ್ಟು ಬಿಗಿಯಾಗಿರತಕ್ಕ ಕಾನೂನು. ಇದರ ಬಗ್ಗೆ ಇಲಾಖೆಯವರು ಎಕ್ಸೆಂಪ್ಷನ್ ಮಾಡುವುದು ಹಾರ್ಡ್‌ಶಿಪ್ಸ್ ಬೇಸಿಸ್ ಮೇಲೆ ಮಾತ್ರ, ಹಾರ್ಡ್‌ಶಿಪ್ ಬೇಸಿಸ್ ಮೇಲೂ ಎಕ್ಸೆಂಪ್ಷನ್ ಅಷ್ಟು ಸುಲಭವಾಗಿ ಯಾರಿಗೂ ಕೂಡಾ ದೊರಕುವುದಿಲ್ಲ, ನನಗೇ ಒಂದು ಕೇಸ್ ಗೊತ್ತಿದೆ. ಒಬ್ಬ ಡಾಕ್ಟರ್, ತುಂಬಾ ಸುಪ್ರಸಿದ್ಧವಾದ ಡಾಕ್ಟರ್, ಅವರಿಗೆ ಸ್ವತಃ ಕ್ಯಾನ್ಸರ್ ಆಯಿತು, ಇದ್ದಂಥ ಒಬ್ಬ ಮಗ ಸ್ಕೂಟರ್ ಆಕ್ಸಿಡೆಂಟ್‌ನಲ್ಲಿ ಸತ್ತುಹೋದ, ಅವರಿಗೆ ಸಾಕಷ್ಟು ಸಾಲ ಆಯಿತು. ಅವರು ತಮ್ಮದಾದಂಥ ಒಂದು ಸಣ್ಣ ಭಾಗ ಜಮೀನನ್ನು ಮಾರಲು ಎಕ್ಸೆಂಪ್ಷನ್‌ಗೆ ಹಾಕಿಕೊಂಡರು. ಅದು ಇಷ್ಟೆಲ್ಲಾ ದೊಡ್ಡ ಪ್ರಕರಣ ಅಲ್ಲ. ಅದಕ್ಕೆ ಅರ್ಬನ್ ಸೀಲಿಂಗ್ ಎಕ್ಸೆಂಪ್ಷನ್‌ಗೋಸ್ಕರ ಪ್ರಯತ್ನಪಟ್ಟು ಮೂರು ವರ್ಷಗಳಾಯಿತು. ಈಗಲೂ ಕೂಡಾ ಅದು ಫೈನಲ್ ಆಯಿತೋ ಬಿಡತೋ ನನಗೆ ಗೊತ್ತಿಲ್ಲ. ಅವರು ನನಗೆ ಒಬ್ಬನಿಗೇ ಗೊತ್ತಿಲ್ಲ, ಇಲ್ಲಿ ಸಾಕಷ್ಟು ಜನ ಅವರ ಬಗ್ಗೆ ಗೊತ್ತಿರುವಂತಹವರು ಇದ್ದಾರೆ. ಎಲ್ಲರೂ ಬಂದು ಸರಕಾರಕ್ಕೆ ಹೇಳಿಕೇಳಿ ಮಾಡಿದರು. ಇದನ್ನು ಏತಕ್ಕೆ ಹೇಳಿದೆ ಎಂದರೆ ಎಕ್ಸೆಂಪ್ಷನ್ ಅಷ್ಟು ಸುಲಭವಾಗಿ ಸಿಗುವುದಿಲ್ಲ. ಇದರಲ್ಲಿ ಸರಕಾರ ಯಾವುದೋ ಒಂದು ನೀತಿಯನ್ನು ಅನುಸರಿಸಿದೆ. ಕೆಲವು ವಿಷಯದಲ್ಲಿ ಧಾರಾಳವಾಗಿ ಕೊಡುತ್ತೇವೆ ಎಂದರೆ ಅದರಲ್ಲಿ ಯಾರು ಯಾರು ಬೇಕೋ ಅವರೆಲ್ಲಾ ಬಂದು ಇದರ ಉಪಯೋಗ ಪಡೆದುಕೊಳ್ಳಬಹುದು. ವಾಸ್ತವಾಂಶದಲ್ಲಿ ಏನಾಗಿದೆ ಹಲವಾರು ಕಾನೂನಿನ ಅಡಚಣೆಗಳು ಇದ್ದರೂ ಕೂಡಾ, ಪ್ರೊಸೀಜರ್ ಅಡಚಣೆಗಳು ಇದ್ದರೂ ಕೂಡಾ, ಇದಕ್ಕೆ ಅತೀ ವೇಗದಲ್ಲಿ, ಶರವೇಗದಲ್ಲಿ ಮಂಜೂರಾತಿ ದೊರಕಿದೆ, ಇದು ಸಾಧಾರಣವಾಗಿ ದೊರಕುವುದಿಲ್ಲ. ಅಧಿಕಾರಿಗಳು ಯಾವರೀತಿಯಲ್ಲಿ ವರ್ತನೆ ಮಾಡುತ್ತಾರೆ ಎನ್ನತಕ್ಕಂಥದ್ದು ನಮಗೆಲ್ಲಾ ಗೊತ್ತಿದೆ, ಅಷ್ಟು ಸುಲಭವಾಗಿ ತಕ್ಷಣ, ನಾವು ಹೇಳಿದ ತಕ್ಷಣ ಮಂಜೂರಿಕೆ ಮಾಡಿಕೊಂಡು ಇಂತಹ ವಿಷಯಗಳಲ್ಲಿ ಕಾರ್ಯಕ್ರಮ ಜರುಗುವುದು ಒಂದು ಸ್ವಭಾವವಾಗಿದ್ದರೆ, ಇವತ್ತು ಇದನ್ನು ಪ್ರಶ್ನೆ ಮಾಡತಕ್ಕ ಪರಿಸ್ಥಿತಿ ಬರುತ್ತಿರಲಿಲ್ಲ. ಆದರೆ ಇದರಲ್ಲಿ ಏನಾಗಿದೆ, ಯಾವ ರೀತಿಯಲ್ಲಿ ಇದಕ್ಕೆ ಎಕ್ಸೆಂಪ್ಷನ್ ಕೊಟ್ಟಿರತಕ್ಕಂಥದ್ದು ಕೊಟ್ಟಿರುವಂತಹ ವೈಖರಿ, ಕೊಟ್ಟಿರುವಂತಹ ವೇಗ, ಅದರಲ್ಲೂ ಕೂಡಾ ಸಂಬಂಧಪಟ್ಟ ಸದನದಲ್ಲಿ ಕೆಲವರು ಬಹಳ ಪ್ರಬಲವಾದ ಆಕ್ಷೇಪಣೆಗಳು ಇದ್ದರೂ ಕೂಡಾ ಅದನ್ನೆಲ್ಲಾ ತಳ್ಳಿಹಾಕತಕ್ಕಂಥ ಒಂದು ಸ್ವರೂಪ ಇದೆಯಲ್ಲಾ ಅದರಿಂದಾಗಿ ಇದು ಗಂಭೀರವಾದ ಅಪವಾದಗಳಿಗೆ ಅನುಮಾನಗಳಿಗೆ ಅವಕಾಶ ಮಾಡಿಕೊಟ್ಟಿದೆ. ಒಂದು ಮಾತನ್ನು ಮುಂದುವರಿದು ಕೇಳುವುದಕ್ಕೆ ಬಯಸುತ್ತೇನೆ. ಅರ್ಬನ್ ಸೀಲಿಂಗ್ ಎಕ್ಸೆಂಪ್ಷನ್ ವಿಷಯದಲ್ಲಿ ಬೆಂಗಳೂರು ನಗರದಲ್ಲಿ ಸಾಕಷ್ಟು ರ್‍ಯಾಕೆಟ್‌ಗಳು ಕಾರ್ಯಪ್ರವೃತ್ತವಾಗಿವೆ ಏನು ಅವರ ಮೋಡಸ್ ಆಪರೆಂಡಿ ಎಂದರೆ ಎಲ್ಲೆಲ್ಲಿ ಯಾರ್‍ಯಾರು ಎಕ್ಸೆಂಪ್ಷನ್‌ಗೆ ಅಪ್ಲಿಕೇಷನ್ ಹಾಕಿರುತ್ತಾರೆ ಎಂಬ ಪಟ್ಟಿಯನ್ನು ತೆಗೆದುಕೊಂಡು ಅಧಿಕಾರಿಗಳಿಂದ ಅವರದ್ದನ್ನು ರಿಜೆಕ್ಟ್ ಸುಲಭವಾಗಿ ಆಗುತ್ತದೆ. ಈ ರೀತಿ ರಿಜೆಕ್ಟ್ ಮಾಡಿಸುವುದು, ಆಮೇಲೆ ಅವರು ನೆಗೋಷಿಯೇಟ್ ಮಾಡಿಕೊಂಡು, ತಮಗೆ ಬೇಕಾದಷ್ಟಕ್ಕೆ ನೆಗೋಷಿಯೇಟ್ ಮಾಡಿಕೊಂಡು ಅದಕ್ಕೆ ಬೇಕಾದಂಥ ಎಕ್ಸೆಂಪ್ಷನ್ ಕೊಡಿಸುವುದು. ಇಂತಹ ಮೋಡಸ್ ಆಪರೆಂಡಿಯನ್ನು ಅವರು ಇಟ್ಟುಕೊಂಡಿದ್ದಾರೆ. ಬೆಂಗಳೂರಿನಲ್ಲಿ ಇದು ಒಂದು ಪ್ರಕರಣ ಅಷ್ಟೇ. ಇದು ಹೌದೋ ಇಲ್ಲವೋ ಎಂಬುದನ್ನ ಸರಕಾರ ಹೇಳಬೇಕು. ಇಂತಹ ಹಲವಾರು ಪ್ರಕರಣಗಳು ಈಗ ಆಗುತ್ತಿವೆ ಎಂದು ಕೆಲವರನ್ನು ಕಡೆಯಿಂದ ನಮ್ಮ ಕಿವಿಯ ಮೇಲೆ ಕೂಡಾ ಬೀಳುತ್ತಿವೆ. ಅದನ್ನು ವೆರಿಫೈ ಮಾಡುವಷ್ಟು ಪುರಸೊತ್ತು ಕೂಡಾ ನಮಗೆ ಇಲ್ಲ, ವೆರಿಫೈ ಮಾಡಿಕೊಂಡು ನಮಗೆ ಆಗಬೇಕಾದುದೂ ಏನೂ ಇಲ್ಲ, ಆದರೆ ಸರಕಾರದ ಜವಾಬ್ದಾರಿ ಇದೆ. ಇದರಲ್ಲಿ ಸರ್ಕಾರದ ಜವಾಬ್ದಾರಿ ಸಾಕಷ್ಟು ಇದೆ. ಇಂಥಾದ್ದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಒಂದು ಪ್ರಕರಣ ಈಗ ಬೆಳಕಿಗೆ ಬಂದಿದೆ. ಈ ಪ್ರಕರಣದ ಬಗ್ಗೆ ಏನು ಅನುಮಾನ ಬಂದಿದೆ ಎಂದರೆ, ಮುಖ್ಯಮಂತ್ರಿಗಳ ಸಂಬಂಧೀಕರಿಗೋಸ್ಕರವಾಗಿ ಇದರ ವ್ಯವಹಾರ ಬಹಳಷ್ಟು ವೇಗದಲ್ಲಿ ನಡೆದಿದೆ ಎಂದು. ಇದರಲ್ಲಿ ಮುಖ್ಯಮಂತ್ರಿಗಳ ಪಾತ್ರ ಇರಬಹುದು ಅಥವಾ ಇಲ್ಲದಿರಬಹುದು; ಆದರೂ ಇದರ ಬಗ್ಗೆ ಗಂಭೀರವಾದಂಥ ಅನುಮಾನ ಎಲ್ಲರಲ್ಲಿಯೂ ಬಂದಿದೆ. ಇಂತಹ ಪ್ರಕರಣಗಳಲ್ಲಿ ಅಧಿಕಾರ ವರ್ಗದವರು ಹಲವಾರು ರೀತಿಯಲ್ಲಿ ಕೆಲಸ ಮಾಡುತ್ತಾರೆ. ಈ ಪ್ರಕರಣದಲ್ಲಿ ಗಂಭೀರವಾದಂಥ ಅನುಮಾನ ಬಂದಿರುವಾಗ ನಾವು ಇಲ್ಲಿ ಇದರ ಮೇಲೆ ಚರ್ಚೆ ಮಾಡುವುದು, ನಂತರ ಚರ್ಚೆಗೆ ಉತ್ತರ ಕೊಡುವುದು ಹಾಗೂ ಈ ಕೇಸ್ ಹೈಕೋರ್ಟಿನ ಮುಂದಿರುವುದರಿಂದ ಅಲ್ಲಿ ವಿವರವಾಗಿ ತನಿಖೆಯಾಗುತ್ತದೆ ಎಂದು ಹೇಳಿ ಮುಗಿಸುವುದು ಅಷ್ಟಕ್ಕೇ ಇದೆ

ಸೀಮಿತವಾಗಬಾರದು. ಇಂತಹ ಪ್ರಕರಣಗಳು ನಡೆದಾಗ ಅದರ ಬಗ್ಗೆ ಗಂಭೀರವಾದಂಥ ತನಿಖೆ ಆಗಬೇಕಾಗುತ್ತದೆ. ಇದರಿಂದ ಹಲವಾರು ವಿಷಯಗಳ ಮೇಲೆ ಇದರ ಪರಿಣಾಮ ಬೀರುತ್ತದೆ. ಈಗ ಅರ್ಬನ್ ಲ್ಯಾಂಡ್ ಬಗ್ಗೆ ಏನು ಒಂದು ದಾಂಧಲೆ ನಡೆಯುತ್ತಿದೆ, ಅದನ್ನು ಸಹ ಪರಿಣಾಮಕಾರಿಯಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ, ಆಡಳಿತದಲ್ಲಿ ಬಿಗಿ ತರುವುದಕ್ಕೂ ಸಾಧ್ಯವಾಗುತ್ತದೆ. ನಾವು ಇಲ್ಲಿ ಇದರ ಮೇಲೆ ಸುಮ್ಮನೆ ಭಾಷಣ ಮಾಡಿದರೆ ಆಡಳಿತದಲ್ಲಿ ಬಿಗಿ ಬರುವುದಿಲ್ಲ. ಯಾವುದಾದರು ಒಂದು ಕ್ರಮ ತೆಗೆದುಕೊಳ್ಳುವುದರಿಂದ ಮಾತ್ರ ಆಡಳಿತದಲ್ಲಿ ಬಿಗಿ ಬರುತ್ತದೆ. ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಈ ಕೇಸ್ ಬಗ್ಗೆ ತನಿಖೆ ನಡೆಸಿದರೆ ಸಂಬಂಧಪಟ್ಟ ಅಧಿಕಾರಿಗಳು ಅಷ್ಟೇ ಅಲ್ಲ, ಎಂ.ಎಲ್.ಎ.ಗಳು, ಕಾರ್ಪೊರೇಟರ್‌ಗಳು, ಮಂಡಲ್ ಪಂಚಾಯತ್ ಸದಸ್ಯರು ಹಾಗೂ ಇನ್ನಿತರರು ಸಹ ಹೆದರುತ್ತಾರೆ. ಆದ್ದರಿಂದ ಇದನ್ನು ಗಂಭೀರವಾದಂಥ ತನಿಖೆಗೆ ಒಳಪಡಿಸಬೇಕು, ಕೆಲವರು ಲೋಕಾಯುಕ್ತದ ಮೂಲಕ ತನಿಖೆ ಆಗಲಿ ಎಂದು ಹೇಳಿದರು. ಲೋಕಾಯುಕ್ತದ ಬಗ್ಗೆ ವಿಶ್ವಾಸವಿರಬೇಕೆಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಆದರೆ ಅದರಿಂದ ನ್ಯಾಯ ಸಿಗುತ್ತದೆಂದು ನಾವು ನಿರೀಕ್ಷೆ ಮಾಡಿಲ್ಲ, ಈ ಮೊದಲು ಇದ್ದ ವಿಜಿಲೆನ್ಸ್ ಕಮಿಷನ್‌ಗಿಂತ ಹೆಚ್ಚಿನದು ಸ್ಥಾಪನೆ ಆಗಿದೆ, ಇದರಿಂದ ರಾಜ್ಯದಲ್ಲಿ ಧರ್ಮಸ್ಥಾಪನೆ ಆಗುತ್ತದೆ, ಅಲ್ಲಿಗೆ ಯಾರು ಹೋದರೂ ಸಹ ಧರ್ಮವನ್ನು ಎತ್ತಿ ಹಿಡಿಯುತ್ತಾರೆ ಎಂಬ ನಂಬಿಕೆ ನಮಗೆ ಇನ್ನೂ ಬಂದಿಲ್ಲ. ಇನ್ನು ಸಿ.ಓ.ಡಿ.ಯನ್ನು ದೇವರೇ ಕಾಪಾಡಬೇಕು. ನಾಳೆ ದಿವಸ ನಾನು ಇದರ ಮೇಲೆ ವಿವರವಾಗಿ ಮಾತನಾಡುತ್ತೇನೆ. ಇದನ್ನು ರದ್ದು ಮಾಡುವುದು ಒಳ್ಳೆಯದು. ಇವೊತ್ತು ನಮ್ಮ ದೇಶದಲ್ಲಿರತಕ್ಕಂಥ ತನಿಖಾ ಸಂಸ್ಥೆಗಳ ಪೈಕಿ ಸಿ.ಬಿ.ಐ.ಗೆ ಒಂದು ಸ್ಟೇಟಸ್ ಇದೆ ಎಂದು ಬಹಳ ನಿಷ್ಪಕ್ಷಪಾತವಾಗಿ ಹೇಳಬಹುದು. ಈ ಇನ್‌ವೆಸ್ಟಿಗೇಷನ್ ಏಜನ್ಸಿಯಲ್ಲಿಯೂ ಕೆಲವು ಲೋಪದೋಷಗಳು ಇರಬಹುದು. ಮುಖ್ಯವಾಗಿ ಈ ಒಂದು ಗಂಭೀರವಾದಂಥ ಆಪಾದನೆ ಏನು ಬಂದಿದೆ, ಇದರಲ್ಲಿ ಅನ್ಯಾಯ ಆಗಿದೆಯೋ ಅಥವಾ ಇಲ್ಲವೇ. ಇದರಲ್ಲಿ ಭ್ರಷ್ಟಾಚಾರ ಇದೆಯೋ ಅಥವಾ ಇಲ್ಲವೇ ಎಂಬುದು ಸಾಬೀತು ಆಗಬೇಕು ಎಂಬ ಛಲ ನಿಮಗೇನಾದರು ಇದ್ದರೆ, ನೀವು ಧೈರ್ಯ ಮಾಡಿ ಸಿ.ಬಿ.ಐ. ತನಿಖೆಗೆ ಇದನ್ನು ಒಪ್ಪಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಸುಮಾರಾಗಿ ಎರಡೂವರೆ ಗಂಟೆಗಳ ಕಾಲ ಇದರ ಮೇಲೆ ಚರ್ಚೆಯಾಗಿದೆ. ಇದರಲ್ಲಿ ಮೂಲಭೂತವಾಗಿ ನಾಲ್ಕು ಪ್ರಶ್ನೆಗಳನ್ನು ಎತ್ತಿದ್ದಾರೆ. ಅವುಗಳೆಂದರೆ, ಜಮೀನಿನ ಬೆಲೆಯನ್ನು ಕಡಿಮೆಗೊಳಿಸಿರುವುದರಿಂದ ಸರ್ಕಾರದ ಆದಾಯಕ್ಕೆ ಧಕ್ಕೆ ಆಗಿದೆ ಎಂದು. ಲ್ಯಾಂಡ್ ರಿಫಾರ್ಮ್ಸ್ ಕಾನೂನನ್ನು ಇದರಲ್ಲಿ ಉಲ್ಲಂಘನೆ ಮಾಡಲಾಗಿದೆಯೆಂದು, ಹಾಗೂ ಇದರಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ನಡೆದುಕೊಳ್ಳದೆ ಅದನ್ನು ಉಲ್ಲಂಘನೆ ಮಾಡಿದ್ದಾರೆ ಮತ್ತು ಈ ಒಂದು ವ್ಯವಹಾರ ತೀವ್ರಗತಿಯಲ್ಲಿ ಹಾಗೂ ಶರವೇಗದಲ್ಲಿ ನಡೆದಿರುವುದರಿಂದ ಸಂಶಯಕ್ಕೆ ಆಸ್ಪದವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್‌ಕಮ್‌ಟ್ಯಾಕ್ಸ್‌ಗೆ ಸಂಬಂಧಪಟ್ಟಂತೆ ಸಹ ಹೇಳಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಸಹ ಹೇಳುತ್ತೇನೆ. ಇಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಸ್ಟಾಂಪ್ ಡ್ಯೂಟಿ ಬಗ್ಗೆ ಮೊದಲು ಹೇಳುತ್ತೇನೆ. ಈ ವಿಚಾರ ದಿನಾಂಕ ೧೫-೪-೧೯೮೮ರಂದು ಡೆಕ್ಕನ್‌ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ಸಂಪೂರ್ಣ ವಿವರಗಳೊಂದಿಗೆ ಪ್ರಕಟವಾಯಿತು. ಇದರ ವ್ಯವಹಾರ ಯಾವ ರೀತಿ ನಡೆಯಿತು, ಅಂಡರ್-ವ್ಯಾಲುಯೇಷನ್ ಯಾವ ರೀತಿ ಆಗಿದೆ ಎಂಬ ಬಗ್ಗೆ ವಿವರವಾದ ವರದಿ ಈ ಪತ್ರಿಕೆಗಳಲ್ಲಿ ಬಂತು. ಈ ವರದಿ ಪತ್ರಿಕೆಗಳಲ್ಲಿ ಬಂದ ದಿವಸವೇ ನಾನು ತನಿಖೆಗೆ ಆಜ್ಞೆ ಮಾಡಿದೆ. ಅಂಡರ್-ವ್ಯಾಲ್ಯುಯೇಷನ್ ಬಗ್ಗೆ ಇಂತಹ ಆಪಾದನೆಗಳು ಬಂದಾಗ, ಅದನ್ನು ವಿಚಾರ ಮಾಡುವುದಕ್ಕಾಗಿಯೇ ನಮ್ಮ ಕಂದಾಯ ಇಲಾಖೆಯಲ್ಲಿ ಒಂದು ಸ್ಪೆಷಲ್ ಸೆಲ್ ಇದೆ. ಮೇಲ್ನೋಟಕ್ಕೆ ತಪ್ಪಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಕಂಡು ಹಿಡಿಯುವುದಕ್ಕಾಗಿಯೇ ಈ ಸ್ಪೆಷಲ್ ಸೆಲ್ ಇದೆ. ಈ ಸೆಲ್‌ನವರು ಅನೇಕ ಪ್ರಕರಣಗಳಲ್ಲಿ ತಪ್ಪುಗಳಾಗಿರುವುದನ್ನು ಕಂಡುಹಿಡಿದಿದ್ದಾರೆ, ಈ ಕೇಸ್‌ನಲ್ಲಿಯೂ ಸಹ ಈ ಸ್ಪೆಷಲ್ ಸೆಲ್‌ನ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದ್ದಾರೆ ಈ ವ್ಯವಹಾರಕ್ಕೆ ಸಂಬಂಧಪಟ್ಟ ಬೇರೆ ಬೇರೆ ವಿಚಾರಗಳನ್ನು ತಮ್ಮ ಕೈಗೆ ತೆಗೆದುಕೊಂಡು ವಿಚಾರಣೆ ನಡೆಸಿದ ನಂತರ ಒಂದು ವರದಿಯನ್ನು ದಿನಾಂಕ ೨೯-೪-೧೯೮೮ರಂದು ಕೊಟ್ಟಿದ್ದಾರೆ. ಆ ವರದಿ ಅಂಡರ್ ವ್ಯಾಲ್ಯುಯೇಷನ್ ಆಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತು ಆ ದಿವಸ ಸಬ್ ರಿಜಿಸ್ಟ್ರಾರ್ ಆಗಿ ಕೆಲಸ ಮಾಡಿದಂಥ ಅಧಿಕಾರಿ ತಪ್ಪಿತಸ್ಥ ಪ್ರೇಮಘೋಷ ಎನುವುದನ್ನು ವರದಿ ಮಾಡಿದ್ದಾರೆ. ೮-೫-೧೯೮೮ ರಂದು ಫೈಲ್ ನನಗೆ ಬಂತು. ಅದೇ ದಿವಸ ಆ ಅಧಿಕಾರಿ

ಯನ್ನು ಸಸ್ಪೆಂಡ್ ಮಾಡಿದ್ದೇವೆ. ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಸ್ಪೆಷಲ್ ಡೆಪ್ಯುಟಿ ಕಮಿಷನರಿಗೆ ಅಧಿಕಾರ ಇದೆ. ಅವರಿಗೆ ವಿಚಾರಣೆ ಮಾಡಲಿಕ್ಕೆ ಆಜ್ಞೆ ಮಾಡಿದೆ. ಅವರು ಸಂಬಂಧಪಟ್ಟಂಥ ಪಾರ್ಟಿಗೆ ನೋಟೀಸ್ ಕೊಟ್ಟಿದ್ದಾರೆ. ಆ ಕೇಸ್‌ನಲ್ಲಿ ೪–೬–೧೯೭೮ ರಂದು ಅವರು ಹಾಜರಾಗಲಿಕ್ಕೆ ತಿಳಿಸಿದರು. ದಿವಸ ಆ ಪಾರ್ಟಿ ಹಾಜರಾಗಿದ್ದಾರೆ, ಅಬ್ಜಕ್ಷನ್ ಕೊಡಲಿಕ್ಕೆ ಟೈಂ ತೆಗೆದುಕೊಂಡಿದ್ದಾರೆ. ಕೇಸ್ ೩–೬–೧೯೭೮ ಕೂಡಲೇ ಗಮನಕ್ಕೆ ತಂದಾಗ ವಿಚಾರಣೆ ಮಾಡಿಸಿದ್ದೇವೆ, ಅಂದರೆ ಸಲ್ಲಿಸಲಿಲ್ಲ. ವಿಚಾರಣಾ ಅಧಿಕಾರಿಗಳು ಬರೆದಂಥ ವಿಚಾರದಲ್ಲಿ ಮಾನ್ಯ ಖರ್ಗೆಯವರು ಎತ್ತಿದರು ೧೯೭೫ರಲ್ಲಿ ಆ ಭಾಗದ ಜಮೀನಿನ ಬೆಲೆ ಒಂದು ಸ್ಕ್ವಯರ್ಸ್ ಮೀಟರಿಗೆ ೬೩೫ ರೂಪಾಯಿ ಎಂದು ಆಜ್ಞೆ ಹೊರಡಿಸಿದ ಮೇಲೆ ಹೈಕೋರ್ಟಿನವರು ತಳ್ಳಿಹಾಕಿದರೂ ಕೂಡ ಇದುವರೆಗೆ ರಿಜಿಸ್ಟ್ರೇಷನ್ ಆದಂಥ ಅಂದರೆ ಹೈಕೋರ್ಟ್ ಆಜ್ಞೆ ಆದಮೇಲೆ ಆದಂಥ ವಾಲ್ಯುಯೇಷನ್ ೬೩೮ ಮಾಡಿದ್ದೇವೆ. ಈ ವಿಚಾರದಲ್ಲಿ ಅವರು ಕಡಿಮೆ ಮಾಡಿದ್ದಾರೆ ಎನ್ನುವ ಪ್ರೈಮಾಫೇಸಿ ರಿಪೋರ್ಟ್ ನಮಗೆ ಬಂದಿದೆ. ಈ ರಿಪೋರ್ಟ್ ಆಧಾರದ ಮೇಲೆ ನಾವು ವಿಚಾರಣೆ ನಡೆಸಿದ್ದೇವೆ. ಸುಮಾರು ೮ ರಿಂದ ೧೦ ಲಕ್ಷ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಹಣ, ಈ ವ್ಯವಹಾರದಲ್ಲಿ ಕಡಿಮೆ ಬೆಲೆಯಿಂದ ಬಂದಿಲ್ಲ ಎನ್ನುವ ಅಭಿಪ್ರಾಯ ಪ್ರಾಸ್ತಾವಿಕವಾಗಿ ಸರ್ಕಾರದ್ದಾಗಿದೆ. ಆ ವಿಚಾರಣೆ ನಡೆಯುತ್ತಾ ಇದೆ. ಸರ್ಕಾರ ಯಾವುದೇ ಮುಚ್ಚಿಡತಕ್ಕಂಥಾದ್ದಕ್ಕೆ ಅಥವಾ ರಕ್ಷಣೆ ಕೊಡತಕ್ಕಂಥದ್ದಕ್ಕೆ ಹೋಗಿಲ್ಲ. ನಮ್ಮ ಸರ್ಕಾರದಲ್ಲೂ ಕೂಡ ನಿಷ್ಪಕ್ಷಪಾತ ಅಧಿಕಾರಿಗಳಿದ್ದಾರೆ. ಇದೇ ಒಂದು ಉದಾಹರಣೆ ಸಾಕು, ಈ ಪ್ರಕರಣ ಗೊತ್ತಾದ ಕೂಡಲೇ ಆಜ್ಞೆ ಮಾಡಿದ್ದೇವೆ, ಆ ಅಧಿಕಾರಿ ೩ ವಾರಗಳಲ್ಲಿ ರಿಪೋರ್ಟ್ ಕೊಟ್ಟಿದ್ದಾರೆ, ತಪ್ಪು ಆದುದನ್ನು ಎತ್ತಿ ತೋರಿಸಿದ್ದಾರೆ, ಸರ್ಕಾರ ಅದನ್ನು ಗ್ರಹಿಸಿ ವಿಚಾರಣೆಗೆ ಆಜ್ಞೆ ಮಾಡಿದೆ. ಇದರಲ್ಲಿ ರಕ್ಷಣೆ ಕೊಡುವುದು ಇದ್ದರೆ, ಯಾವುದಾದರೂ ರಾಜಕೀಯ ಒತ್ತಡ ಇದ್ದರೆ, ಅಧಿಕಾರದಲ್ಲಿದ್ದವರ ವರ್ಚಸ್ಸು ಇದ್ದರೆ ವಿಚಾರಣೆ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಇದು ಒಂದೇ ಉದಾಹರಣೆ ಸಾಕು. ಸರ್ಕಾರ ಅಧಿಕಾರದಲ್ಲಿರತಕ್ಕದ್ದಾಗಲಿ, ಅಥವಾ ರಾಜಕೀಯ ಪ್ರಭಾವ ಬೀರತಕ್ಕದ್ದರಲ್ಲಿ ಯಾವುದೇ ಪ್ರಯತ್ನ ನಡೆದಿಲ್ಲ ಎನ್ನುವ ಮಾತು ಸ್ಪಷ್ಟವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೇಳಿದ್ದು ಆಯಿತಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಐ ಡೋಂಟ್ ಡಿಸ್ಪ್ಯೂಟ್, ನಾನು ಡಿಸ್‌ಪ್ಯೂಟ್ ಮಾಡಿಲ್ಲ. ನಮ್ಮ ಎನ್‌ಕ್ವೈರಿಯಲ್ಲಿ ಬಂದಿದೆ. ಅದನ್ನು ವಿಚಾರಣೆ ಮಾಡತಕ್ಕಂಥ ಅಧಿಕಾರ ಸ್ಪೆಷಲ್ ಡೆಪ್ಯುಟಿ ಕಮಿಷನರಿಗೆ ಇದೆ. ಇಟ್ ಈಸ್ ಅಂಡರ್ ಇನ್ವೆಸ್ಟಿಗೇಷನ್ ಅಂಡ್ ಹಿಯರಿಂಗ್. ಆ ಫೈಂಡಿಂಗ್ ಬಂದ ಮೇಲೆ ಸರ್ಕಾರದ ಬೊಕ್ಕಸಕ್ಕೆ ಏನು ಹಣ ಬರಬೇಕೋ ಅದನ್ನು ವಸೂಲು ಮಾಡತಕ್ಕದ್ದರಲ್ಲಿ ಹಿಂದು ಮುಂದು ನೋಡುವುದಿಲ್ಲ. ಒಬ್ಬ ಅಧಿಕಾರಿ ತಪ್ಪು ಮಾಡಿದರೆ ಅವನು ಮಾಡಿದ್ದು ಸರಿ ಎಂದು ಹೇಳಲಿಲ್ಲ ಇವತ್ತು. ಕಾನೂನು ಪ್ರಕಾರ ಏನೇನು ಮಾಡಬೇಕೋ ಅದನ್ನು ಮಾಡುತ್ತಾ ಇದ್ದೇವೆ. ಎರಡನೆ ವಿಚಾರ ಏನೆಂದರೆ, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ವಯಲೇಷನ್ ಆಗಿದೆ ಎನ್ನುವ ಮಾತು ಇದೆ. ನಾನು ರಿಕಾರ್ಡ್ ನೋಡಿ ನನಗೆ ಗೊತ್ತಿದ್ದಂಥ ವಿಚಾರಗಳನ್ನು ಕಂದಾಯ ಇಲಾಖೆಗೆ ಸಂಬಂಧಪಟ್ಟಂಥ ವಿಚಾರಗಳನ್ನು ಇಲ್ಲಿ ವ್ಯಕ್ತ ಮಾಡುತ್ತೇನೆ. ಉಳಿದ ವಿಚಾರಗಳನ್ನು ಮಾನ್ಯ ಹೆಚ್.ಯು.ಡಿ. ಮಂತ್ರಿಗಳು ಹೇಳುತ್ತಾರೆ. ಮೊದಲನೆಯದಾಗಿ, ಈ ಜಮೀನನ್ನು ಮೊದಲು ಬಿ.ಡಿ.ಎ. ೧೯೪೮ರಲ್ಲಿ ಅಕ್ವೈರ್ ಮಾಡಿದ್ದು ನಿಜ. ಆಮೇಲೆ ೧೯೬೧ ರಲ್ಲಿ ಈ ಜಮೀನು ಬೇಡ ಎಂದು ನಾರಾಯಣಸ್ವಾಮಿ ಯವರಿಗೆ ರಿಕನ್ವೆ ಮಾಡಿದ್ದಾರೆ. ಒಂದು ಸಲ ಲ್ಯಾಂಡ್ ಅಕ್ವಿಸಿಷನ್ ಆಗಿ ರೀಕನ್ವೆ ಆದಮೇಲೆ it ceates to have the nature to agricltural land ಇದು ಕಾನೂನು ಇದೆ. ಒಂದು ಸಲ ಅಕ್ವಿಸಿಷನ್ ಆದದ್ದು ನಂತರ ಅಗ್ರಿಕಲ್ಚರಲ್ ಪರ್ಪಸ್‌ಗೆ ಆದಮೇಲೆ ಪುನಃ ಅದು ರೀಕನ್ವೆ ಮಾಡಿದಾಗ it becomes non-agriclture land ಒಂದು ಸಲ ಇದು ಸೇಲ್ಡ್ ಜಮೀನು ಅಲ್ಲ ಅಂದಮೇಲೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಆದಕ್ಕೆ ಅನ್ವಯ ವಾಗುವುದಿಲ್ಲ. There Is no violation ಕಾನೂನು ಬದ್ಧವಾಗಿದೆ. ಕಂದಾಯ ತೆಗೆದು ಕೊಳ್ಳುವಂಥ ವಿಚಾರ ಬೇರೆ. ಕಾನೂನು ಸ್ಪಷ್ಟವಾಗಿದೆ. ಅದನ್ನು ಹೇಳುತ್ತಾ ಇದ್ದೇನೆ. ಈ ವಿಚಾರದಲ್ಲಿ ಇದು ಅಗ್ರಿಕಲ್ಚರ್‌ಲ್ಯಾಂಡ್ ಎಂದು ಹೇಳಿ ನಿರ್ಣಯ ಆದರೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ೭೯ (ಎ) ಕೆಳಗೆ ನಾನು ಆಕ್ಷನ್ ತೆಗೆದುಕೊಳ್ಳುತ್ತೇನೆ. ಅದಕ್ಕೆ ನಾವು ಹಿಂದು ಮುಂದು ನೋಡುವುದಿಲ್ಲ. ಅದನ್ನು ಕಾನೂನು ಪ್ರಕಾರವಾಗಿ ಫರ್‌ಫಿಟ್ ಮಾಡಬೇಕಾದರೂ ಕೂಡ ಅದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಆ ಕಾನೂನಿನ ಒಂದು ಸಿಚುಯೇಷನ್ ಏನು ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಅರ್ಬನ್ ಸೀಲಿಂಗ್ ಎಕ್ಸ್‌ಲೇಷನ್ ಬಗ್ಗೆ ನಮ್ಮ ರಾಜ್ಯದಲ್ಲಿ ಹಿಂದೆ ಏನಿತ್ತು, ಬೇರೆ ಬೇರೆ ರಾಜ್ಯಗಳಲ್ಲಿ ಏನಾಗಿದೆ, ಹಿಂದೆ ಎಷ್ಟು ಎಕ್ಸಂಪ್ಷನ್ ಕೊಟ್ಟಿದ್ದಾರೆ ಎನ್ನುವುದನ್ನೆಲ್ಲಾ ನೋಡಬೇಕಾಗಿದೆ.

(ಗೊಂದಲ)

ನಮ್ಮಲ್ಲಿ ಈ ವಿಚಾರದಲ್ಲಿ ಈ ಕಂಪನಿ ಇದೆಯಲ್ಲ, ರೇವಜಿತ್ ಕಂಪನಿಯಲ್ಲಿ ಸುಮಾರು ೧೯ ಜನ ಪಾರ್ಟನರ್ಸ್ ಇದ್ದಾರೆ. ಈ ೧೯ ರಲ್ಲಿ ಸುಮಾರು ೧೭ ಜನ ನಮ್ಮ ಕರ್ನಾಟಕದವರೇ ಇದ್ದಾರೆ. ಬೆಂಗಳೂರಿನವರೇ ಇದ್ದಾರೆ. ಇದನ್ನು ಏತಕ್ಕೆ ತಿಳಿದುಕೊಳ್ಳಬೇಕೆಂದರೆ ೧೯ ಜನ ಪಾರ್ಟನರ್ಸ್‌ನಲ್ಲಿ ಶೋಭಾ ಪಾಟೀಲ ಎಂಬುವರು ಒಬ್ಬರು ಇದ್ದಾರೆ. ಮಾನ್ಯ ಬಂಗಾರಪ್ಪನವರಲ್ಲಿ ನಾನು ಹೇಳ ಬಯಸುತ್ತೇನೆ. ನಮ್ಮಲ್ಲೂ ಕೆಲವರು ಶ್ರೀಮಂತರೂ ಇದ್ದಾರೆ. ನಮ್ಮಲ್ಲೂ ಕೆಲವರು ಶ್ರೀಮಂತರು ಇದ್ದಾರೆ. ಅವರದು ಮರ್ಯಾದೆ ಪ್ರಶ್ನೆಯಿರುತ್ತದೆ. ಯಾವುದೇ ಒಂದು ಆಸ್ತಿಯನ್ನು ಖರೀದಿ ಮಾಡತಕ್ಕಂಥ ವಿಚಾರ ಇರಬಹುದು, ಅಥವಾ ಇಂಡಸ್ಟ್ರೀಸ್ ಪ್ರಾರಂಭ ಮಾಡುವ ಮಾಡುವ ವಿಚಾರ ಇರಬಹುದು. ಅದಕ್ಕೆ ಅವರಿಗೆ ಸ್ವಾತಂತ್ರ್ಯ ಇರುತ್ತದೆ. ನಮ್ಮ ಸಂಬಂಧ ಇದ್ದಾಕ್ಷಣಕ್ಕೆ ಅವರು ಕಾನೂನು ಪ್ರಕಾರ ವ್ಯವಹಾರ ನಡೆಸಲಿಕ್ಕೆ ಅಡ್ಡ ಬರಬಾರದು. There is no prohibihion that a relative fo a politician should nct carry on with his legitimate actlvity. ಇದು ನಾವು ಯಾವುದೇ ಒಂದು ಹೆಸರಿದೆ, ಸಂಬಂಧವಿದೆ ಅಂದ ಮಾತ್ರಕ್ಕೆ ಕಲ್ಪನಾರೀತಿಯಲ್ಲಿ ಹೋಗಬಾರದು. We should nct drag it to the logical end. It will be dengerous for any an in public life. ಇವತ್ತು ನೀವೆ ಇರಬಹುದು. ನಾವೇ ಇರಬಹುದು. ಅದೇ ಅಮಿತಾಬಚ್ಚನ್ ಇರಬಹುದು.

ಶ್ರೀ ಆರ್. ವೆಂಕಟರಾಮಯ್ಯ.— ಸ್ಪಷ್ಟವಾಗಿದೆ. ಇಲ್ಲವೆಂದು ಹೇಳಿಬಿಟ್ಟರೆ ಆಯಿತು. ಅನುಮಾನವಿರುತ್ತದೆ. ಅದಕ್ಕೆ ಏತಕ್ಕೆ ಅವಕಾಶ ಕೊಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ತಮಗೆ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ. ಇದರಲ್ಲಿ ಯಾವುದೇ ರಾಜಕೀಯ ಒತ್ತಡವಿಲ್ಲ. ಇದರಲ್ಲಿ ಯಾವುದೇ ರಾಜಕೀಯ ಒತ್ತಡ ಅಥವಾ ವರ್ಚಸ್ಸು ಇಲ್ಲ ಹಿತಾಸಕ್ತಿ ಇಲ್ಲ ಮತ್ತು ಊಹಾಪೋಹಗಳಿಗೆ ತಾವು ಇದನ್ನು ಉದ್ದ ಬೆಳೆಸಿಕೊಂಡು ಹೋಗಿ ನಾನು ವಿವರಕ್ಕೆ ಹೋಗುವುದಿಲ್ಲ. ಎಲ್ಲಾ ಸಮಯದಲ್ಲೂ ಫೈಲುಗಳು ಸ್ಪೀಡಾಗಿಯೇ ಓಡಾಡುತ್ತವೆ. ಕೆಲವು ಸಂದರ್ಭಗಳಲ್ಲಿ ನಿಧಾನವೂ ಆಗುತ್ತದೆ. It depends upon so many factors. ಮೊನ್ನೆ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಒಬ್ಬ ಡಾಕ್ಟರ ವಿಚಾರದಲ್ಲಿ ಹೇಳಿದರು. ಎಲ್ಲಾ ನನಗೆ ಗೊತ್ತಿದೆ. ಮೂರೇ ತಿಂಗಳಲ್ಲಿ ಪರ್ಮಿಷನ್ ಕೊಡಿಸಿದ್ದಾರೆ, Permission has been granted. ಚೀಫ್‌ಮಿನಿಸ್ಟರ್ ಸ್ವತಃ ಫೈಲನ್ನು ತರಿಸಿಕೊಂಡು ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ. ಆ ರೀತಿ ಕೆಲವು ಸಲ ಆಗುತ್ತದೆ. ಆ ವಿಚಾರ ಇಲ್ಲಿ ಹೇಳಬೇಕಾಗುತ್ತದೆ.

Sri K. H. Srinivas.—I said it is not a vary routine thing ಜೆನ್ಯೂಯಿನ್ ಕೇಸಿನಲ್ಲಿ ಕೊಟ್ಟಿರಬಹುದು. ಕೊಟ್ಟಿಲ್ಲವೆಂದು ನಾನು ಹೇಳುತ್ತಿಲ್ಲ. ಈ ವಿಚಾರದಲ್ಲಿ ಅಧಿಕಾರಿಗಳು ಸಾಕಷ್ಟು ತಕರಾರು ಮಾಡಿದ್ದಾರೆಯೇ ಹೊರತು ಅಷ್ಟು ಸುಲಭವಾಗಿ ಅಗ್ರಿ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ಒಪ್ಪುತ್ತೇನೆ ಆ ವಿಚಾರದಲ್ಲಿ ಮೂಲಭೂತವಾಗಿ ಒಂದು ಸಮಸ್ಯೆ ವಿಚಾರಣೆಯಾಗಬೇಕಾಗಿದೆ. ವಿಚಾರಣೆಯಾಗತಕ್ಕಂಥ ಸಂಧರ್ಭದಲ್ಲಿ........

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಒಬ್ಬ ಗಂಡಸತ್ತಿರುವ ಹುಡುಗಿಗೆ ಚೀಫ್ ಮಿನಿಷ್ಟರ್ ಹೇಳಿದರೂ ಆಗುವುದಿಲ್ಲ. ಎರಡೂವರೆ ವರ್ಷಗಳಾಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.— ಆಗುತ್ತಮ್ಮ, ನಾನು ಇಲ್ಲವೆಂದು ಹೇಳುವುದಿಲ್ಲ. ಎರಡನೇ ವಿಚಾರಣೆ ಮಾಡತಕ್ಕಂಥ ಅಂಶಗಳೇ ಇಲ್ಲ. ಅದು ಏನೇ ಆಗಿರಲಿ ಇದು ವಿಚಾರಣೆಯಾಗಬೇಕು. ಈ ವಿಚಾರ ಹೈಕೋರ್ಟಿನಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸಚಿವರು ಅರ್ಬನ್ ಸೀಲಿಂಗ್ ವಿಚಾರ ಹೇಳಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರ ಹೈಕೋರ್ಟ್ ಮುಂದೆ ಇದೆ. ಇವೊತ್ತು ಅವರು ಡಿಟೇಲ್ ಹೇಳುತ್ತಿದ್ದಾರೆ ಅದಕ್ಕೆ ನಾನು ಏನು ಹೆಚ್ಚು ಹೇಳಲಿಲ್ಲ.

ಅಂಡರ್ ವ್ಯಾಲ್ಯುಯೇಷನ್ ಸಮಿತಿ ವಿಚಾರಣೆ ಫೈಂಡಿಂಗ್ ಕೊಟ್ಟಾಗ ನಮ್ಮ ರಾಜ್ಯದ ಅಧಿಕಾರಿಗಳ ಮೇಲೆ ನಾವು ಅನುಮಾನ ಮಾಡತಕ್ಕದ್ದು ಸರಿಯೇ, ಎಂದು ನಾನು ಕೇಳುತ್ತಿದ್ದೇನೆ. ಲ್ಯಾಂಡ್ ರಿಫಾರಮ್ಸ್ ಕೆಳಗೆ ಸುಮಾರು ನಾಲ್ಕು ಸಾವಿರ ಕೇಸುಗಳನ್ನು ಡಿಟೆಕ್ಟ್ ಮಾಡಿದ್ದೇವೆ. ಅತಿರಥ ಮಹಾರಥರು ಇದ್ದಾರೆ. ಸರ್ಕಾರ ಆ ಬಗ್ಗೆ ಯಾವುದೇ ರೀತಿಯಿಂದ ಅನುಕಂಪ ತೋರಿಸಿಲ್ಲ. ನಮ್ಮಲ್ಲಿ ನಿಷ್ಪಕ್ಷಪಾತವಂತ ಅಧಿಕಾರಿಗಳು ಇದ್ದಾರೆ ನಾನು ಅಧಿಕಾರಕ್ಕೆ ಬರುವುದಕ್ಕೆ ಮೊದಲು ಒಂದೂ ವಿಚಾರಣೆ ಇರಲಿಲ್ಲ ನಾನು ಬಂದಮೇಲೆ ಅನಂತರ ಹುಡುಕಿ ತೆಗೆಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರೋಸ್ಟ್ ಎಲ್ಲಾ ನಮ್ಮ ಕಾಲದಲ್ಲಿಯೇ ಕ್ರಿಯೇಟ್ ಆಗಿದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಮಾತು ಬೇರೆ ನಮ್ಮ ಸಿ. ಓ. ಡಿ. ಸರಿ ಇಲ್ಲ, ನಮ್ಮ ಪೋಲೀಸ್ ಸರಿ ಇಲ್ಲ, ನಮ್ಮ ರೆವಿನ್ಯೂ ಅಧಿಕಾರಿಗಳು ಸರಿ ಇಲ್ಲ. ಎಲ್ಲರೂ ಸರಿ ಇಲ್ಲ ಎಂದು ಹೇಳಿದರೆ ಸರ್ಕಾರ ನಡೆಸುವ ಆವಶ್ಯಕತೆ ಇಲ್ಲ, ಇದು ತಮಗೆ ಇರತಕ್ಕಂಥ ಭ್ರಮೆ. ಇವೊತ್ತು ಲೋಕಾಯುಕ್ತದ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ತಮಗೆ ನಂಬಿಕೆ ಇರಲಿಕ್ಕಿಲ್ಲ. ಒಬ್ಬ ರಿಟೈರ್ಡ್ ಸುಪ್ರೀಮ್‌ಕೋರ್ಟ್ ಜಡ್ಜ್‌ನ ಅಧ್ಯಕ್ಷತೆಯಲ್ಲಿ ವಿಚಾರಣೆ ನಡೆಯುವುದು ನಿಮಗೆ ಬೇಡ, ಸಿ. ಬಿ. ಐ. ಸೆಂಟ್ರಲ್ ಪೋಲೀಸ್ ಬಗ್ಗೆ ಹೆಚ್ಚು ಹೇಳುತ್ತೀರಿ ಇದು ಆಶ್ಚರ್ಯ ಮಾನ್ಯ ಶ್ರೀನಿವಾಸ್ ಅವರು ಮಾತನಾಡುತ್ತಿದ್ದರು ......Under law a retired Supreme Court Judge has been appointed as the Loayuktha with all the powers. You have no faith.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ರಾಜ್ಯದಲ್ಲಿ ಲೋಕಾಯುಕ್ತ ಎನ್ನುವುದು ಒಂದು ಬಹಳ ಇಂಪಾರ್ಷಿಯಲ್ ವ್ಯವಸ್ಥೆ ಇದೆ ಎನ್ನುವ ಇಂಪ್ರೆಷನ್ ಬಂದಿದೆಯೇ ? ಈ ತಾರೀಖಿನವರೆಗೆ ಬಂದಿಲ್ಲ ನಾನು ಪರ್ಸನಲ್ ಆಗಿ ಡಿಸ್‌ಪ್ಯೂಟ್ ಮಾಡಲಿಲ್ಲ ಅವಿಶ್ವಾಸ ವ್ಯಕ್ತಪಡಿಸಲಿಲ್ಲ ನನಗೆ ವಿಶ್ವಾಸ ಮೂಡಿಲ್ಲ ಎಂದು ಮಾತ್ರ ಹೇಳಿದ್ದೇನೆ.

SRI S. R. BOMMAI.—It is a very unfortunate situation. ರಾಜಕೀಯವಾಗಿ ಇದನ್ನು ಬಳಸಿಕೊಳ್ಳತಕ್ಕದ್ದು ನೋಡತಕ್ಕದ್ದು ಸರಿಯಲ್ಲ. ಸಿ.ಬಿ.ಐ. ಬಗ್ಗೆ ಹೇಳುತ್ತೀರಿ ಅನೇಕ ಉದಾಹರಣೆಗಳನ್ನು ಕೊಡಬಹುದು Motivated investigation, vindictive investigation. ಎಂದು ಯಾರು ನಿರ್ದೋಷಿಗಳು ಅವರನ್ನು ಸಿಕ್ಕಿಸುವುದು ದೋಷಿಗಳನ್ನು ಬಿಟ್ಟಿರತಕ್ಕದ್ದು ಈ ರೀತಿಯ ಅನೇಕ ಉದಾಹರಣೆಗಳು ಇದೆ. How do you suggest it to a non-Cong-ress (I) Government ? ಇವೊತ್ತು ಸೆಂಟ್ರಲ್ ಗವರ್ನಮೆಂಟಿನಲ್ಲಿರತಕ್ಕ ಕಾಂಗ್ರೆಸ್ ಗವರ್ನಮೆಂಟ್‌ನಲ್ಲಿ ಪೋಲೀಸ್ ವಿಂಗ್ ಏನಿದೆ ಅದರ ಮುಖಾಂತರ ವಿಚಾರಣೆ ಮಾಡಿಸಿ ಎಂದು ಹೇಳುವುದು ಸರಿಯೇ? ಈಗ ಹೈಕೋರ್ಟ್ ಮುಂದೆ ಇದೆ. Let the High Court gives it verdict. ತಮಗೆ ಬೇಕಾದರೆ ಲೋಕಾಯುಕ್ತ ಇದೆ, ಅಲ್ಲಿ ಮಾಡಿಕೊಳ್ಳಿ, ಹೈಕೋರ್ಟ್ ನಿರ್ಣಯ ಬರುವವರೆಗೆ ವೈಟ್ ಮಾಡೋಣ ಅಲ್ಲಿ ನಿರ್ಣಯ ಏನಾದರೂ ತಪ್ಪು ಇದೆ, ಇಂತಹವರು ತಪ್ಪು ಮಾಡಿದ್ದಾರೆಂದು ಹೇಳಿದರೆ, Let the High Court gives its proncuncement. We will obey it in toto. ಇದಕ್ಕಿಂತಲೂ ಹೆಚ್ಚು ಹೇಳತಕ್ಕದ್ದು ಆವಶ್ಯಕತೆ ಇಲ್ಲ.

ಶ್ರೀ ಧರ್ಮಸಿಂಗ್.—ತಾ. ೩೦–೯–೧೯೮೭ ರಂದು ರಿಜಿಸ್ಟರ್ ಮಾಡಿದ್ದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ದಿನಾಂಕ. ೩೦–೯–೧೯೮೭ರ ದಿವಸ ಅನೇಕ ಪತ್ರಗಳು ರಿಜಿಸ್ಟರ್ ಆಗಿವೆ ದೇಶದ ತುಂಬಾ ಆಗಿದೆ. ಲಾಸ್ಟ್ ಡೇಟ್ ಇದ್ದಾಗ ಎಲ್ಲರೂ ಲಾಭವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ದೇಶದ ತುಂಬಾ ಆಗಿವೆ. ಎಲ್ಲಾ ದೊಡ್ಡ ದೊಡ್ಡ ನಗರಗಳಲ್ಲೂ ಆಗಿವೆ. ಅವರು ಬುದ್ಧಿವಂತರು ಇರುತ್ತಾರೆ. ಕಾನೂನು ಕಡೇ ದಿವಸ ಎಂದು ಅನೇಕ ಪತ್ರಗಳು ರಿಜಿಸ್ಟರ್ ಆಗಿವೆ. ಲಾಸ್ಟ್ ಡೇಟ್‌ನಲ್ಲಿ ರಿಜಿಸ್ಟರ್ ಆಗಿದ್ದು ಇಲ್ಲೀಗಲ್ ಅಲ್ಲ. You con't prohibit a man to registet on the last date.

೭-೩೧ ಪಿ.ಎಂ.

†ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ಈಗ ಸದರಿ ಜಾಗ ನಗರ ಪ್ರದೇಶ ಎನ್ನತಕ್ಕ ಮಾತನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. ಅದು ಕೃಷಿ ಜಮೀನಲ್ಲ. ಅದು ನಗರ ಜಮೀನು ಅರ್ಬನ್ ಲ್ಯಾಂಡ್ ಎಂಬುದನ್ನು ಅವರು ಸಾಬೀತುಮಾಡಿ ಕೊಟ್ಟಿದ್ದಾರೆ. ಅದು ಅರ್ಬನ್ ಲ್ಯಾಂಡ್ ಆದಮೇಲೆ ಅದರ ಭೂಮಿತಿ ಕಾಯಿದೆಗೆ ಅನುಸಾರವಾಗಿ ಇವತ್ತು ಈ ಪ್ರಕರಣ ಏಲೇ ಆಗಿದೆಯೋ? ಹೇಗೆ? ಎಂಬುದನ್ನು ಪರಿಶೀಲಿಸಬೇಕಾಗಿದೆ. ಈಗಾಗಲೇ ಪ್ರಸ್ತಾಪ ಮಾಡಿರುವಂತೆ ನಾರಾಯಣಸ್ವಾಮಿ ಅಂಡ್ ಸನ್ಸ್‌ನವರು ೧೯೮೫ರಲ್ಲಿ ೧೬.೧೯೪ ಚದರ ಮೀಟರ್ ಜಮೀನನ್ನು ತಮಗೆ ಕೈಗಾರಿಕಾ ಉದ್ದೇಶಕ್ಕೋಸ್ಕರ ಬೇಕೆಂದು ಅದಕ್ಕೆ ಸರ್ಕಾರದಿಂದ ವಿನಾಯಿತಿಯನ್ನು ಕೇಳಿ ಅನುಮತಿಯನ್ನು ಕೋರಿದ್ದಾರೆ. ೧೯೭೨ರ ಬೆಂಗಳೂರು ಓ. ಡಿ. ಪಿ. ಪ್ರಕಾರ ಈ ಪ್ರದೇಶ ಲೈಟ್ ಇಂಡಸ್ಟ್ರೀಸ್ ಅಂಡ್ ಪಾರ್ಕ್‌ಗೆ ಎಂದು ಇದೆ. ಇದರ ಪ್ರಕಾರ ನಾವು ೧೯೮೪ ಡಿಸೆಂಬರ್ ಕೊನೆಯಲ್ಲಿ ಓ. ಡಿ. ಪಿ. ಯನ್ನು ಸಿ. ಡಿ. ಪಿ. ಆಗಿ ಅಂದರೆ ಕಾಂಪ್ರಹೆನ್ಸಿವ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಅಂದರೆವ್ಯಾಪಕ ಅಭಿವೃದ್ಧಿ ಯೋಜನೆ ಎಂದು ಮಾಡಿ ಅನುಮತಿಯನ್ನು ಕೊಟ್ಟೆವು. ಆಗ ಇದು ಕೈಗಾರಿಕಾ ವಲಯದಿಂದ ವಸತಿ ವಲಯವಾಗಿ ಪರಿವರ್ತನೆಯಾಯಿತು. ಅಂದರೆ ರೆಸಿಡೆನ್‌ಷಿಯಲ್ ಏರಿಯ ಎಂದು ಆಯಿತು. ೧೯೮೫ರ ಜುಲೈನಲ್ಲಿ ಈ ಪ್ರಕರಣ ಫೈಲ್ ಆಗುವಾಗ ಇದು (ಸಿ. ಡಿ. ಪಿ.) ಇನ್ನೂ ರೂಢಿಗೆ (ಜಾರಿಗೆ) ಬಂದಿರಲಿಲ್ಲ, ಆದ್ದರಿಂದ ಜಿಲ್ಲಾಧಿಕಾರಿಗಳು ಅರ್ಬನ್ ಲ್ಯಾಂಡ್ ಸೀಲಿಂಗ್ ಇದ್ದರೆ ಅವರೇ ಹೊಸ ಸಿ. ಡಿ. ಪಿ. ಯ ಉದ್ದೇಶವನ್ನು ಅನುಸರಿಸಿ ಮಾಡಿದ್ದರು. ಇದು ಕೈಗಾರಿಕಾ ವಲಯದಿಂದ ಕನ್‌ವರ್ಟ್ ಆಗಿ ವಸತಿ ವಲಯವಾಗಿ ಪರಿವರ್ತನೆಯಾಗಿದೆ ಎಂದು ಅವರು ಪರಿಗಣನೆಗೆ ತೆಗೆದುಕೊಂಡಿರಲಿಲ್ಲ. ಇವರು ಕೈಗಾರಿಕೆಗೋಸ್ಕರ ಎಂದು ಕೇಳಿದ್ದರಿಂದ ಇದಕ್ಕೆ ಸೆಕ್ಷನ್ ೨೧(ಎ) ಪ್ರಕಾರ ಪಬ್ಲಿಕ್ ಇಂಟರೆಸ್ಟ್ ಮೇಲೆ ಕೊಡಬಹುದು. ಓ. ಡಿ. ಪಿ ಇದು ಕೈಗಾರಿಕಾ ವಲಯವಾಗಿದ್ದುದರಿಂದ ಇದಕ್ಕೆ ಅವರು ವಿನಾಯಿತಿಯನ್ನು ಕೊಟ್ಟರು. ತದನಂತರ ಇದು ಏನಾಗಿದೆ ಎಂದರೆ ವಿನಾಯಿತಿಯನ್ನು ಕೊಡುವಾಗ ಸುಮಾರು ೧೯,೬೩೮ ಚದರ ಮೀಟರ್‌ನಷ್ಟು ಹೆಚ್ಚುವರಿ ಜಮೀನಿದ್ದರೆ ಅದರಲ್ಲಿ ೧೬.೧೯೪ ಚದರ ಮೀಟರ್ ಜಮೀನಿಗೆ ವಿನಾಯಿತಿಯನ್ನು ಕೇಳಿದ್ದಾರೆ. ಅದರ ಪ್ರಕಾರ ಇವರು ಕೊಟ್ಟರು. ೧೯೮೭ರ ಜನವರಿಯಲ್ಲಿ ವಿನಃ ಕೈಗಾರಿಕೆಗಾಗಿ ಪರ್ಮಿಷನ್‌ಗೆ ಹಾಕಿದ್ದರು ಅದು ಈಗ ತಮಗೆ ಸಾಧ್ಯವಿಲ್ಲವೆಂದು ತಿಳಿಸಿದರು. ಇದೂ ಅಲ್ಲದೆ ನಾರಾಯಣಸ್ವಾಮಿ ಅಂಡ್ ಸನ್ಸ್‌ರವರ ವಹಿವಾಟು ಕೇವಲ ಬೆಂಗಳೂರಿನಲ್ಲೇ ಅಲ್ಲದೆ ಮದ್ರಾಸ್‌ನ ವುಡ್‌ಲ್ಯಾಂಡ್ಸ್‌ನಲ್ಲೂ ಪಾರ್ಟನರ್ಸ್ ಆಗಿದ್ದರು. ನಂತರ ಅವರ ಒಟ್ಟು ವಹಿವಾಟಿನಲ್ಲಿ ತಮಗೆ ನಷ್ಟವಾಗಿವೆ ತಾವೇನೋ ಜಮೀನನ್ನು ನಮಗೆ ಕೊಟ್ಟಿರಿ (ಕೈಗಾರಿಕೆಗಾಗಿ) ಆದರೆ ಅದನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಆಗಲಿಲ್ಲ. ನಮಗಿರತಕ್ಕ ಈ ಸಂಕಷ್ಟವನ್ನು ಪರಿಹಾರ ಮಾಡಿಕೊಳ್ಳುವ ಸದರೀ ಜಮೀನನ್ನು ಮಾರಲು ತಮಗೆ ಅನುಮತಿಯನ್ನು ಕೊಡಬೇಕೆಂದು ಅವರು ಕೇಳಿದಾಗ ಸರ್ಕಾರ ಅದನ್ನು ಪರಿಶೀಲಿಸಲಿಕ್ಕೆ ಸೆಕ್ಷನ್ ೨೦(೧) (ಬಿ) ನಲ್ಲಿ ಅವಕಾಶ ಇದೆ. ಇದು ಒಂದು ಕಾರಣ. ಅವರ ಸಂಕಷ್ಟ ೭೫ ಸಾವಿರ ರೂ. ಇರಬಹುದು, ೪ ಲಕ್ಷ ಇರಬಹುದು, ಅಥವಾ ಒಂದು ಕೋಟಿ ಇರಬಹುದು. ಇದನ್ನು ಪರಿಗಣಿಸುವ ಉದ್ದೇಶದಿಂದ ನಾರಾಯಣಸ್ವಾಮಿ ಅಂಡ್ ಸನ್ಸ್‌ಗೆ ದೇನಾ ಬ್ಯಾಂಕ್ ಒಂದೇ ಅಲ್ಲದೆ ಮದ್ರಾಸಿನ ವಹಿವಾಟಿನ ಸಾಲಸೋಲ, ಇನ್‌ಕಂ ಟ್ಯಾಕ್ಸ್ ಎಲ್ಲಾ ಸೇರಿ ಸುಮಾರು ೨೧೩ ಲಕ್ಷ ರೂಪಾಯಿ ಸಂಕಷ್ಟವಿದೆಯೆಂದು ಛಾರ್ಟರ್ಡ್ ಅಕೌಂಟೆಂಟ್ ಒಬ್ಬರು ಸರ್ಟಿಫಿಕೇಟ್ ಕೊಟ್ಟಿರತಕ್ಕ ಪ್ರಕಾರ ಕಾಯಿದೆಯಲ್ಲಿ ಇದಕ್ಕೆ ಅವಕಾಶವಿದೆ. ಅವರ ಸಂಕಷ್ಟ ನಿವಾರಣೆಗೆ ಇದು ಬೇಕಾಗಿರಲಿಲ್ಲ. ಏಕೆಂದರೆ ಈಗಾಗಲೇ ನಾವು ಒಂದುಸಾರಿ ಕೈಗಾರಿಕೆಗೆ ವಿನಾಯಿತಿಯನ್ನು ಕೊಟ್ಟಿದ್ದೆವು. ಅಲ್ಲಿ ಒಂದು ಕಂಡಿಷನ್ ಏನೆಂದರೆ ಇಂಥಿಂಥ ಜಮೀನನ್ನು ಇಂಥಿಂಥ ಉದ್ದೇಶಕ್ಕೇ ಉಪಯೋಗಮಾಡಿಕೊಳ್ಳಬೇಕೆಂದು ಇರುವಾಗ ಅವರು ಅಂಥಾದ್ದಕ್ಕೆ ಅಂಥ ಸಂದರ್ಭದಲ್ಲಿ ಸರ್ಕಾರವನ್ನು ಅನುಮತಿಗಾಗಿ ಕೇಳಬಹುದು, ಅದನ್ನು ಮಾರಾಟಮಾಡುವುದಕ್ಕಾಗಲಿ ಅಥವಾ ತಿಳಿಸಿರುವ ಉದ್ದೇಶಕ್ಕಾಗಿ ಎಂದು ಇದ್ದರೆ ಆಗ ಸರ್ಕಾರಕ್ಕೆ ಅನುಮತಿಗಾಗಿ ಕೇಳಬಹುದೆಂದು ೧೯೮೫ರ ಸರ್ಕಾರೀ ಆಜ್ಞೆಯಲ್ಲಿದೆ. ಅದರ ಪ್ರಕಾರವಾಗಿ ಅವರ ಒಂದು ಆ ಜಮೀನನ್ನು ಕೈಗಾರಿಕೆಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ನಮ್ಮ ಸಂಕಷ್ಟ ಹೀಗಿದೆ ಎಂದು ಹೇಳಿಕೊಂಡು ಅದಕ್ಕೋಸ್ಕರವಾಗಿ ಅನುಮತಿ ಕೇಳಿದರು. ಸರ್ಕಾರದವರು ಅದೇಪ್ರಕಾರ ನಮ್ಮ ಉದ್ದೇಶದಂತೆ ಅದನ್ನು ಸಾಮೂಹಿಕ ಗೃಹಗಳಿಗೆ ಕೊಡುವುದಕ್ಕೋಸ್ಕರ ತಮಗೆ ಅವಕಾಶ ಮಾಡುತ್ತೇವೆಯೇ ಹೊರತಾಗಿ ಬೇರೆ ಯಾವುದೇ ಒಂದು ವಿನಾಯಿತಿ ಕೊಟ್ಟಮೇಲೆ ನಿವೇಶನವನ್ನು ಮಾಡಿ ಹಂಚಿಕೊಳ್ಳುವುದಕ್ಕಲ್ಲವೆಂದು ಕೊಟ್ಟಿದ್ದೇವೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾನು ಮಾತನಾಡುವಾಗ ಡಿಮ್ಯಾಂಡ್‌ನಲ್ಲಿ ಹೇಳಿದ್ದೇನೆ. ಮೇಲ್‌ಮನೆಯಲ್ಲಿ ಪ್ರಸ್ತಾಪ ಮಾಡುವಾಗ ಬಂದಿದೆ. ಕೇಂದ್ರ ಸರ್ಕಾರದ ಒಂದು ಸೂಚನೆ ೧೧–೮–೧೯೮೦ರಲ್ಲಿ ಬಂದುದ್ದು. ಅದರಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಪಬ್ಲಿಕ್ ಇಂಟರೆಸ್ಟ್‌ಗೆ ಕೊಡ ಬೇಕಾಗಿರುವಾಗ ಗ್ರೂಪ್ ಹೌಸಿಂಗ್‌ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಇದೆ. ಅದರಪ್ರಕಾರವಾಗಿ "It howver has no objection to the Government of Andra Pradesh granting exemption under section 20 of the Act to the Surplus land-holder himself for utilising the excess vacant land for the construction of group-housing subject to the following conditious:

1) The Plan for group-housing should be in accordance with the Master Plan.

2) The plinth area of each dwelling unit in the building should not exceed 300 Sq. Meters." ಅಂದರೆ ಸುಮಾರು ೩೫ ಚದರ ಇರಬೇಕು ಒಂದೊಂದು ಯೂನಿಟ್ಟಿಗೆ ಬೇಕಾದರೆ ಅದಕ್ಕೆ ಕೊಡಬಹುದು ಮತ್ತೆ ಆ ಒಂದು ಗ್ರೂಫ್‌ಹೌಸಿಂಗ್‌ನಲ್ಲಿ" not more than one dwelling unit in the group-housing should be owned by a person." ಈ ಕಂಡೀಷನ್ ಮೇಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಕೇಳುವುದೇನೆಂದರೆ ನೇರವಾಗಿ ಒಂದು ಪ್ರಶ್ನೆ ೧೯ನೇ ತಾರೀಖು ತಾವು ಎಕ್ಸೆಂಪ್ಷನ್ ಕೊಟ್ಟಿದ್ದೀರಿ. ಆದರೆ ರಿಜಿಸ್ಟರ್ ಮಾಡಿ ಕೊಂಡದ್ದು ೨೨ಕ್ಕೆ. ರಿಜಿಸ್ಟ್ರೇಷನ್ ಆಗತಕ್ಕಂಥದ್ದು ಇರಲಿಲ್ಲ ಅದು ಹೇಗೆಆಯಿತು ? ಅದನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ಚಂದ್ರಶೇಖರ್. – ರಿಜಿಸ್ಟರ್ ಆಗಿದ್ದು ೩೦–೧–೮೭ರಲ್ಲಿ. ಅದುವರೆಗೆ ನಾನು ಬಂದೇ ಇರಲಿಲ್ಲ ಇನ್ನೂ ಜನವರಿಯಲ್ಲಿಯೇ ಇದ್ದೇನೆ. ತಾವು ಕೊನೆಯಲ್ಲಿ ಕ್ಲಾರಿಫಿಕೇಷನ್ ಕೇಳಿ

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಗ್ರೂಫ್ ಹೌಸಿಂಗ್‌ಗೆ ಎನ್‌ಕರೇಜ್ ಕೊಡಬೇಕೆಂದು ಎಲ್ಲಿ ಕೊಡಲಾಗಿದೆ ? ಅದರಲ್ಲಿ ಇರುವುದನ್ನೆಲ್ಲಾ ಪೂರ ಓದಿ.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ, ನಿಮಗೆ ಉತ್ತರ ಬೇಡವೇ ?

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ನಾನು ಮೂರನೆಯದನ್ನು ಹೇಳಿದನಲ್ಲಾ. "not more than one dwelling unit in the group-housing should be owned by a person. The Scheme should be completed within two years. The land which has been exempted should not be transferred by way of sale, gift etc., without the permission of the State Government. If at any time, the State Government is not satisfied the State Government may take appropriate action.' ನಾನು ಹೇಳುವುದೇನೆಂದರೆ ಅವನ ಸಂಕಷ್ಟ ತಾವು ಹೇಳಿದಹಾಗೆ 65 ಸಾವಿರ ಇರಬಹುದು, 68 ಲಕ್ಷ ಇರಬಹುದು, ಒಂದೂವರೆ ಕೋಟಿ ಇರಬಹುದು. ಅವನು ಡಿಕ್ಲೇರ್ ಮಾಡಿಕೊಂಡ ಹಾಗೆ 215 ಲಕ್ಷ ಇರಬಹುದು. ಸೆಕ್ಷನ್ 21(ಬಿ) ಪ್ರಕಾರವಾಗಿ ಕೊಡುವುದಕ್ಕೆ ಅವಕಾಶವಿದೆ. ಅದಲ್ಲದೆ ಗ್ರೂಫ್ ಹೌಸಿಂಗ್ ಎನ್‌ಕರೇಜ್‌ಮೆಂಟ್ ಕೊಡಬೇಕು ಎನ್ನುವ ಬಗ್ಗೆ ಕೇಂದ್ರ ಸರ್ಕಾರದ ಕಾಯಿದೆ ಇರುವುದರಿಂದ 21(ಎ) ಪ್ರಕಾರವಾಗಿ ಕೊಟ್ಟು ನಾವು ಪರಿಗಣನೆಗೆ ಮಾಡಬೇಕು. ಅದನ್ನು ಸರ್ಕಾರ ಮಾಡಿದೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಯಾರಿಗೆ ಗ್ರೂಫ್ ಹೌಸಿಂಗ್ ಕೊಟ್ಟಿರುವುದು ? ನಾರಾಯಣಸ್ವಾಮಿಗೆ ಕೊಟ್ಟಿದ್ದೀರಾ ? You have to see the owner of the land.

ಶ್ರೀ ಎಂ. ಚಂದ್ರಶೇಖರ್.—ಯಾರಿಗಾದರೂ ಆಗಬಹುದು. It is not necessary. He says he cannot retain it, he wants to sell it to redeem his debts.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾರಾಯಣಸ್ವಾಮಿ ಪರವಾಗಿ ಅರ್ಜಿ ಕೊಟ್ಟ ಮೇಲೆ ನೀವು 25-2-87ರಂದು ಸರ್ಕ್ಯುಲರನ್ನು ಇಷ್ಯೂ ಮಾಡಿದಿರಿ.

ಶ್ರೀ ಎಂ. ಚಂದ್ರಶೇಖರ್.—ಆ ಸರ್ಕ್ಯುಲರ್ ಕಾಪಿ ಇದೆ. ಗ್ರೂಪ್ ಹೌಸಿಂಗ್ ಸ್ಕೀಂ ಎಂದು ನೋಡಿಯೇ ಕೊಟ್ಟಿರುತ್ತೇವೆ. ಕೇಂದ್ರ ಸರ್ಕಾರದವರು ಆಂಧ್ರ ಸರ್ಕಾರಕ್ಕೆ ಮತ್ತಿತರ ಎಲ್ಲಾ ರಾಜ್ಯಗಳಿಗೆ 1980ರಲ್ಲಿ ಒಂದು ಸರ್ಕ್ಯುಲರ್ ಕಾಪಿ ಕಳುಹಿಸಿದ್ದಾರೆ.

ಶ್ರೀಮತಿ ನಾಗರತ್ನಮ್ಮ.—ಸಾಲ ತೀರಿಸಿಕೊಳ್ಳುವುದಕ್ಕೆ...

(ಗೊಂದಲ)

ಅಧ್ಯಕ್ಷರು.—ಉತ್ತರ ಹೇಳಲಿ, ದಯವಿಟ್ಟು ಕುಳಿತುಕೊಂಡು ಸಮಾಧಾನದಿಂದ ಕೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಉತ್ತರ ಹೇಳುತ್ತಿಲ್ಲ, ಹೇಳಿದ್ದೇ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಏಕೆ ಇಂಟರ್‌ಫಿಯರ್ ಆಗುತ್ತೀರಿ ?

ಶ್ರೀ ಧರ್ಮಸಿಂಗ್.—ಸೆಕ್ಷನ್ 20(1ಬಿ) ಕೆಳಗೆ ಎಕ್ಸ್‌ಂಪ್ಷನ್ ಕೊಡುವುದಕ್ಕೆ ಸರ್ಕಾರಕ್ಕೆ ಪವರ್ಸ್ ಇದೆ. ಅದು ಯಾವಾಗ ಅಂದರೆ ಭೂ ಮಾಲೀಕರಿಗೆ ಹಾರ್ಡ್‌ಷಿಪ್ ಇರಬೇಕು. ಆದರೆ ಅವತ್ತು ಹಾರ್ಡ್‌ಷಿಪ್ ತೋರಿಸಿಲ್ಲ...

ಅಧ್ಯಕ್ಷರು.—ಕುಳಿತುಕೊಳ್ಳಿ, ಅವರು ಹೇಳುತ್ತಾರೆ ಕೇಳಿ. ನಿಮಗೆ ಸರ್ಕಾರದಿಂದ ಉತ್ತರ ಬೇಕೋ ಬೇಡವೋ ?

ಶ್ರೀ ಧರ್ಮಸಿಂಗ್.—ಮದ್ರಾಸ್‌ನಲ್ಲಿ ಬಿಸಿನೆಸ್ ಇದೆ......

ಅಧ್ಯಕ್ಷರು.—ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಆರ್ಥಿಕ ತೊಂದರೆ ಇದ್ದರೆ ಮೊದಲೇ ತೋರಿಸಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು.—ನಿಮ್ಮ ತಲೆಯಲ್ಲಿ ಇದ್ದುದನ್ನೇ ಹೇಳುತ್ತಿದ್ದೀರಿ. ಅವರು ಏನು ಹೇಳುತ್ತಾರೆ ಕೇಳಿ. ಈಗ ನಿಮ್ಮ ಆರ್ಗ್ಯುಮೆಂಟ್ ಆಗಿದೆ, ಅವರದ್ದನ್ನು ಕೇಳಿ.

ಶ್ರೀ ಎಂ. ಚಂದ್ರಶೇಖರ್.—ಸರ್ಟಿಫಿಕೇಟ್ ಡೇಟ್ ನೋಡಿ, 12-2-87 ಇದೆ. ವಿನಾಯ್ತಿ ಕೊಟ್ಟಿದ್ದು 6-3-87ರಲ್ಲಿ. 12ರಂದು ಸರ್ಟಿಫಿಕೇಟ್ ಕೊಟ್ಟಿದ್ದೇವೆ.

(ಮಾನ್ಯ ಧರ್ಮಸಿಂಗರು ಮಾತನಾಡಲು ನಿಂತರು)

ಅಧ್ಯಕ್ಷರು.—ಮಾನ್ಯ ಧರ್ಮಸಿಂಗರೇ, ನಿಮ್ಮ ಚರ್ಚೆಗೆ ಉತ್ತರ ಬೇಕೇ ಬೇಡವೇ ? ನಿಮ್ಮ ಮಾತನ್ನು ಅವರು ಕೇಳಿದ್ದಾರೆ, ಈಗ ಅವರು ಹೇಳುವುದನ್ನು ಕೇಳಿ.

SRI DHARAM SINGH.—The Joint Secretary has written regarding first application.

ಶ್ರೀ ಎಂ. ಚಂದ್ರಶೇಖರ್.—ಅದು ಕೋರ್ಟಿನಲ್ಲಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕೋರ್ಟಿನಲ್ಲಿ ಏನಿದೆ ?...

(ಗೊಂದಲ)

ಅಧ್ಯಕ್ಷರು.—ಮಾನ್ಯ ಖರ್ಗೆಯವರೆ, ಕುಳಿತುಕೊಳ್ಳಿ. ಈ ತರಹ ಆದರೆ ಸಭೆಯನ್ನು ಮುಂದೂಡಬೇಕಾಗುತ್ತದೆ.

SRI MALLIKARJUNA M. KHARGE.—We are questioning the way in which they have dealt with the file.

SRI R. V. DESHPANDE.—Have you not, as a Minister, overruled anything ?

SRI MALLIKARJUNA M. KHARGE.—That itself has created suspicion.

ಅಧ್ಯಕ್ಷರು.—ನಿಮಗೆ ಉತ್ತರ ಬೇಕೋ ಬೇಡವೋ ?

ಶ್ರೀ ಆರ್. ಎಲ್. ಜಾಲಪ್ಪ.—ಅವರು ಸತ್ಯಹರಿಶ್ಚಂದ್ರರಿದ್ದರೆ ಹೇಳುವುದಕ್ಕೆ ಅವಕಾಶ ಕೊಡಲಿ, ಈ ರೀತಿ ಮಧ್ಯೆ ಮಧ್ಯೆ ಎದ್ದು ನಿಲ್ಲುವುದು ಸಭ್ಯತನ ಅಲ್ಲ.

ಅಧ್ಯಕ್ಷರು.—ಈ ಕಡೆ ಕುಳಿತಿರತಕ್ಕವರು ಬಹು ಮಂದಿ ಮಾಜಿ ಮಂತ್ರಿಗಳು ಮತ್ತು ಮಾಜಿ ಸ್ಪೀಕರ್ ಇದ್ದೀರಿ. ಸಾಕಷ್ಟು ಅನುಭವ ಇದೆ. ಆ ಕಡೆ ಕುಳಿತು ಸದನವನ್ನು ನಡೆಸಿದ್ದೀರಿ. ಅವರು ಉತ್ತರ ಕೊಡಲಿ. ನಿಮಗೆ ಚರ್ಚೆಗೆ ಉತ್ತರ ಬೇಕೋ ಬೇಡವೋ ? ದಯವಿಟ್ಟು ಕುಳಿತುಕೊಂಡು ಸಹನೆಯಿಂದ ಕೇಳಿ.

ಶ್ರೀ ಎಂ. ಚಂದ್ರಶೇಖರ್.—16169 ಚದರ ಮೀಟರ್‌ಗಳಿಗೆ ಹಿಂದೆಯೇ ಕೈಗಾರಿಕೆಗೋಸ್ಕರ ವಿನಾಯಿತಿ ಕೊಟ್ಟಿದ್ದೆವು. ವಸತಿಗೋಸ್ಕರ ಅವರು ಕೇಳಿದ ಬೇಡಿಕೆ ಮೊದಲನೆಯದಾಗಿ ಅವರು ಸಂಕಷ್ಟದಲ್ಲಿದ್ದೇವೆ ಎಂದು. ಎರಡನೆಯದು ಸರ್ಕಾರದ ಉದ್ದೇಶ ಗ್ರೂಪ್ ಹೌಸಿಂಗ್ ಆಗಬೇಕೆಂದು 6-3-87ರಲ್ಲಿ ಅವರಿಗೆ ಅನುಮತಿ ನೀಡಲಾಯಿತು.

ಅಧ್ಯಕ್ಷರು.—ಕುಳಿತುಕೊಂಡು ಏಕೆ ಕಾಮೆಂಟ್ರಿ ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಜವಾಬ್ದಾರಿ ಮನುಷ್ಯರಾದವರು ಅವರು ಕೊಟ್ಟಿದ್ದನ್ನು ಒಪ್ಪಿಕೊಳ್ಳಬೇಡಿ ಎಂದರೆ...

ಶ್ರೀ ಧರ್ಮಸಿಂಗ್.—213 ಲಕ್ಷ ರೂಪಾಯಿ ಬೆಲೆಯ ಆಸ್ತಿ 92 ಲಕ್ಷ ರೂಪಾಯಿಗೆ ಏಕೆ ರಿಜಿಸ್ಟರ್ ಆಯಿತು ? ಟ್ರಾನ್‌ಸ್ಯಾಕ್ಷನ್ ಆಗಿರುವುದು 92 ಲಕ್ಷ ರೂಪಾಯಿಗಳಿಗೆ ಮಾತ್ರ.

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಹೇಳಲಿ ಉತ್ತರವನ್ನು.

ಶ್ರೀ ಎಂ. ಚಂದ್ರಶೇಖರ್.—ಆಕ್ಟ್‌ಗೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದಾರೆ. ಅಂಡರ್ ವ್ಯಾಲ್ಯುಯೇಷನ್ ಆಗಿದೆ ಎಂಬುದಾಗಿ ಏನು ಹೇಳಿದ್ದೀರಿ, ಅದರ ಬಗ್ಗೆ ಉತ್ತರ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ನೇರವಾಗಿ ಸರ್ಕಾರವನ್ನು ಕೇಳುತ್ತೇವೆ. ಇವರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಿ. ಏಕೆಂದರೆ ಇದು ಅವರಿಗೆ ಸಂಬಂಧಪಟ್ಟದ್ದು.

ಶ್ರೀ ಎಂ. ಚಂದ್ರಶೇಖರ್.—ಸರಿಯಾಗಿ ಮಾಡಿದ್ದೀರಿ ಎಂಬುದನ್ನು ನೀವೇ ಒಪ್ಪಿಕೊಂಡಿದ್ದೀರಿ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾರು ಹೇಳಿದರು ? ನಾವು ಅದಕ್ಕೆ ಹೇಳಿದ್ದು, ಇದು ಸರಿಯೋ-ತಪ್ಪೋ ಎಂಬುದರ ಬಗ್ಗೆ ವಿಶ್ವಾಸವನ್ನು ಮೂಡಿಸುವ ಉದ್ದೇಶದಿಂದ ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಸಬ್ ರಿಜಿಸ್ಟ್ರಾರ್ ಯಾರು ತಪ್ಪು ಮಾಡಿದ್ದಾರೋ ಅವರನ್ನು ಸಸ್‌ಪೆಂಡ್ ಮಾಡಲಾಗಿದೆ, ಅವರು ಅಂಡರ್ ವ್ಯಾಲ್ಯುಯೇಷನ್ ಮಾಡಿದ್ದಕ್ಕೆ ಸಸ್‌ಪೆಂಡ್ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸಸ್‌ಪೆನ್ಷನ್ ಅನ್ನು ಒಪ್ಪಿಕೊಂಡಿದ್ದೇವೆ. ಅಂದಾಕ್ಷಣ ಎಲ್ಲಾ ವಿಚಾರವನ್ನು ಒಪ್ಪಿಕೊಂಡಿಲ್ಲ.

ಶ್ರೀ ಎಂ. ಚಂದ್ರಶೇಖರ್.—ನಮ್ಮ ಅಭಿಪ್ರಾಯವನ್ನು ಸ್ವಲ್ಪ ತಿಳಿದುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಆ ರೀತಿಯಾಗಿದ್ದರೆ ಸೆಪ್ಟೆಂಬರ್ 30ನೇ ತಾರೀಖೇ ಏಕೆ ರಿಜಿಸ್ಟರ್ ಮಾಡಿದ್ದು ?

ಶ್ರೀ ಎಂ. ಚಂದ್ರಶೇಖರ್.—ದೇಶದಲ್ಲೆಲ್ಲಾ ಇದೆ. ಇಂತಹದ್ದು.

ಶ್ರೀ ಎಸ್. ಬಂಗಾರಪ್ಪ.—ಬೇರೆ ಎಲ್ಲೋ ಆಗಿದೆ ಎಂಬುದಾಗಿ ನೀವೂ ಮಾಡುತ್ತೀರಾ ?

ಅಧ್ಯಕ್ಷರು.—ನೀವು ಹೇಳಿದ್ದನ್ನು ರೆಕಾರ್ಡ್ ಮಾಡಬಾರದು ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಏಕೆ ಹೇಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ನಿಮಗೆ ಉತ್ತರ ಹೇಳಿ ನಾನು ಕನ್ವಿನ್ಸ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ನೀವು ಈ ರೀತಿ ಅವರಿಗೆ ಅಡ್ಡಿ ಮಾಡುವುದಾದರೆ, ನೀವು ಹೇಳುವುದನ್ನು ರೆಕಾರ್ಡ್ ಮಾಡುವುದು ಬೇಡ ಎಂಬುದಾಗಿ ಹೇಳಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಕಾಯಿದೆ ಉಲ್ಲಂಘನೆಯಾಗಿಲ್ಲ ಅಂತ ಹೇಳಿದ್ದೇನೆ. ಆಮೇಲೆ ಮತ್ತೊಂದು ಅಂಶ ಉಳಿದಂತಹ 3,444 ಸ್ಕೇರ್ ಮೀಟರ್‌ಗೂ ವಿನಾಯಿತಿ ಕೊಡಬೇಕೆಂದೂ, ಅದೂ ಕೂಡ ಸಂಕಷ್ಟವನ್ನು ಪರಿಹಾರ ಮಾಡಿಗೊಳ್ಳುವ ಸಲುವಾಗಿ, 213 ಲಕ್ಷ ರೂಪಾಯಿಗಳ ಸಾಲ ಇದೆ, ಇದನ್ನು ಮಾಡಿ ಆ ಸಾಲವನ್ನು ತೀರಿಸಿಕೊಳ್ಳಬೇಕೆಂದು ಅವರು ಕೊಟ್ಟಂತಹ ಮನವಿಯಲ್ಲಿ ನಮೂದು ಮಾಡಿದ್ದಾರೆ. ಅದರ ಬಗ್ಗೆ ವಿವರಗಳು ಇದೇ ಕಡತದಲ್ಲಿ ಉಂಟು. ಅದರ ಪ್ರಕಾರ ಪರವಾನಿಗೆಯನ್ನು ಕೊಡಬೇಕೆಂದೂ, ಇದರಲ್ಲಿ ಗ್ರೂಪ್ ಹೌಸಿಂಗ್ ಮಾಡುವಂತಹವರಿಗೆ ರಿಯಾಯಿತಿಯನ್ನು ಕೊಡಬೇಕೆಂಬುದು ಕಾನೂನಿನಲ್ಲೇ ಇದೆ. ಅದೇ ಕಾಯಿದೆಗನುಗುಣವಾಗಿ ನಾವು ಕೊಟ್ಟಿದ್ದೇವೆಯೋ ಹೊರತು ಮತ್ತ್ಯಾವುದೇ ಕಾರಣದಿಂದ ಅಲ್ಲ ಎಂಬುದನ್ನು ಹೇಳಬಯಸುತ್ತೇನೆ. ಈ ರೀತಿ 3,444 ಚದರ ಮೀಟರ್ ಸೇರಿದಂತೆ ಸುಮಾರು 19,638 ಚದರ ಮೀಟರ್‌ನ್ನು ಈ ಎರಡೂ ಆಜ್ಞೆಗಳ ಮುಖಾಂತರ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಗ್ರೂಪ್ ಹೌಸಿಂಗ್ ಮಾಡಲು ಅದರಲ್ಲಿ ಕಂಡೀಷನ್ ಕೂಡ ಹಾಕಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸಸ್ಪೆಂಡ್ ಮಾಡಿದ್ದೀರಿ. ಆ ವಿಚಾರ ಅಲ್ಲ. ಆದರೆ what we are asking is the way in which you have done. Whether you are going to agree for CBI enquiry or not. Income tax violation is there.

ಶ್ರೀ ಎಂ. ಚಂದ್ರಶೇಖರ್.—ಅದರ ಬಗ್ಗೆ ಕೋರ್ಟಿನಲ್ಲಿ ಚರ್ಚೆಯಾಗಲಿ, ಬೇರೆ ಹೊರಗಡೆ ಚರ್ಚೆಯಾಗಲಿ. ಆಮೇಲೆ ನೋಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗ ತಮ್ಮನ್ನು ನೇರವಾಗಿ ಕೇಳುತ್ತೇವೆ. ಇದನ್ನು ಸಿ.ಬಿ.ಐ.ಗೆ ವಿಚಾರಣೆ ಮಾಡಲು ವಹಿಸುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಅಲ್ಲಿಗೆ ಬರುತ್ತಿದ್ದೇನೆ. ತಾವು ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ರೀತಿ ನೀವು ಹೇಳುತ್ತಿರುವುದರಿಂದಲೇ, ಅದಕ್ಕೆ ನಾವು ಈ ರೀತಿ ಹೇಳಬೇಕಾಗುತ್ತದೆ. ಅದೇನೆಂದರೆ, ವಿಚಾರಣೆ ಮಾಡುವುದಕ್ಕೆ ನಿಮಗೆ ಮನಸ್ಸಿಲ್ಲ. ಲೀಗಲ್ಲಾಗಿ ಎಗ್ಸಾಮಿನೇಷನ್ ಮಾಡುತ್ತಿಲ್ಲ. ಇಲ್ಲೀಗಲ್ಲಾಗಿ ಟ್ರಾಂಜಾಕ್ಷನ್ ಆಗಿ ವ್ಯವಹಾರ ಮಾಡುವವರಿಗೆ ಸಪೋರ್ಟ್ ಮಾಡುತ್ತಿದ್ದೀರಿ. ಅದನ್ನು ನಾವು ಪ್ರತಿಭಟಿಸಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರ ಸಿ.ಬಿ.ಐ. ವಿಚಾರಣೆ ಮಾಡುವುದಕ್ಕೆ ಒಪ್ಪದಿರುವುದನ್ನು ಪ್ರತಿಭಟಿಸಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ 'ಐ' ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಚಂದ್ರಶೇಖರ್.—ಇದರ ಜೊತೆಗೆ ಹೊರಗೆ ಉಪ ಚುನಾವಣೆಯ ಫಲಿತಾಂಶ ಕೂಡ ಬರುತ್ತಿ ಇದೆ. ಇಲ್ಲಿ ಕುಳಿತುಕೊಂಡು ಅದನ್ನು ಕೇಳುವುದಕ್ಕಾಗುವುದಿಲ್ಲವೆಂದು ಹೊರಗೆ ಹೋಗುತ್ತಿದ್ದಾರೆ. ಎರಡೂ ಕಡೆ ವಿರೋಧಪಕ್ಷದವರಾದ ನಾವು ಗೆದ್ದಿದ್ದೇವೆ. ಇನ್ನೊಂದು ಕಡೆಯೂ ಗೆಲ್ಲುತ್ತೇವೆ. ಅದೂ ಕೂಡ ಅವರಿಗೆ ನಾಚಿಕೆಯಾಗಿದೆ. ಈ ವಿಚಾರದಲ್ಲಿ ವಿನಾಯಿತಿಯನ್ನು ಕಾನೂನಿಗನುಗುಣವಾಗಿ ಕೊಟ್ಟಿದ್ದೇವೆ. ಕಾಯಿದೆಯಲ್ಲಿ ಈ ಬಗ್ಗೆ ರೂಲೇ ಇದೆ. ಆದ್ದರಿಂದ ಇದರಲ್ಲಿ ಯಾವುದೇ ರೀತಿಯ ಕಾನೂನು ಉಲ್ಲಂಘನೆಯಾಗಿಲ್ಲ ಎಂಬುದು ನಮ್ಮ ಅಭಿಪ್ರಾಯ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು.

ಶ್ರೀ ಆರ್. ಎಲ್. ಜಾಲಪ್ಪ.—1983ರವರೆಗೆ ಈ ತರಹ ಎಷ್ಟು ಕೇಸುಗಳನ್ನು ಅವರ ಸರ್ಕಾರ ಇದ್ದಾಗ ಪರ್ಮಿಷನ್ ಕೊಟ್ಟಿದೆ ? ಎಷ್ಟು ಲಕ್ಷ ಮೀಟರ್ ಪರ್ಮಿಷನ್ ಕೊಟ್ಟಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಸದ್ಯಕ್ಕೆ ಆ ವಿವರ ಇಲ್ಲ. ಸಮಯ ಸಿಕ್ಕಾಗ ಅದನು ಹೇಳುವುದಕ್ಕೆ ಅವಕಾಶ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಮ್ಮ ರಾಜ್ಯದಲ್ಲಿ ೧೯೮೧-೮೨ರಲ್ಲಿ ಹಾರ್ಡ್‌ಶಿಪ್ ಗೋಸ್ಕರ ಎಷ್ಟು ಕನ್‌ವರ್ಷನ್ ಮಾಡಿಕೊಟ್ಟಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ನನ್ನ ಹತ್ತಿರ ವಿವರ ಸದ್ಯಕ್ಕೆ ಇಲ್ಲ. ಬೇರೆ ಬೇರೆ ರಾಜ್ಯಗಳಲ್ಲಿನ ವಿನಾಯಿತಿ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ವಿವರಣೆ ಕೊಟ್ಟರು. ನಾನು ಬೆಂಗಳೂರಿಗೆ ಸೀಮಿತವಾಗಿ ಹೇಳುತ್ತೇನೆ. Exemption granted under Urban Land Ceiling Act in Bangalore ender Urban Agglomeration Area. ೧೯೭೭ರಲ್ಲಿ ಅಗ್ರಿಕಲ್ಚರ್‌ಗೆ ೮, ಕೈಗಾರಿಕೆಗೆ ೪೮೦ ಕೇಸ್‌ಗಳಲ್ಲಿ ಎಕ್ಸೆಂಪ್ಷನ್ ಸಿಕ್ಕಿದೆ. ಹಾಗೂ ವಸತಿ ಹಾಗೂ ಸಂಕಷ್ಟ ಪರಿಹಾರಕ್ಕೆ ಎಕ್ಸೆಂಪ್ಷನ್ ಸಿಕ್ಕಿಲ್ಲ. ಹಾಗೆಯೇ ೧೯೭೮ರಲ್ಲಿ ಕೃಷಿಗೋಸ್ಕರವಾಗಿ ೧೧, ಕೈಗಾರಿಕೆಗಾಗಿ ೬೭, ವಸತಿಗಾಗಿ ೨೩, ಸಂಕಷ್ಟ ಪರಿಹಾರಕ್ಕಾಗಿ ೬ಕ್ಕೆ ಸಿಕ್ಕಿದೆ. ೧೯೭೯ರಲ್ಲಿ ಕೃಷಿಗೆ ೪, ಕೈಗಾರಿಕೆ ೭೪, ವಸತಿಗೆ ೨, ಸಂಕಷ್ಟ ನಿವಾರಣೆಗೆ ೧೨ಕ್ಕೆ ವಿನಾಯಿತಿ ಸಿಕ್ಕಿದೆ. ೧೯೮೦ರಲ್ಲಿ ಕೃಷಿಗೆ ೮, ಕೈಗಾರಿಕೆಗೆ ೧೨೦, ವಸತಿಗೆ ೨೪ ಹಾಗೂ ಸಂಕಷ್ಟಕ್ಕೆ ೨೭ ಪ್ರಕರಣಗಳಿಗೆ ಸಿಕ್ಕಿವೆ.

ಶ್ರೀ ಎಂ. ರಘುಪತಿ.—ಕಾಂಗ್ರೆಸ್‌ನ ಗೋಲ್ಡನ್ ಪೀರಿಯಡ್ ಇದು.

ಶ್ರೀ ಎಂ. ಚಂದ್ರಶೇಖರ್.—೧೯೮೧ರಲ್ಲಿ ಕೃಷಿಗೆ ೨೫, ಕೈಗಾರಿಕೆಗೆ ೪೫, ವಸತಿಗೆ ೨೭ ಹಾಗೂ ಸಂಕಷ್ಟಕ್ಕೆ ೨೦. ಹಾಗೇ ೧೯೮೨ರಲ್ಲಿ ಕೃಷಿಗೆ ೧೩, ಕೈಗಾರಿಕೆಗೆ ೧೫೫, ವಸತಿಗೆ ೨೧, ಹಾಗೂ ಸಂಕಷ್ಟಕ್ಕೆ ೧೦ ಪ್ರಕರಣಗಳಿಗೆ ವಿನಾಯಿತಿ ಸಿಕ್ಕಿದೆ. ಅಧ್ಯಕ್ಷರೇ, ಇದರಲ್ಲಿ ವಿನಾಯಿತಿ ಕೊಡುವುದರಲ್ಲಿ ಏನೂ ತಪ್ಪು ಇಲ್ಲ. ಕಾಯ್ದೆಯಲ್ಲಿ ಇದಕ್ಕೆ ಅವಕಾಶ ಇದೆ. ಇವತ್ತು ಆತನಲ್ಲಿ ಜಮೀನು ಇರುತ್ತದೆ. ಆ ಜಮೀನುದಾರ ಇವತ್ತಿನದಿವಸ ಆ ಜಮೀನುದಾರ ಉತ್ತು ಬಿತ್ತು ಜೀವನವನ್ನು ಮಾಡುತ್ತಾ ಇರುತ್ತಾನೆ. ಸಿ. ಡಿ. ಪಿ. ಲ್ಯಾಂಡ್ ರಿವೈಸ್ ಆದಮೇಲೆ ಅರ್ಬನ್ ಲ್ಯಾಂಡ್ ಎಂದು ಕರೆಯುತ್ತೇವೆ. ಹೊಟ್ಟೆಪಾಡಿಗೆ ಅವನು ಅಲ್ಲಿ ಜಮೀನು ಮಾಡುತ್ತಿರುತ್ತಾನೆ. ಆದ್ದರಿಂದ ಎಲ್ಲಿಯವರೆಗೆ ನಾನು ಕೃಷಿ ಮಾಡುತ್ತಿರುತ್ತೇನೋ ಅಲ್ಲಿಯವರೆಗೆ ವಿನಾಯಿತಿ ಕೊಡಿ, ಯಾವಾಗ ಕೃಷಿ ಮಾಡುವುದನ್ನು ಬಿಡುತ್ತೇನೆ ಆಗ ನಗರಕ್ಕೆ ಉಪಯೋಗ ಮಾಡಿ ಎಂದು ಹೇಳಿದಾಗ ಕಾಯ್ದೆಯಲ್ಲಿ ಅದಕ್ಕೆ ಅವಕಾಶ ಇದೆ. ಅದನ್ನು ಕೊಡಬಹುದು. ಅದೇ ರೀತಿಯಲ್ಲಿ ಗ್ರೂಪ್ ಹೌಸಿಂಗ್, ನಗರ ಪ್ರದೇಶದಲ್ಲಿರುವ ವಸತಿ ಗೋಸ್ಕರ ಬೇಕಾಗುತ್ತದೆ. ವ್ಯವಸಾಯಗಾರನಾಗಿ ಆಸ್ತಿಯನ್ನು ಸಂಪಾದನೆ ಮಾಡದೇ ಇರುವ ವ್ಯಕ್ತಿಗೆ ಕಷ್ಟ ಬಂದಾಗ, ತೊಂದರೆಯಾದಾಗ ಸಾಲಸೋಲ ಹೆಚ್ಚಾಗಿದ್ದನ್ನು ನಿವಾರಣೆ ಮಾಡಿಕೊಳ್ಳಬೇಕಾದರೆ ತನ್ನ ಜಮೀನನ್ನು ಮಾರಿ ನಿವಾರಣೆ ಮಾಡಿಕೊಳ್ಳುವುದು ಇದೆ. ಇದಕ್ಕೆ ಅವಕಾಶ ಇಲ್ಲದಿದ್ದರೆ ಆತ ಎಲ್ಲಿಗೆ ಹೋಗಬೇಕು ? ಆತ ಜೈಲಿಗೆ ಹೋಗಬೇಕಷ್ಟೇ. ಅವರು ಹಾರ್ಡ್‌ಶಿಪ್ ಎಂದು ಹೇಳಿ ಅರ್ಜಿ ಹಾಕಿಕೊಳ್ಳುತ್ತಾನೆ. ಕಾನೂನು ಬದ್ಧವಾದ ವಿನಾಯಿತಿ ಇದು. ವಿನಾಯಿತಿಯನ್ನು ನೀಡುವುದರಲ್ಲಾಗಲಿ, ಅಥವಾ ಸಂಕಷ್ಟಗಳನ್ನು ನಿವಾರಣೆ ಮಾಡುವ ಉದ್ದೇಶಕ್ಕಾಗಿ ಪರವಾನಗೆಯನ್ನು ಕೊಡುವುದಕ್ಕೆ ಕಾನೂನಿನಲ್ಲೇ ಅವಕಾಶ ಇರುವುದರಿಂದ ಆ ಪ್ರಕಾರ ಅವರಿಗೆ ಪರವಾನಗೆಯನ್ನು

ಕೊಟ್ಟಿರುವುದರಲ್ಲಿ ತಪ್ಪೇನೂ ಇಲ್ಲ ಅಂತ ಹೇಳುತ್ತಿದ್ದೇನೆ. ಇದನ್ನು ನನ್ನ ಇಲಾಖೆಯ ಬೇಡಿಕೆ ಸಮಯದಲ್ಲೂ ಹೇಳಿದ್ದೇನೆ. ಕರ್ನಾಟಕದಲ್ಲಿ ನಗರ ಭೂಮಿತಿ ಕಾಯಿದೆ ಯಾವರೀತಿ ಅನ್ವಯ ವಾಗುತ್ತದೆ? ಬೇರೆ ರಾಜ್ಯಗಳಲ್ಲಿ ಯಾವ ರೀತಿ ಅನ್ವಯವಾಗುತ್ತಿದೆ ಅಂತ ಹೇಳಿ ಈಗಾಗಲೇ Charles Correa ಅವರ ನಾಯಕತ್ವದಲ್ಲಿ ಹೋದ ವರ್ಷ ಅಂದರೆ ೧೯೮೭ರಲ್ಲಿ ಇನ್ನು ೧೦ ವರ್ಷಗಳು ಆದ ಮೇಲೆ ಯಾವ ರೀತಿ ಜಾರಿಯಲ್ಲಿ ಬರುತ್ತದೆ ಈ ದೇಶದಲ್ಲಿ ಎಂಬುದನ್ನು ಸಮೀಕ್ಷೆ ಮಾಡುವ ಸಲುವಾಗಿ ಸಮಿತಿಯೊಂದನ್ನು ನೇಮಿಸಲಾಗಿದ್ದು, ಆ ವರದಿಯ ಪರಿಣಾಮ ಏನು ಎಂಬುದನ್ನು ನಾನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಕರ್ನಾಟಕದಲ್ಲಿ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡಿರತಕ್ಕಂತಹದ್ದು ೪೯.೨೧ ಹೆಕ್ಟೇರ್ ಅದೇ ರೀತಿ ಗುಜರಾತ್ ಅದೂ ಕೂಡ ನಮ್ಮ ಹಾಗೆ ಮುಂದುವರಿದ ರಾಜ್ಯ. ಅಲ್ಲಿ ಈ ರೀತಿಯಾಗಿ ವಶಪಡಿಸಿಕೊಂಡಂತಹ ಜಮೀನು ೧.೪೪ ಹೆಕ್ಟೇರ್ ಅದೇ ರೀತಿ ಮಹಾರಾಷ್ಟ್ರದಲ್ಲಿ ೮೭೭ ಹೆಕ್ಟೇರ್ ಜಮೀನನ್ನು ವಶಪಡಿಸಿ ಕೊಂಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ೧೯.೨೩ ಹೆಕ್ಟೇರ್ ಭೂಮಿಯನ್ನು ವಶಪಡಿಸಿಕೊಂಡಿದೆ. ದೆಹಲಿಯ ಯಾವ ಪ್ರದೇಶದಲ್ಲಿ ಇವತ್ತು ಬೆಂಗಳೂರು ನಗರದಲ್ಲಿರತಕ್ಕ ಜಮೀನಿಗಿಂತ ೧೦ ಪಟ್ಟು ಹೆಚ್ಚು ಬೆಲೆ ಇದೆಯೋ, ಯಾವ ಪ್ರದೇಶ ಕೇಂದ್ರ ಸರ್ಕಾರ ಕೇಂದ್ರವಾಗಿದೆಯೋ, ಯಾರು ಈ ಕಾಯಿದೆಯನ್ನು ಹೊರಡಿಸಿದ್ದಾರೋ ಅವರು ವಶಪಡಿಸಿ ಕೊಂಡಿರತಕ್ಕಂತಹದ್ದು ೧.೯೯ ಹೆಕ್ಟೇರ್. ಅದೇ ರೀತಿ ಉತ್ತರ ಪ್ರದೇಶ ನಮಗಿಂತ ಬಹಳ ದೊಡ್ಡ ರಾಜ್ಯ. ಅಲ್ಲಿ ೧೨೩೮ ಹೆಕ್ಟೇರ್ ಭೂಮಿಯನ್ನು ವಶ ಪಡಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ನೋಡಿದಾಗ ಕರ್ನಾಟಕದಲ್ಲಿ ಈ ಕಾಯಿದೆ ನ್ಯಾಯವಾಗಿ ಹಾಗೂ ಸಮರ್ಪಕವಾಗಿ ಜಾಸ್ತಿಯಲ್ಲಿದೆ. ಇದರಿಂದ ಸಾಕಷ್ಟು ಪರಿಣಾಮ ಉಂಟಾಗಿದೆ ಎಂಬುದನ್ನು ಹೇಳು ತ್ತಿದ್ದೇನೆ. ಬೇರೆ ರಾಜ್ಯಗಳನ್ನು ಹೋಲಿಸಿ ನೋಡಿದಾಗ ನಮ್ಮಲ್ಲಿ ಕಾನೂನನ್ನು ಸರಿಯಾಗಿ ಜಾರಿಗೆ ತರುತ್ತಿದ್ದೇವೆ. ಸರಿಯಾಗಿ ಜಾರಿಯಾಗುತ್ತಿದೆ ಎಂಬುದು ಇದರಿಂದ ಅರ್ಥವಾಗುತ್ತಿದೆ. ಆದ್ದರಿಂದ ಯಾವುದೇ ಒಂದು ಪ್ರಕರಣದಲ್ಲಿ ನಾವು ಪರವಾನಗಿಯನ್ನು ಕೊಡುವುದಕ್ಕಿಂತ ಮುಂಚಿತ ವಾಗಿ ಈ ಎಲ್ಲಾ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಮಾಡಿದ್ದೇವೆಯೇ ಹೊರತು, ಕಾನೂನನ್ನು ಉಲ್ಲಂಘನೆ ಮಾಡಿ ಕೊಡುವ ಉದ್ದೇಶ ಇಲ್ಲವೇ ಇಲ್ಲ. ಆ ರೀತಿ ಕೊಟ್ಟೂ ಇಲ್ಲ. ಆದ್ದರಿಂದ ಮಾನ್ಯ ಮಿತ್ರರು ಬೇರೆ ಉದ್ದೇಶವನ್ನು ಇಟ್ಟು ಕೊಂಡು ಪರವಾನಗೆಯನ್ನು ಕೊಟ್ಟಿದ್ದಾರೆ ಎಂಬ ಅಭಿಪ್ರಾಯಕ್ಕೆ ಬರುವುದು ಸರಿಯಲ್ಲ. ಆದ್ದರಿಂದ ಇವತ್ತು ಏನು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು, ಅವರು ಇಲ್ಲದಿದ್ದರೂ ಕೂಡ ಈ ಮನೆಯಲ್ಲಿರುವ ಎಲ್ಲ ಮಾನ್ಯ ಸದಸ್ಯರಿಗೂ ಹಾಗೂ ತಮಗೂ ಮನವರಿಕೆಯಾಗುವ ರೀತಿಯಲ್ಲಿ ಹೇಳಿದ್ದೇನೆ. ಇದರಲ್ಲಿ ಯಾವುದೇ ರೀತಿಯ ಕಾನೂನು ಉಲ್ಲಂಘನೆಯಾಗಿಲ್ಲ, ಕಾನೂನಿಗನುಗುಣವಾಗಿ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂಬ ಅಂಶವನ್ನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ವಿಚಾರ ಹೇಳುವಾಗ ಮಾನ್ಯ ಸದಸ್ಯರು ಎಲ್ಲರೂ ಎದ್ದು ಹೋಗಿದ್ದಾರೆ ಸತ್ಯ ಎಷ್ಟು ಕಠೋರ ಅಂದರೆ ಅದನ್ನು ಕೇಳುವುದಕ್ಕೂ ಆಗುವುದಿಲ್ಲ. ಸತ್ಯ ಹೊರಗೆ ಬರುವಾಗ ಅದನ್ನು ಕೇಳುವ ಸಹನೆ ಅವರಲ್ಲಿಲ್ಲ. ಇದು ಕರ್ನಾಟಕ ರಾಜ್ಯದ ಜನತೆಗೆ ಗೊತ್ತಾಗುತ್ತದೆ. ಸತ್ಯ ಹೊರಗೆ ಬರುತ್ತಿರುವುದನ್ನು ಕೇಳುವುದಕ್ಕೂ ಅವರಿಗೆ ಸೌಜನ್ಯ ಇಲ್ಲ. ಸತ್ಯ ಎಷ್ಟು ಕಠೋರ ಎಂಬುದು ಇದರಿಂದ ಅರ್ಥವಾಗುತ್ತದೆ. ಇದನ್ನು ಕರ್ನಾಟಕ ಜನತೆ ನೋಡು ತ್ತಾರೆ ಎಂದು ಹೇಳಿ ನನ್ನ ಉತ್ತರವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ಈಗ ಸಭೆಯು ಎದ್ದು ನಾಳೆ ಬೆಳಗ್ಗೆ ೧೦ ಗಂಟೆಗೆ ಪುನಃ ಸೇರುವುದು.

(ಸದನವು ೮-೨೦ ಗಂಟೆಗೆ ಮುಕ್ತಾಯವಾಗಿ, ಮರುದಿನ ದಿನಾಂಕ ೧೮-೬-೮೮ರ ಶನಿವಾರ ಬೆಳಗ್ಗೆ ೧೦-೦೦ ಗಂಟೆಗೆ ಪುನಃ ಸಮಾವೇಶ ಗೊಳ್ಳಲು ತೀರ್ಮಾನಿಸಿತು)